ರೂ. ಗಳನ್ನು ಕೊಟ್ಟಿದೆ, ೮೫ ಎಕರೆ ಜಮೀನು ಕೊಟ್ಟಿದೆ. ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟಿದೆ. ಹೀಗಿರುವಾಗ ರಾಜ್ಯ ಸರ್ಕಾರದ ಜವಾಬ್ದಾರಿ ಇಲ್ಲವೆಂದು ಹೇಳುವುದು ಸರಿಯಲ್ಲ ; ತಾವು ಈ ರೀತಿ ಹೇಳಿದರೆ ಇಲ್ಲಿ ತಯಾರಾಗುವಂತಹ ಮ್ಯಾನೇಜರ್ಸ್ ನಮ್ಮ ರಾಜ್ಯದಲ್ಲಿ ಹಾಗೂ ಬೇರೆ ರಾಜ್ಯಗಳಿಗೆ ಹೋಗಿ ಎಂತಹವರನ್ನು ತಯಾರು ಮಾಡುತ್ತಾರೆಂಬುದನ್ನು ನೀವೇ ಅರ್ಥ ಮಾಡಿಕೊಳ್ಳಬಹುದು ; ಆದ್ದರಿಂದ ತಾವು ಇಂತಹ ಉತ್ತರ ಕೊಡುವುದು ಸರಿಯಲ್ಲ ;

SRI B. SUBBAYYA SHETTY.—What say we have got in this? Because the institution is situated in our State, the State Government is helping them.

Budget estimates for 1979-80 Demands for grants.

(Demand No. 9, 10 and 12 (Debates continued)

†ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಗಂಡಸಿ) —ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯಾ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರತಕ್ಕ ಬೇಡಿಕೆಗೆ ಬೆಂಬಲ ಕೊಡುತ್ತ ಒಂದೆರಡು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ. ಈ ವಿದ್ಯಾ ಇಲಾಖೆ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುತ್ತಿರತಕ್ಕದ್ದನ್ನು ನೋಡಿದರೆ ಇಡೀ ಭಾರತದೇಶದಲ್ಲಿಯೇ ಬೇರೆ ಯಾವುದೇ ರಾಜ್ಯದವರು ಮಾಡದೇ ಇರತಕ್ಕ ಪ್ರಮಾಣದಲ್ಲಿ ವಿದ್ಯಾಭ್ಯಾಸಕ್ಕಾಗಿ ಹಣವನ್ನು ಒದಗಿಸಿದ್ದೇವೆ. ಕಾಮಗಾರಿ ಇಲಾಖೆಯನ್ನು ಬಿಟ್ಟರೆ, ವಿದ್ಯಾ ಇಲಾಖೆ ಹಣಕಾಸಿನ ಉಪಯೋಗದ ದೃಷ್ಟಿಯಿಂದ ಈ ಇಲಾಖೆಯು ಬೆಳವಣಿಗೆಯ ಗಾತ್ರದ ದೃಷ್ಟಿಯಿಂದ ಬಹಳ ಅಗತ್ಯವಾದ ಇಲಾಖೆ ಇದು. ಈ ವಿದ್ಯಾ ಇಲಾಖೆಗೆ ಸಂಬಂಧಪಟ್ಟ ವಿಷಯವನ್ನು ಮಾತನಾಡುವಾಗ ಈ ಕರ್ನಾಟಕದಲ್ಲಿ ಇರತಕ್ಕ ಒಂದೆರಡು ವಿಶಿಷ್ಟ ಅಂಶಗಳನ್ನು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕು. ವಿದ್ಯಾರ್ಥಿಗಳನ್ನು ಮತ್ತು ಉಪಾಧ್ಯಾಯರುಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಅಪಾರವಾದ ಸುಧಾರಣೆಗಳನ್ನು ಮಾಡಿದೆ. ವಿದ್ಯಾರ್ಥಿವೇತನಗಳನ್ನು ಕೊಡುತ್ತಿದ್ದಾರೆ. ಬಡವರಿಗೆ ಹಿಂದುಳಿದವರಿಗೆ ಆರ್ಥಿಕವಾಗಿ ಹಿಂದುಳಿದವರಿಗೆ ಶುಲ್ಕವನ್ನು ಮನ್ನಾ ಮಾಡಿದ್ದಾರೆ. ವಿದ್ಯಾರ್ಥಿನಿಲಯಗಳನ್ನು ಕಟ್ಟಿಸುವ ಕಾರ್ಯವನ್ನು ವಿಶೇಷ ಪ್ರಮಾಣದಲ್ಲಿ ಮಾಡಿದ್ದಾರೆ. ವಿದ್ಯಾರ್ಥಿಗಳ ದೈಹಿಕ ಬೆಳವಣಿಗೆಗಾಗಿ ಯುವಜನ ಇಲಾಖೆಯನ್ನು ಮಾಡಿ ಅವರ ಆಟಪಾಠಗಳಿಗೆ ಬೆಂಬಲ ಕೊಡತಕ್ಕ ಕೆಲಸವನ್ನು ಮಾಡಿದ್ದಾರೆ. ಇದಕ್ಕೆಲ್ಲಾ ಹೆಚ್ಚಾಗಿ. ಗಂಟಲಲ್ಲಿ ಶಕ್ತಿ ಇರತಕ್ಕ ಉಪಾಧ್ಯಾಯರಿಗೆ ನೇರವಾಗಿ ಸಂಬಳವನ್ನು ಕೊಡತಕ್ಕ ವ್ಯವಸ್ಥೆ ಮಾಡಿದೆ. ಇಂತಹ ಕೆಲವು ವಿಶಿಷ್ಟವಾದ ಅಂಶಗಳನ್ನು ಪಕ್ಷಭೇದ ಇಲ್ಲದೆ ಮಾಡಿ ಪ್ರಶಂಸೆಗೆ ಪಾತ್ರರಾಗಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಈ ವಿದ್ಯಾಸಂಸ್ಥೆ ಗಾತ್ರದ ದೃಷ್ಟಿಯಿಂದಲೂ ಕೂಡ ಬಹಳ ಹೆಚ್ಚಿನ ಮಹತ್ವವನ್ನು ಪಡೆದಿದೆ. ೩೪.೦೦೦ ಪ್ರೈಮರಿ ಶಾಲೆಗಳಿವೆ. ೨೬೮ ಕಾಲೇಜುಗಳಿವೆ. ಮತ್ತು ಸುಮಾರು ೫೦೦ ಜೂನಿಯರ್ ಕಾಲೇಜುಗಳು ಇವೆ. ಇವುಗಳಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ಲಕ್ಷ ಗಟ್ಟಲೆ ಇವೆ. ಈ ಪ್ರಮಾಣದಲ್ಲಿ ವಿದ್ಯಾಸಂಸ್ಥೆಗಳ ಪ್ರಮಾಣ ಮತ್ತು ವಿದ್ಯಾರ್ಥಿಗಳ ಪ್ರಮಾಣ ವರ್ಷ ವರ್ಷ ಬೆಳೆಯುತ್ತಿದೆಯೇ ವಿನಹ ಕಡಿಮೆಯಾಗುವುದಿಲ್ಲ ಎಂಬುದನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಈ ಗಾತ್ರ ದೊಡ್ಡದಿರುವಂತೆ ವಿದ್ಯೆಯ ಗುಣಮಟ್ಟವೂ ದೊಡ್ಡದಾಗಿದೆಯೆಂದು ನಾನು ಅಂದುಕೊಂಡಿದ್ದೇನೆ. ೨೦–೩೦ ವರ್ಷಗಳ ಹಿಂದೆ ಯಾವ ಪ್ರಮಾಣದಲ್ಲಿ ಯಾವ ಸಂಖ್ಯೆಯಲ್ಲಿ ಪ್ರೈಮರಿ ಸ್ಕೂಲುಗಳು, ಮಿಡಲ್ ಸ್ಕೂಲು ಹಾಗೂ ಹೈಸ್ಕೂಲುಗಳಲ್ಲಿ ಏನು ಸ್ಟ್ಯಾಂಡರ್ಡ್ ಇರುತ್ತಿತ್ತೋ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಒಂದು ವಿದ್ಯಾಭ್ಯಾಸ ಮಕ್ಕಳಿಗೆ ಈಗ ದೊರೆಯುತ್ತಿದೆ. ಕೆಲವು ಅಂಶಗಳಲ್ಲಿ ದೋಷವಿರಬಹುದೆಂದು ಹೇಳುತ್ತೇನೆ ಆದರೆ ಸ್ಟ್ಯಾಂಡರ್ಡ್ ಪ್ರಶ್ನೆಯಿಂದ ಹೇಳುವುದಾದರೆ ಈಗಿನ ಮಕ್ಕಳಿಗೆ ದೊರೆಯುತಕ್ಕ ವಿದ್ಯಾಭ್ಯಾಸದಲ್ಲಿನ ಗುಣಮಟ್ಟದಲ್ಲೂ ಕೂಡ ಶ್ರೇಷ್ಠವಾಗಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ವಿಷಯದ ಬಗ್ಗೆ ಚರ್ಚೆ ಮಾಡುವಾಗ ಈಗತಾನೇ ಕೇಂದ್ರ ಸರ್ಕಾರದವರು ಈ ವಿದ್ಯಾಭ್ಯಾಸದ ಬಗ್ಗೆ ಘೋಷಣೆಯನ್ನು ಪ್ರಕಟಣೆ ಮಾಡಿದ್ದಾರೆ. ಅದರಲ್ಲಿ ಹೇಳಿರತಕ್ಕ ಅಂಶ ಮೆಚ್ಚಿಗೆಗೆ ಪಾತ್ರವಾದುದು. ಮತ್ತು ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಕೇಂದ್ರ ಸರ್ಕಾರದಲ್ಲಿ ಏನು ಯೋಜನೆಗಳನ್ನು

ಹೇಳಿದ್ದಾರೋ, ಘೋಷಣೆಗಳನ್ನು ಮಾಡಿದ್ದಾರೋ ಅದನು ಮೂಲಭೂತವಾಗಿ ಅನುಸರಿಸಿ ಮಾಡುತ್ತಾ ಬಂದಿದೆ, ಮುಖ್ಯವಾಗಿ ಭಾಷಾ ವಿಚಾರದಲ್ಲಿ ಕೇಂದ್ರ ಸರ್ಕಾದದರು ತ್ರಿಭಾಷಾ ಸೂತ್ರವನ್ನು ಅನುಸರಿಸಬೇಕೆಂದು ಹೇಳುತ್ತಿದ್ದಾರೆ. ಕರ್ನಾಟಕದಲ್ಲೂ ಸಹಾ ತ್ರಿಭಾಷಾ ಸೂತ್ರವನ್ನು ಅನುಸರಿಸುತ್ತಿದ್ದಾರೆ ದುರದೃಷ್ಟವಶಾತ್ ಕರ್ನಾಟಕದಲ್ಲಿ ಸ್ವಲ್ಪ ಇಂಗ್ಲೀಷ್ ವ್ಯಾಮೋಹ ಇನ್ನೂ ಹೋಗಿಲ್ಲ ಇದಕ್ಕೆ ಕಾರಣ ತಮಿಳುನಾಡಿನ ಗಾಳಿ ಎಂದು ನಾನು ತಿಳಿದುಕೊಂಡಿದ್ದೇನೆ. ಇಡೀ ಭರತಖಂಡದಲ್ಲಿ ಇಂಗ್ಲೀಷಿನ ಉಪಯೋಗ ಬಹಳ ಕಡಿಮೆಯಾಗುತ್ತಿದೆ. ಕೇಂದ್ರ ಸರ್ಕಾರದವರು ಘೋಷಣೆ ಮಾಡಿರತಕ್ಕ ಅಂಶವನ್ನು ನೋಡಿದರೆ ಪ್ರಾಥಮಿಕ ದರ್ಜೆಯಲ್ಲೇ ಎಲ್ಲಾ ಕಡೆಯೂ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣವನ್ನು ಕೊಡಬೇಕು, ತಾಯ್‌ನುಡಿಯಲ್ಲಿಯೇ ಶಿಕ್ಷಣವನ್ನು ಕೊಡಬೇಕು. ಇತರ ಎಲ್ಲಾ ಶಿಕ್ಷಣಗಳೂ ಕೂಡ ಪ್ರಾದೇಶಿಕ ಭಾಷೆಯಲ್ಲಿಯೇ ಆಗಬೇಕೆಂದು ಘೋಷಣೆ ಮಾಡಿದ್ದಾರೆ. ನಾವು ಹರಿಹರ ಬಿಟ್ಟು ಕರ್ನಾಟಕದ ಪ್ರಾಂತ್ಯ ಬಿಟ್ಟು ಉತ್ತರಕ್ಕೆ ಹೋದರೆ ಅಲ್ಲಿ ಇಂಗ್ಲೀಷಿನ ಪ್ರಭಾವ ಕಾಣುವುದಿಲ್ಲ ರಾಷ್ಟ್ರದಲ್ಲಿ ಹರಿಯತಕ್ಕ ವಿದ್ಯಾಭ್ಯಾಸದ ಪ್ರಗತಿಯ ಪ್ರವಾಹ ಯಾವ ರೀತಿ ಹೋಗುತ್ತದೆಯೋ ಆ ರೀತಿ ನಾವು ಹೋಗದಿದ್ದರೆ ನಾವು ಪ್ರತ್ಯೇಕವಾದ ದ್ವೀಪದಲ್ಲಿ ಉಳಿದುಕೊಂಡ ಹಾಗೆ ಆಗುತ್ತದೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಅನೇಕ ಭಾಷಾ ಪ್ರೇಮಿಗಳು ಹಿಂದಿಯ ಮೇಲೆ ಆಗ್ರಹ ತೋರಿಸುವುದಂ ಸರಿಯಲ್ಲ. ಹಿಂದಿಯು ಕನ್ನಡದ ಬೆಳವಣಿಗೆಗೆ ಅಡ್ಡಬಂದಿಲ್ಲ ಕನ್ನಡಕ್ಕೆ ತೀವ್ರವಾಗಿ ಅಡ್ಡಬಂದಿರುವುದು ಇಂಗ್ಲೀಷ್ ವಿನಹ ಹಿಂದಿಯಲ್ಲ. ದುರಾದೃಷ್ಟವಶಾತ್ ಕರ್ನಾಟಕದಲ್ಲಿ, ನರ್ಸರಿ ಹಾಗೂ ಪ್ರೀಪ್ರೈಮರಿ ಹಂತದಲ್ಲೇ ಇಂಗ್ಲೀಷಿನ ಉಪಯೋಗವನ್ನು ಜಾಸ್ತಿ ಮಾಡುತ್ತಿದ್ದಾರೆ. ಇವತ್ತು ನಮ್ಮ ವಿದ್ಯಾಮಂತ್ರಿಗಳ ಬಳಿ ಬರುವ ಅನೇಕ ಮಂದಿ ಇಂಗ್ಲೀಷ್ ಮೀಡಿಯಮ್ ನರ್ಸರಿ ಶಾಲೆಗಳಿಗೆ ಲೈಸೆನ್ಸ್ ಕೊಡಿ ಎಂದು ಕೇಳುತ್ತಾರೆ. ಈ ಮಟ್ಟದಲ್ಲಿ ಇಂಗ್ಲೀಷ್ ವ್ಯಾಮೋಹ ಇದೆ. ಆದುದರಿಂದ ಬಹಳವಾಗಿ ಪ್ರೈಮರಿ ಶಿಕ್ಷಣ ತಾಯ್ನುಡಿಯಲ್ಲಿ ಆಗುವ ರೀತಿಯಲ್ಲಿ ಮಾಡಬೇಕು ಒಂದು ಒಳ್ಳೆಯ ಮಾತಿನಲ್ಲಿ ಹೇಳಿದರೆ ಕೇಳುವುದಿಲ್ಲ. ಕೆಲವರಿಗೆ ಬಲವಂತವಾಗಿ ಔಷಧಿಯನ್ನು ಕುಡಿಸಬೇಕಾಗುತ್ತದೆ. ಆದುದರಿಂದ ರಾಜ್ಯಸರ್ಕಾರದವರು ಈ ಬಗ್ಗೆ ಸ್ವಲ್ಪ ಕಟುವಾದ, ಕಠಿಣವಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ನಾನು ಸೂಚನೆ ಮಾಡುತ್ತೇನೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಪೂರ್ತಿ ಒಂದನೇ ತರಗತಿಯಿಂದ ಹಿಡಿದು ಏಳನೇ ತರಗತಿಯವರೆಗೆ ನಮ್ಮ ಪ್ರಾದೇಶಿಕ ಭಾಷೆ, ಮಾತೃಭಾಷೆಯಲ್ಲಿ ಶಿಕ್ಷಣವನ್ನು ಒದಗಿಸುವುದಕ್ಕೆ ಮಾತ್ರ ಅವಕಾಶವನ್ನು ಕೊಡಬೇಕು. ಕೇವಲ ಇಂಗ್ಲೀಷ ಮಾಡಿ, ಎಂದು ಮಧ್ಯವರ್ಗದವರು ಬೇಡತಕ್ಕ ಬೇಡಿಕೆಗೆ ಅಷ್ಟೊಂದು ಗಮನವನ್ನು ಕೊಡಬಾರದು ಎದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಮತ್ತು ಈ ಪ್ರೌಢ ಶಿಕ್ಷಣ ಮತ್ತು ಕಾಲೇಜು ಶಿಕ್ಷಣದಲ್ಲಿಯೂ ಕೂಡ ಕನ್ನಡವನ್ನೇ ಪೂರ್ಣವಾಗಿ ಶಿಕ್ಷಣಕ್ಕೆ ಉಪಯೋಗಿಸಬೇಕು. ಇಂಗ್ಲೀಷನ್ನು ತೊರೆಯಬೇಕೆಂದು ನಾನು ಹೇಳುವುದಿಲ್ಲ. ಇಂಗ್ಲೀಷನ್ನು ಬೇಕಾದರೆ ಐಚ್ಛಿಕವಾಗಿ ಬೇಕಾದರೆ ಉಪಯೋಗಿಸಿ. ವಿದೇಶಗಳಿಗೆ ವಿದ್ಯಾಭ್ಯಾಸಕ್ಕೆ ಹೋಗತಕ್ಕಂತಹವರಿಗೆ ಇದನ್ನು ಬೇಕಾದರೆ ಉಪಯೋಗಿಸಬಹುದು. ಹೀಗೆಂದು ಪರಿಣತರು ಸಾಹಿತಿಗಳು. ಈ ದೇಶದ ಪ್ರೇಮಿಗಳು, ಸಂಸ್ಕೃತಿಯಲ್ಲಿ, ಸಂಸ್ಕೃತಿಯ ಕ್ಷೇತ್ರದಲ್ಲಿ ಮುಂದೆ ಬರತಕ್ಕ ಜನ ದೇಶಾಭಿಮಾನಿಗಳು ಹೀಗೆ ಹೇಳುತ್ತಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು ನಾನು ತಮಗೆ ಅರ್ಪಣೆ ಮಾಡಿಕೊಳ್ಳುತ್ತೇನೆ. ಈ ಶಿಕ್ಷಣ ಸುಧಾರಣೆಯ ವಿಚಾರದಲ್ಲೂ ಕೂಡ ದೇಶದಲ್ಲಿ ಅನೇಕ ಜನ ಮಾತನಾಡಿದ್ದಾರೆ. ಅನೇಕ ಶಿಕ್ಷಣ ಸುಧಾರಣಾ ಸಮಿತಿಗಳು ನಮ್ಮ ಕರ್ನಾಟಕದಲ್ಲಿ, ನಮ್ಮ ಭಾರತದಲ್ಲಿ ರಚನೆಯಾಗಿವೆ. ಅನೇಕ ವರದಿಯನ್ನು ಕೊಟ್ಟಿದ್ದಾರೆ. ಇದರ ಪರಿಣಾಮ ಏನೆಂದರೆ ೨ ವರ್ಷದ ಪಿಯುಸಿ ಒಂದು ವರ್ಷ ಇರಬೇಕೇ ಅಥವಾ ಎರಡು ವರ್ಷ ಇರಬೇಕೆ ಎಂದು ೩ ಸಾರಿ ತಲೆಕೆಳಕು ಮಾಡಿಕೊಟ್ಟಿದ್ದಾರೆ ೪೦ ವರ್ಷಗಳ ಹಿಂದೆ ೨ ವರ್ಷದ ಪಿ.ಯು.ಸಿ. ಇತ್ತು ಎಂದು ಈಗ ಆ ಪದ್ಧತಿಯನ್ನು ತಂದಿದ್ದಾರೆ. ತಜ್ಞರು ಎನಿಸಿಕೊಂಡಿರತಕ್ಕವರು ಈ ದೇಶದಲ್ಲಿ ಏನೂ ಸುಧಾರಣೆ ಮಾಡಿಲ್ಲ. ಮಾಡುವುದಕ್ಕೆ ಪ್ರಯತ್ನವನ್ನೂ ಸಹಾ ಮಾಡಿಲ್ಲ. ಇದರಿಂದಾಗಿ ಶಿಕ್ಷಣದ ಸುಧಾರಣೆ ಆಗುತ್ತಾ ಇಲ್ಲ. ಉದಾಹರಣೆಗೆ ಹೇಳುವುದಾದರೆ, ಇಂಗ್ಲೀಷ್ ಶಿಕ್ಷಣದಲ್ಲಿ ವ್ಯಾಕರಣ ಬೇಡ ಎಂದು ತೀರ್ಮಾನ ಮಾಡಿದ್ದಾರೆ. ಕನ್ನಡದಲ್ಲಿ ಕಾಗುಣಿತ ವ್ಯಾಕರಣ ಬೇಡ ಎನ್ನುವ ಶಿಕ್ಷಣ ಪದ್ಧತಿಯನ್ನು ಅನುಸರಿಕೊಂಡು ಹೋದರೆ ಭಾಷಾ ಜ್ಞಾನ ಎಲ್ಲಿಂದ ಬರುತ್ತದೆ. ಹಳ್ಳಿಗಳಲ್ಲಿ ಹೊಯ್ತೀನಿ, ಬತ್ತೀನಿ ಎಂದು ಹೇಳುವಂತಹ ವಿದ್ಯಾಭ್ಯಾಸವಾಗುತ್ತದೆ. ಓದದೇ ಇರವಂತಹ ಅವಿದ್ಯಾವಂತರು ಮಾತನಾಡಿದ ಹಾಗೆ ಆಗುತ್ತದೆ. ಅಮೇರಿಕಾ ದೇಶದಲ್ಲಿ ಮಾತೃಭಾಷೆ ಇಂಗ್ಲೀಷ್, ಹೀಗಿರುವಾಗ ಅವರು ಗ್ರಾಮರ್ ಕಲಿಯದೇ ಹೋದರೆ ನಡೆಯುತ್ತದೆ. ನಮ್ಮಲ್ಲಿ

ಇಂಗ್ಲೀಷ್ ವ್ಯಾಸಂಗ ಮಾಡುವಾಗ ವ್ಯಾಕರಣ ಬೇಡವೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಸಮಿತಿಯವರು ಮಾಡಿರತಕ್ಕ ಈ ಸಲಹೆಯನ್ನು ಕೇಳಿ ಬಹಳ ಆಶ್ಚರ್ಯವಾಯಿತು. ಅದೇ ರೀತಿ ಕನ್ನಡ ಭಾಷೆಯ ಶಿಕ್ಷಣದಲ್ಲೂ ಕೂಡ ವ್ಯಾಕರಣ ಗುಣಾಕಾರವನ್ನು ಕಲಿಸುವುದಿಲ್ಲ ಎಂದರೆ ಭಾಷಾ ಜ್ಞಾನ ತಳಹದಿ. ವಿದ್ಯಾ ಇಲಾಖೆಯ ಮುಖ್ಯಸ್ಥರು ಇದರ ಬಗ್ಗೆ ಮುಖ್ಯವಾಗಿ ಗಮನವನ್ನು ಕೊಡಬೇಕು. ಭಾಷೆಯನ್ನು ಕಲಿಯಬೇಕು ಎಂದರೆ ಅದರ ಗ್ರಾಮರ್ ಕಲಿಯಬೇಕು. ಇಲ್ಲದಿದ್ದರೆ ಇದಕ್ಕೆ ದ್ರೋಹ ಮಾಡಿದ ಹಾಗೆ ಆಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಶಿಕ್ಷಣ ಸುಧಾರಣೆಯ ಬಗ್ಗೆ ಆಡಳಿತ ಕ್ಷೇತ್ರದಲ್ಲಿ ಅನೇಕ ಸಲಹೆಗಳು ಬರುತ್ತಿವೆ. ಒಂದು ಶಿಕ್ಷಣವನ್ನೇ ರಾಷ್ಟ್ರೀಕರಣ ಮಾಡಬೇಕೆಂದು ಸಲಹೆ ಇದೆ. ಆದರೆ ನಮ್ಮ ಸಂವಿಧಾನದಲ್ಲಿ ಅಡಕವಾಗಿರತಕ್ಕ ಭರವಸೆಗಳು ಏನಿವೆ ಭಾಷೆ ಮತ್ತು ಧಾರ್ಮಿಕ ವಿಷಯದ ಬಗ್ಗೆ ಅಲ್ಪ ಸಂಖ್ಯಾತರು ಕೊಟ್ಟಿರತಕ್ಕ ಭರವಸೆಗಳು ಏನಿವೆ ಅವನ್ನು ಆಧಾರದ ಮೇಲೆ ನೋಡಿದರೆ ಅವನ್ನು ರಾಷ್ಟ್ರೀಕರಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಆರ್ಥಿಕವಾಗಿ ಮತ್ತು ಆಡಳಿತ ದೃಷ್ಟಿಯಿಂದ ಎಷ್ಟರ ಮಟ್ಟಿಗೆ ಈ ವಿದ್ಯಾ ಸಂಸ್ಥೆಗಳ ಮೇಲೆ ಹತೋಟಿಯನ್ನು ಇಟ್ಟಿಕೊಳ್ಳಬೇಕೆಂದು ನಾವು ವಿಚಾರ ಮಾಡಬೇಕು. ಪದೇಪದೇ ನಮ್ಮ ಸರ್ವೋಚ್ಚ ನ್ಯಾಯಾಲಯ ಇದರ ಬಗ್ಗೆ ತೀರ್ಮಾನ ಕೊಟ್ಟಿದೆ. ಆದರ ಪ್ರಕಾರ ಎಲ್ಲಾ ವಿದ್ಯಾ ಸಂಸ್ಥೆಗಳ ಮೇಲೆ, ಖಾಸಗಿ ಸಂಸ್ಥೆಗಳ ಮೇಲೆ ನೇರವಾದ ಹತೋಟಿಯನ್ನು ಆರ್ಥಿಕವಾಗಿ ಆಡಳಿತ ದೃಷ್ಟಿಯಿಂದ ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ.

೨-೩೦ ಪಿ. ಎಂ.

ಈ ಬಗ್ಗೆ ಈಗತಾನೇ ರಚನೆಯಾಗಿರತಕ್ಕ ಪ್ರೊಫೆಸರ್ ದೇವೇಗೌಡ ಸಮಿತಿಯವರು ಏನು ಹೇಳಿದ್ದಾರೋ ನನಗೆ ಗೊತ್ತಿಲ್ಲ. ಈ ಪ್ರಕಾರ ನಮ್ಮ ಶಾಸನಸಭೆಯ ಸಮಿತಿಯ ಸಲಹೆ ತೆಗೆದುಕೊಂಡು, ದೇಶದ ಪ್ರಜೆಗಳ ಪ್ರತಿನಿಧಿಗಳಾಗಿತಕ್ಕಂಥವರ ತೀವ್ರವಾದ ಮತ್ತು ಕೂಲಂಕುಷವಾದ ಅಭಿಪ್ರಾಯಗಳನ್ನು ತೆಗೆದುಕೊಂಡು ಮುಂದುವರಿಯಬೇಕು ಎಂದು ನಾನು ಸರ್ಕಾರಕ್ಕೆ ಅರಿಕೆಮಾಡಿಕೊಳ್ಳುತ್ತೇನೆ. ಹೀಗೆ ಮಾಡುವಾಗಲೂ ಕೂಡ ಹೊಸದಾಗಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಶಾಸನ ಬರುವಾಗ ಆರ್ಥಿಕ ದೃಷ್ಟಿಯಿಂದ, ಆಡಳಿತದ ದೃಷ್ಟಿಯಿಂದ ಸಂಪೂರ್ಣವಾದ ಹತೋಟಿಯನ್ನು ಸರ್ಕಾರ ತನ್ನ ಕೈಯಲ್ಲಿಟ್ಟುಕೊಳ್ಳುವ ರೀತಿಯಲ್ಲಿ ವ್ಯವಸ್ಥೆಮಾಡಬೇಕು. ಏಕೆಂದರೆ, ಇದಕ್ಕೆ ಸರ್ಕಾರ ಹಣವನ್ನು ಕೊಡುತ್ತಾ ಇದೆ. ನಮ್ಮ ಸರ್ಕಾರ ನಮ್ಮ ದೇಶದಲ್ಲಿ ಸಾಮಾಜಿಕ ಆರ್ಥಿಕ ಬೆಳವಣಿಗೆಗೆ ಬೇಕಾದ ಸಾಮಾಜಿಕ ನ್ಯಾಯವನ್ನು ಜನಗಳಿಗೆ ಒದಗಿಸಬೇಕಾಗಿದೆ. ನೇಮಕಮಾಡುವ ವಿಚಾರದಲ್ಲೂ ಕೂಡ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕಾಗುತ್ತದೆ. ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವಂಥಾದ್ದು ಮತ್ತು ಹಣವನ್ನು ಪೋಲು ಮಾಡದೇ ಇರುವಂಥಾದ್ದು ಇವೆರಡರ ಸಂಪೂರ್ಣವಾದಂಥ ಹತೋಟಿಯನ್ನು ಸರ್ಕಾರ ಇಟ್ಟುಕೊಳ್ಳಬೇಕು. ಇದರ ಬಗ್ಗೆ ನಾವು ಚರ್ಚೆ ಮಾಡುವಾಗ ವಿವರಗಳನ್ನು ಕೊಡಬೇಕಾಗುತ್ತದೆ. ವಿದ್ಯಾ ಸಂಸ್ಥೆಗಳು ಹಣವನ್ನು ವಸೂಲು ಮಾಡದೇ ಹೋದರೆ ವಿದ್ಯಾ ಸಂಸ್ಥೆಗಳು ಬೆಳೆಯುವುದಿಲ್ಲ ; ಸರ್ಕಾರ ಅದರ ಬೇಕು ಬೇಡಿಕೆಗಳನ್ನು ನೋಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ ವಸೂಲಾದ ಹಣ ಸದುಪಯೋಗವಾಗಬೇಕು, ಅದು ಮಾತ್ರ ಸರ್ಕಾರ ನೋಡಿಕೊಳ್ಳಬೇಕು, ದುರುಪಯೋಗವಾಗುವ ರೀತಿಯಲ್ಲಿ ನಾವು ನೋಡಿಕೊಳ್ಳಬಾರದು. ವಿದ್ಯಾ ಸಂಸ್ಥೆಗಳು ವಸೂಲು ಮಾಡಿದ ಹಣವನ್ನು ನ್ಯಾಯವಾಗಿ ಖರ್ಚುಮಾಡುತ್ತಿವೆಯೋ ಅಥವಾ ಪೋಲು ಮಾಡುತ್ತೀವೆಯೋ ಎಂಬುದನ್ನು ಸರ್ಕಾರ ಪರಿಶೀಲನೆ ಮಾಡುವುದಕ್ಕೆ ಹತೋಟಿ ಇಟ್ಟುಕೊಳ್ಳುವುದಕ್ಕೆ ಬೇಕಾದಂಥ ಶಾಸನಗಳನ್ನು ಮಾಡುವುದು ಬಹಳ ಅಗತ್ಯವಿದೆಯೆಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಹೇಳುತ್ತೇನೆ. ಏನೆಂದರೆ, ಉಪಾಧ್ಯಾಯರುಗಳಿಗೆ ಬೇಕಾದ ಸಕಲಸೌಲತ್ತುಗಳನ್ನು ಕೊಟ್ಟಿದೆ. ಅವರ ಬೇಡಿಕೆಗಳು ಬೇರೆ ಇರಬಹುದು, ಸಂಬಳ ಸಾರಿಗೆಗಳನ್ನು ಕೊಡತಕ್ಕ ಬಗ್ಗೆ ಸವಲತ್ತುಗಳನ್ನು ಕೊಟ್ಟಿದೆ. ಆದರೆ ಉಪಾಧ್ಯಾಯರುಗಳ ಮೇಲೆ, ಸರ್ಕಾರಿ ನೌಕರರ ಮೇಲೆ ಮಾತನಾಡುವುದು ಬಹಳ ಕಷ್ಟ, ಅನೇಕ ಜನ ಪ್ರತಿನಿಧಿಗಳು ಮಾತನಾಡುವುದಕ್ಕೆ ಹಿಂಜರಿಯುತ್ತಾರೆ ಆದರೆ ಇದ್ದ ವಿಷಯವನ್ನು ಹೇಳುವುದಕ್ಕೆ ನಾನು ಹಿಂಜರಿಯುವುದಿಲ್ಲ. ಬೇರೆ ಬೇರೆ ಇಲಾಖೆಗಳಲ್ಲಿರುವಂತೆ ಉಪಾಧ್ಯಾಯರುಗಳಿಗೆ ವರ್ಷವೆಲ್ಲಾ ಲಸವಿರುವುದಿಲ್ಲ. ವರ್ಷದಲ್ಲಿ ಸುಮಾರು ೨೦೦ ದಿವಸ ಪಾಠ ಪ್ರವಚನಗಳು ನಡೆಯುತ್ತವೆ. ವರ್ಷಕ್ಕೆ

ಸುಮಾರು ೬ ತಿಂಗಳು ರಜಾ ಇರುತ್ತದೆ. ಈ ಪದ್ಧತಿ ಹೋಗಬೇಕು. ಮತ್ತು ಪರೀಕ್ಷೆಯ ಕೆಲಸ ಅಂದರೆ, ಪರೀಕ್ಷೆ ನಡೆಸತಕ್ಕಂಥಾದ್ದು, ಸೂಪರ್‌ವೈಸ್ ಮಾಡತಕ್ಕಂಥಾದ್ದು, ವ್ಯಾಲ್ಯುಯೇಷನ್ ಮಾಡತಕ್ಕಂಥಾದ್ದು--ಇವೆಲ್ಲ ಕೆಲಸಗಳು ಉಪಾಧ್ಯಾಯರ ಕರ್ತವ್ಯದ ಒಂದು ಭಾಗವೇ ಆಗಬೇಕು ಎಂದು ನಾನು ಈ ಸಂದರ್ಭದಲ್ಲಿ ಅರಿಕೆಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿ ಮಾಡದೇ ಹೋದರೆ ಇತ್ತೀಚೆಗೆ ಮಾನ್ಯ ವಿದ್ಯಾ ಮಂತ್ರಿಗಳು ಎದುರಿಸಿದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಆದುದರಿಂದ ಪಾಠಪ್ರವಚನಗಳನ್ನು ಮಾಡುವುದರ ಜೊತೆಗೆ ಪರೀಕ್ಷೆಗಳಿಗೆ ಸಂಬಂಧಪಟ್ಟ ಸಮಸ್ತ ಕೆಲಸಗಳೂ ಕೂಡ ಉಪಾಧ್ಯಾಯರ ಕರ್ತವ್ಯ ಪಾಲನೆಯಲ್ಲಿ ಬರಬೇಕು ಎಂದು ನಾನು ಈ ಸಮಯದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರದವರು ಅವರ ವಿದ್ಯಾಭ್ಯಾಸ ಧೋರಣೆಯನ್ನು ಹೇಳುತ್ತಾ ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ, ನಮ್ಮ ವಿದ್ಯಾಭ್ಯಾಸ ಜನಜೀವನದ ಅಂಗವಾಗಿ, ಜನಜೀವನದಲ್ಲಿ ಮಿಳಿತವಾಗಿರಬೇಕು ಎಂದು ಹೇಳಿದ್ದಾರೆ. ಈ ತತ್ವ ಬಹಳ ಶ್ರೇಷ್ಠವಾದ ತತ್ವ. ಇದನ್ನು ಅನುಸರಿಸುವುದಗೋಸ್ಕರ ಮೈಸೂರು ವಿಶ್ವವಿದ್ಯಾನಿಲಯದವರು "ಭರಣಿ ಯೋಜನೆ'' ಎಂದು ಒಂದು ಯೋಜನೆಯನ್ನು ಮಾಡಿದರು. ವಿಶ್ವವಿದ್ಯಾನಿಲಯದಲ್ಲಿರತಕ್ಕಂಥ ತಜ್ಞರ ಅಭಿಮತ ಅವರ ಕಾರ್ಯಕೌಶಲ್ಯ, ಅವರ ತಿಳುವಳಿಕೆ ಇದನ್ನೆಲ್ಲಾ ಉಪಯೋಗಿಸಿ ಗ್ರಾಮಾಂತರ ಪ್ರದೇಶದಲ್ಲಿ ಜನಜೀವನ ಹಸನು ಮಾಡಬೇಕು ಎಂದು ಪ್ರಯತ್ನಪಟ್ಟರು. ಈ ಪ್ರಯತ್ನಕ್ಕೆ ಯಾರೋ ಒಬ್ಬ ವ್ಯಕ್ತಿ ತನಿಖೆಯಿಂದ ಇದು ಸರಿಯಲ್ಲ ಎಂದು ವರದಿಯನ್ನು ಕೊಟ್ಟರು. ನಮ್ಮ ದೇಶದಲ್ಲಿ ಏನಾಗಿದೆಯೆಂದರೆ, ವಸ್ತುನಿಷ್ಠ, ಮೌಲ್ಯನಿಷ್ಠ ಬಗ್ಗೆ ವಾದವಿವಾದಗಳನ್ನು ಮಾಡುವುದು ತಪ್ಪಿ ಯಾವ ಕೆಲಸವನ್ನು ಯಾವ ರೀತಿ ಮಾಡಿದ್ದಾರೆ ಎನ್ನುವ ಬದಲು ಯಾರು ಮಾಡಿದ್ದಾರೆ ಎಂದು ನೋಡುವಂಥಾದ್ದು ನಮ್ಮಲ್ಲಿ ಅನೇಕರಲ್ಲಿ ಬೆಳೆದಿದೆ ; ಇದು ತಪ್ಪು. ಕೇಂದ್ರ ಸರ್ಕಾರ ಏನು ಒಂದು ಧೋರಣೆಯನ್ನು ತಾಳಿದೆಯೋ ಅದೇ ನಿಲುವನ್ನು ನಾವು ತಾಳಿ ಗ್ರಾಮಾಂತರ ಜನಜೀವನದಲ್ಲಿ ನಮ್ಮ ವಿದ್ಯೆಯನ್ನು ಹರಡಿ ಅದರ ಪ್ರತಿಫಲ ದೊರೆಯಬೇಕು. ಇದನ್ನು ನಮ್ಮ ಕರ್ನಾಟಕದಲ್ಲಿ ಮಾಡಿದರೆ ಪ್ರಶಂಸೆಗೆ ಪಾತ್ರವಾಗುತ್ತದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕದಲ್ಲಿರತಕ್ಕ ವಿಶ್ವವಿದ್ಯಾನಿಲಯಗಳ ಬಗ್ಗೆ ಕೆಲವು ಮಾತುಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ವಿಶ್ವವಿದ್ಯಾನಿಲಯ ಶಾಸನ ಇದರ ಬಗ್ಗೆ ಮಾನ್ಯ ಶ್ರೀನಿವಾಸ್‌ರವರು ಮಾತನಾಡುತ್ತಾ ಇದು ತಿದ್ದುಪಡಿಯಾಗಬೇಕು ಎಂದು ಹೇಳಿದರು, ನಾನೂ ಅದಕ್ಕೆ ಅನುಮೋದನೆ ಕೊಡುತ್ತೇನೆ. ವಿಶ್ವವಿದ್ಯಾನಿಲಯ ಶಾಸನವನ್ನು ಮಾಡಿದಾಗ ಸರ್ಕಾರ ಮತ್ತು ಶಾಸನಸಭೆಯ ಉದ್ದೇಶವೇನಿತ್ತು ಎಂದರೆ. ಬೃಹದಾಕಾರವಾಗಿ ಜನರ ಹಣವನ್ನು ವಿದ್ಯಾಭ್ಯಾಸಕ್ಕೆ ನಾವು ಕೊಡುತ್ತಾ ಇದ್ದೇವೆ, ಆದುದರಿಂದ ಜನರ ಹತೋಟಿ ಅವರ ಮೇಲೆ ಇರಬೇಕು, ಶಾಸನ ಸಭೆಯ ಹತೋಟಿ ಅವರ ಮೇಲಿರಬೇಕು ಎಂದು ಅನೇಕ ಅಧಿಕಾರಗಳನ್ನು ಇಟ್ಟುಕೊಂಡಿದ್ದರು. ಅದಕ್ಕೆ ಶಾಸನ ರಚನೆ ಮಾಡುವಾಗ ಆ ಅಧಿಕಾರ ಯಾರಲ್ಲಿ ಉಳಿಯಿತು ಅಂದರೆ ಛಾನ್ಸಲರ್‌ನಲ್ಲಿ ಉಳಿಯಿತು. ಕುಲಾಧಿಪತಿಗಳು ತಾವು ಸೂಪರ್ ಯೂನಿವರ್ಸಿಟಿ ಕಛೇರಿ ಕೆಲಸಮಾಡಿದಂತೆ ಮಾಡುತ್ತಾರೆ. ಸರ್ಕಾರದ ಗಮನಕ್ಕೆ ಗೊತ್ತೇ ಇರುವುದಿಲ್ಲ. ಗವರ್ನರ್ ವಿಚಾರ ನಾನು ಹೇಳುತ್ತಾ ಇಲ್ಲ. ಕುಲಾಧಿಪತಿ ಕಛೇರಿ ಹೇಗೆ ಇರಬೇಕು ಎಂದರೆ by virtue of being the Governor, the Office of the Governor functions on the aid and advice of the Council of Ministers. ಸಂವಿಧಾನಾತ್ಮಕವಾಗಿ ರಾಜ್ಯ ಸರ್ಕಾರದ ಮಂತ್ರಿಮಂಡಲದ ಸಹಾಯ, ಸಹಕಾರಗಳಿಲ್ಲದೆ ಬೇರೆ ರೀತಿಯಲ್ಲಿ ಕೆಲಸಮಾಡುವುದಕ್ಕೆ ಅವಕಾಶವಿಲ್ಲ ಎನ್ನುವಂಥ ಅಧಿಕಾರ ಸರ್ಕಾರದಲ್ಲಿ ಉಳಿಯಲಿಲ್ಲ ಹಾಗಾದರೆ ವಿಶ್ವವಿದ್ಯಾನಿಲಯದ ಸ್ವಾಯತ್ತತೆಗೆ ತೊಂದರೆ ಬಂದಿದೆ. ಆದುದರಿಂದ ಈ ಬಗ್ಗೆ ಬಹಳ ದೀರ್ಘವಾಗಿ, ಕೂಲಂಕುಷವಾಗಿ ವಿಚಾರ ಮಾಡಿ ಯಾವ ಯಾವ ಅಧಿಕಾರ ಸರ್ಕಾರದಲ್ಲಿ ಉಳಿಯಬೇಕು, ಯಾವ ಯಾವ ಅಧಿಕಾರ ವಿಶ್ವವಿದ್ಯಾನಿಲಯಕ್ಕೆ ವಾಪಸ್ ಕೊಡಬೇಕು ಎನ್ನುವುದನ್ನು ಪರಿಶೀಲನೆ ಮಾಡುವುದು ಬಹಳ ಅಗತ್ಯ ಈ ಬಗ್ಗೆ ಮಾನ್ಯ ಮಂತ್ರಿಗಳು ಪರಿಶೀಲನೆಮಾಡಬೇಕು ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಮತ್ತೊಂದು ಪ್ರಮುಖವಿವಾದಂಥ ವಿಚಾರವೆಂದರೆ, ಎಲ್ಲಾ ನಮ್ಮ ತೊಡಕು ತೊಂದರೆಗಳಿಗೂ ಕೇಂದ್ರ ಯಾವುದು ಎಂದರೆ ಪರೀಕ್ಷೆ ವಿಭಾಗ, ವಿಶ್ವವಿದ್ಯಾನಿಲಯಗಳಲ್ಲಿ ಪ್ರತಿ ವರ್ಷ ಪರೀಕ್ಷೆಗಳನ್ನು ಮುಂದಕ್ಕೆ ಹಾಕುತ್ತಾ ಇರುವಂಥಾದ್ದು, ಪರೀಕ್ಷೆಗಳಲ್ಲಿ ತೊಂದರೆ, ಮೌಲ್ಯಮಾಪದಲ್ಲಿ ತೊಂದರೆಯಾಗಿ ಪರೀಕ್ಷೆಗಳಲ್ಲಿ

ನಡೆಯುತ್ತಾ ಇರತಕ್ಕಂಥ ದೋಷಗಳಿಂದ ವಿಶ್ವವಿದ್ಯಾನಿಲಯಕ್ಕೆ ಕೆಟ್ಟ ಹೆಸರು ಬರುವುದಕ್ಕೆ ಅವಕಾಶ ವಿದೆ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನವಿಡಬೇಕು. ಈ ವಿಚಾರದಲ್ಲಿ ನಾನು ಹೇಳುವುದೇನೆಂದರೆ, ೩ ವಿಶ್ವವಿದ್ಯಾನಿಲಯಗಳ ಪರೀಕ್ಷಾ ವಿಭಾಗಗಳನ್ನು ರದ್ದುಮಾಡಿ ಹೈಸ್ಕೂಲ್ ಮತ್ತು ಪಿ.ಯು.ಸಿ.ಗೆ ಇರುವ ರೀತಿಯಲ್ಲಿ ಮೂರು ವಿಶ್ವವಿದ್ಯಾನಿಲಯಗಳಿಗೂ ಒಂದೇ ಒಂದು ಪರೀಕ್ಷಾ ಮಂಡಲಿಯನ್ನು ರಚನೆ ಮಾಡಬೇಕಾದುದು ಬಹಳ ಅಗತ್ಯವಿದೆ. ಹೀಗೆ ಮಾಡಿದರೆ ಈಗಿರತಕ್ಕ ಅನೇಕ ದೋಷಗಳನ್ನು ಸರಿಪಡಿಸಬಹುದು ಎಂದು ನಾನು ಅಂದುಕೊಂಡಿದ್ದೇನೆ ; ಮತ್ತೆ ವಿಶ್ವವಿದ್ಯಾನಿಲಯಕ್ಕೆ ಇರತಕ್ಕಂಥ ತಲೆನೋವು ಕಡಿಮೆಯಾಗಿ ಅವರು ಪಾಠಪ್ರವಚನಗಳಲ್ಲಿ ಅಕೆಡಮಿಕ್ ಪರ್‌ಸ್ಯೂಟ್ಸ್ — ಇದರಲ್ಲಿ ತಮ್ಮ ಕಾಲವನ್ನು ಉಪಯೋಗಿಸಬಹುದು ಮತ್ತು ಹೆಚ್ಚಿನ ರೀತಿಯಲ್ಲಿ ವಿದ್ಯಾದಾನವನ್ನು ಮಾಡುವುದಕ್ಕೆ ಅವಕಾಶವಿದೆ. ಆದುದರಿಂದ ಈ ರೀತಿಯಾದ ಒಂದು ಪರೀಕ್ಷಾ ಮಂಡಲಿಯನ್ನು ರಚನೆಮಾಡುವ ಬಗ್ಗೆ ಸರ್ಕಾರದವರು ತೀವ್ರವಾಗಿ ಯೋಚನೆಮಾಡಬೇಕು. ಇದನ್ನು ಮೂರೂ ವಿಶ್ವ ವಿದ್ಯಾನಿಲಯಗಳಿಗೂ ಸೇರಿದಂತೆ ಮಾಡಿದರೆ ಈಗಿರತಕ್ಕ ಸಮಸ್ಯೆಗಳನ್ನು ಬಗೆಹರಿಸಿ ವಿಶ್ವವಿದ್ಯಾನಿಲಯ ಗಳ ವಾತಾವರಣವನ್ನು ತಿಳಿಮಾಡಿ, ಯಾವುದೇ ಕಾರಣದಿಂದ ನಿಗದಿಮಾಡಿದಂಥ ಪರೀಕ್ಷಾ ಕಾಲ ಮುಂದಕ್ಕೆ ಹೋಗದ ರೀತಿಯಲ್ಲಿ ಶಾಸನವಾಗಿ ನಾವು ನಿರ್ಧಾರ ಮಾಡಬಹುದು ಯಾವುದೇ ಒಂದು ಸಂಸ್ಥೆ ಅಥವಾ ಕಾಲೇಜು ಪಾಠಪ್ರವಚನ ಮಾಡದೇ ಹೋದರೆ ಅವರೇ ತೊಂದರೆಗೆ ಒಳಗಾಗ ತ್ತಾರೆ. ಯಾವುದೇ ಕಾರಣದಿಂದ ಪರೀಕ್ಷೆಗಳು ಮುಂದೆ ಹೋಗುವುದಿಲ್ಲ ಈಗಿರತಕ್ಕ ತೊಡಕು ತೊಂದರೆಗಳು ನಿವಾರಣೆಯಾಗುತ್ತದೆ. ಆದುದರಿಂದ ಪರೀಕ್ಷಾ ಮಂಡಲಿಯನ್ನು ರಚನೆಮಾಡಬೇಕಾದ್ದು ತೀವ್ರ ಅಗತ್ಯವಿದೆ. ಪರೀಕ್ಷಾ ಮಂಡಲಿಯನ್ನು ರಚನೆಮಾಡುವುದಕ್ಕೆ ಈ ವರ್ಷವೇ ಪ್ರಯತ್ನಮಾಡ ಬೇಕು ಎಂದು ನಾನು ಈ ಸಮಯದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇನ್ನು ಎರಡು ಮೂರು ವಿಷಯಗಳ ಮೇಲೆ ಸೂಕ್ಷ್ಮವಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮೊದಲನೆ ಯದು, ಕನ್ನಡ ಸಂಸ್ಕೃತಿ ವಿಭಾಗ. ಈ ವಿಭಾಗ ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ. ನಮ್ಮ ಶಾಸನ ಸಭಾ ಸದಸ್ಯರ ಮೆಚ್ಚುಗೆಗೆ ಪಾತ್ರವಾಗಿದೆ. ಇದು ಕನ್ನಡದ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಸಾಕಷ್ಟು ಪ್ರಚಾರಮಾಡಿದೆ ; ಜನಗಳ ಮನಸ್ಸಿನಲ್ಲಿ ಉಳಿಯುವುದಕ್ಕೆ ಪ್ರಯತ್ನಪಟ್ಟಿದೆ. ಶಾಸನಗಳನ್ನು ಕನ್ನಡ ದಲ್ಲಿ ಮಾಡುವುದಕ್ಕೆ ಸಾಕಷ್ಟು ಕೆಲಸವನ್ನು ಮಾಡಿದೆ.

ಶಾಸನಗಳನ್ನು ಕನ್ನಡದಲ್ಲಿ ಮಾಡುವುದಕ್ಕೆ ಸಾಕಷ್ಟು ಕೆಲಸಗಳನ್ನು ಮಾಡಿದೆ. ಮತ್ತು ನ್ಯಾಯಾ ಲಯಗಳಲ್ಲಿ ಕನ್ನಡವನ್ನು ಬಳಸಬೇಕು, ಕನ್ನಡದ ಬಳಕೆಯಾಗಬೇಕು ಅಂತ ಕೆಳಗಿನಿಂದ ಮೇಲಿನವರೆಗೆ ಕನ್ನಡದಲ್ಲಿಯೇ ತೀರ್ಪನ್ನು ಕೊಡಬೇಕೆಂದು ತೀರ್ಮಾನ ಮಾಡಿ ಆ ರೀತಿ ತೀರ್ಮಾನ ಕೊಡುವವರಿಗೆ ಬಹುಮಾನದ ಯೋಜನೆ ಕೂಡ ಮಾಡಲಾಗಿದೆ. ಇದಕ್ಕೆ ನಾನು ನಮ್ಮ ರಾಜ್ಯ ಸರ್ಕಾರಕ್ಕೆ ಮತ್ತು ಮುಖ್ಯ ನ್ಯಾಯಾಧೀಶರುಗಳಿಗೂ ಕೂಡ ಬೆಂಬಲ ಕೊಟ್ಟು ಈ ಕೆಲಸ ಸುಗಮವಾಗಿ ನಡೆಯುವುದಕ್ಕೆ ಸಹಾಯ ಮಾಡಿದ್ದಕ್ಕಾಗಿ ಈ ಒಂದು ಇಲಾಖೆ ಮಾಡಿರತಕ್ಕ ಮತು ಮಾಡುತ್ತಿರತಕ್ಕ ಕೆಲಸಗಳಿಗೆ ನಾವು ನಿಜವಾಗಿಯೂ ಬೆಂಬಲ ಕೊಡುವುದು ಅಗತ್ಯವಿದೆಯೆಂಬುವ ಮಾತನ್ನು ತಿಳಿಸುತ್ತೇನೆ. ಇನ್ನು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ನಮ್ಮಲ್ಲಿ ಸುಮಾರು ೩೦ ಡಿಗ್ರಿ ಕಾಲೇಜುಗಳು, ಟೆಕ್ನಿಕಲ್ ಇನ್‌ಸ್ಟಿಟ್ಯೂಷನ್‌ಗಳು ಅಲ್ಲದೆ ೩೬ ಪಾಲಿಟೆಕ್ನಿಕ್‌ಗಳು ಇವೆ, ಇವುಗಳ ಜೊತೆಗೆ ಜೂನಿಯರ್ ಟೆಕ್ನಿಕಲ್ ಸ್ಕೂಲ್‌ಗಳು ಇವೆ ಇಡೀ ಭಾರತ ದೇಶದಲ್ಲಿ ಅದರಲ್ಲೂ ನಮ್ಮ ದಕ್ಷಿಣ ಭಾರತದಲ್ಲಿ ಅದರಲ್ಲೂ ನಮ್ಮ ಆಫ್ ರಾಜ್ಯದಲ್ಲಿಯೇ ತಾಂತ್ರಿಕ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿದೆ ಇವತ್ತು ಆಲ್ ಇಂಡಿಯ ಕೌನ್ಸಿಲ್ ಆಫ್ ಟೆಕ್ನಿಕಲ್ ಎಜುಕೇಷನ್‌ನವರು ತೀರ್ಮಾನ ಮಾಡಿ ಎಲ್ಲಾ ರಾಜ್ಯಗಳಲ್ಲೂ ತಾಂತ್ರಿಕ ಶಿಕ್ಷಣಕ್ಕೆ ಪ್ರತ್ಯೇಕ ವಾದ ವಿಶ್ವವಿದ್ಯಾನಿಲಯಗಳು ಆಗಬೇಕೆಂದು ತೀರ್ಮಾನ ಮಾಡಿ ಈಗ ಪಕ್ಕದ ತಮಿಳು ನಾಡಿನಲ್ಲಿ ಮತ್ತು ಕೇರಳ ರಾಜ್ಯಗಳಲ್ಲಿ ಮತ್ತು ಕೇವಲ ೪-೫ ಕಾಲೇಜ್‌ಗಳು ಇರುವ ಆಂಧ್ರ ಪ್ರದೇಶದಲ್ಲೂ ಕೂಡ ತಾಂತ್ರಿಕ ವಿಶ್ವವಿದ್ಯಾನಿಲಯವಾಗುತ್ತಿದೆ. ನಮ್ಮ ಇಡೀ ಭಾರತದೇಶದಲ್ಲಿಯೇ ನಮ್ಮ ರಾಜ್ಯದಲ್ಲಿರುವಂಥ ತಾಂತ್ರಿಕ ವಿಶ್ವವಿದ್ಯಾಲಯ ಎಲ್ಲೂ ಇಲ್ಲ, ನಮ್ಮಲ್ಲಿಗೆ ಭಾರತ ದೇಶದ ಎಲ್ಲ ಭಾಗದಿಂದಲೂ ತಾಂತ್ರಿಕ ಶಿಕ್ಷಣಕ್ಕೆ ಇಲ್ಲಿಗೆ ಬರುತ್ತಿದ್ದಾರೆ ಅಷ್ಟೇ ಅಲ್ಲಾ ಹೊರಗಡೆಯ ದೇಶದಿಂದಲೂ ಕೂಡ ಅನೇಕ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದಾರೆ. ಆದರೆ ಇವತ್ತು ಏನಾಗಿದೆಯೆಂದರೆ ಶಿಕ್ಷಣ ಕೊಡತಕ್ಕವರು ಒಬ್ಬರಾದರೆ ಅದರ ಉಪಯೋಗ ಪಡೆದುಕೊಳ್ಳುತ್ತಿರುವವರು ಬೇರೆಯವರು ಆಗಿದ್ದಾರೆ. ಅವರ ಉಪಯೋಗವನ್ನು ದೊಡ್ಡ ದೊಡ್ಡ ಕಾರ್ಖಾನೆಗಳು ಪಡೆದುಕೊಳ್ಳುತ್ತಿದ್ದಾರೆ. ಇದಕ್ಕಾಗಿ ದೊಡ್ಡ ದೊಡ್ಡ ಕಾರ್ಖಾನೆಗಳವರು

ಏನು ಖರ್ಚು ಮಾಡುತ್ತಿಲ್ಲ. ಅದಕ್ಕೆ ನಾನು ಸೂಚನೆ ಮಾಡುವುದೇನೆಂದರೆ ರಾಜ್ಯ ಸರ್ಕಾರದವರು ಮತ್ತು ಕೇಂದ್ರ ಸರ್ಕಾರದವರು ಇದರ ಬಗ್ಗೆ ಯೋಚನೆ ಮಾಡಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೂ ಮತ್ತು ಕೈಗಾರಿಕೆಗಳಿಗೂ ಪರಸ್ಪರ ಉಪಯೋಗಕ್ಕೆ ಬೀಳುವಂಥ ರೀತಿಯಲ್ಲಿ ವ್ಯವಸ್ಥೆ ಮಾಡಬೇಕಾಗಿದೆ ಆ ಕಾಲ ಕೂಡ ಈಗ ಬರುತ್ತಿದೆ. ಅದಕ್ಕೆ ಈ ವಿಷಯದಲ್ಲಿ ನಮ್ಮ ರಾಜ್ಯ ಸರಕಾರದವರು ಒಂದು ಕಮಿಟಿಯನ್ನು ರಚನೆ ಮಾಡಿ ಅವರು ಈ ಎಲ್ಲಾ ವಿಷಯಗಳ ಬಗ್ಗೆ ಆಲೋಚನೆ ಮಾಡಿ ಒಂದು ನಿಯಮಾವಳಿಗಳನ್ನು ತಯಾರು ಮಾಡಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ಕೇಳಿಕೊಡುತ್ತೇನೆ. ಇನ್ನು ಲೈಬ್ರರಿ ವಿಚಾರ ಹೇಳುವುದಾದರೆ, ನಮ್ಮ ಕರ್ನಾಟಕದಲ್ಲಿರತಕ್ಕ ಗ್ರಂಥಾಲಯಕ್ಕೆ ನಾವು ೮೨ ಲಕ್ಷ ರೂಪಾಯಿಗಳನ್ನು ಸರ್ಕಾರದ ಬೊಕ್ಕಸದಿಂದ ಖರ್ಚು ಮಾಡುತ್ತಿದ್ದೇವೆ. ಅಲ್ಲದೆ ಸ್ಥಳೀಯ ಸಂಸ್ಥೆಗಳಿಗೆ ೫೦ ಲಕ್ಷ ರೂಪಾಯಿಗಳು ಒಟ್ಟು ಒಂದು ಕೋಟಿ ೩೨ ಲಕ್ಷ ರೂಪಾಯಿಗಳನ್ನು ನಾವು ಈ ಇಲಾಖೆಗೆ ಕೊಡಲಾಗುತ್ತಿದೆ. ಅಷ್ಟು ಹಣದಲ್ಲಿ ಅರ್ಧ ಹಣ ಅವರ ಸಂಬಳ ಸಾರಿಗೆಗಳಿಗೇ ಹೊರಟು ಹೋಗುತ್ತಿದೆ. ಸುಮಾರು ೨೦ ಲಕ್ಷದಷ್ಟು ಹಣವನ್ನು ಮಾತ್ರ ನಾವು ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೆ ಮಿಕ್ಕುತ್ತಿದೆ. ಈ ೨೦ ಲಕ್ಷದಷ್ಟು ಹಣದಲ್ಲಿ ಮುಕ್ಕಾಲು ಭಾಗ ಹಣವನ್ನು ಕನ್ನಡ ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೆ ಇಡಲಾಗಿದೆ, ಅಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಬೇಕಾದ ಪುಸ್ತಕಗಳಿಗೆ ಹಣವನ್ನು ಅವರು ಖರ್ಚು ಮಾಡಬಾರದು, ಏತಕ್ಕೆಂದರೆ ವಿಶ್ವವಿದ್ಯಾನಿಲಯದವರು ತಮ್ಮ ಲೈಬ್ರರಿಗಳಲ್ಲಿ ಅವುಗಳನ್ನು ಇಟ್ಟಿರುತ್ತಾರೆ, ನಮ್ಮ ಸಾರ್ವಜನಿಕ ಲೈಬ್ರರಿಯಲ್ಲಿ ಸಾಮಾನ್ಯವಾಗಿ ಏನು ಸಾರ್ವಜನಿಕರಿಗೆ ಬೇಕಾಗಿರತಕ್ಕ ಪುಸ್ತಕಗಳು ಇವೆಯೋ ಅವುಗಳನ್ನು ಮಾತ್ರ ಕೊಂಡಕೊಳ್ಳಬೇಕು. ಇವತ್ತು ಕನ್ನಡದಲ್ಲಿ ಅಭೂತಪೂರ್ವವಾದ ಕೆಲಸಗಳು ನಡೆದಿದೆ. ಆದರಲ್ಲೂ ನಮ್ಮ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅತ್ಯಂತ ಉತ್ಕೃಷ್ಟವಾದ ಕನ್ನಡ ಪುಸ್ತಕಗಳ ಬಂದಿವೆ. ಇವತ್ತು ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಒಂದೂವರೆ, ಎರಡುಕೋಟಿ ರೂಪಾಯಿಗಳಷ್ಟು ಸ್ಟಾಕ್ ಪುಸ್ತಕಗಳು ಇವೆ. ಅಂಥ ಉಪಯೋಗಕರವಾದ ಪುಸ್ತಕಗಳನ್ನು ನಮ್ಮ ಗ್ರಂಥಾಲಯದವರು ಕೊಳ್ಳುತ್ತಿಲ್ಲ ಅಂತ ನನ್ನ ನೇರವಾದ ಅಪಾದನೆ ಇದೆ. ಇವತ್ತು ೨೦ ಲಕ್ಷ ರೂಪಾಯಿಗಳಲ್ಲಿ ಕನಿಷ್ಟ ಪಕ್ಷ ೩೦,೪೦ ಲಕ್ಷ ರೂಪಾಯಿಗಳಷ್ಟನ್ನಾದರೂ ಕನ್ನಡ ಪುಸ್ತಕಗಳನ್ನು ಕೊಂಡುಕೊಳ್ಳಲೇಬೇಕು. ಮಾನ್ಯ ಶ್ರೀ ಬಸವಲಿಂಗಪ್ಪನವರು ಹೇಳುವ ಹಾಗೆ ಬೂಸಾ ಸಾಹಿತ್ಯ ಅಂಥಾ ಪುಸ್ತಕಗಳನ್ನು ಕೊಂಡುಕೊಳ್ಳದೇ, ಮೈಸೂರು ವಿಶ್ವ ವಿದ್ಯಾನಿಲಯದ ಪರಿಣಿತರು ಏನು ಇಡೀ ಸಾರಸ್ವತ ಲೋಕಕ್ಕೇ ಅನುಕೂಲವಾಗುವ ಹಾಗೆ ಪುಸ್ತಕಗಳನ್ನು ಬರೆದಿದ್ದಾರೆ, ಆ ಪುಸ್ತಕಗಳನ್ನು ಕೊಂಡುಕೊಳ್ಳಲಿಕ್ಕೆ ಇವತ್ತು ಅಲ್ಲಿರತಕ್ಕ ಮೇಲಾಧಿಕಾರಿಗಳು ಸರಿಯಾದ ರೀತಿಯಲ್ಲಿ ನಡೆದುಕೊಂಡಿಲ್ಲ. ಆದುದರಿಂದ ಈ ವರ್ಷವಾದರೂ ಮುಕ್ಕಾಲು ಪಾಸಿ ಹಣದಿಂದ ಕನ್ನಡ ಪುಸ್ತಕಗಳನ್ನು ಕೊಂಡುಕೊಳ್ಳಬೇಕು ಮತ್ತು ವಿಶ್ವವಿದ್ಯಾನಿಲಯದ ತಜ್ಞರೇನು ಪುಸ್ತಕಗಳನ್ನು ಬರೆದಿದ್ದಾರೆ ಅಂಥಾ ಪುಸ್ತಕಗಳಿಗೆ ಆದ್ಯತೆ ಕೊಟ್ಟು ಕೊಂಡುಕೊಂಡರೆ ಆದರಿಂದ ಅವರಿಗೂ ಪ್ರೋತ್ಸಾಹ ಕೊಟ್ಟ ಹಾಗೆ ಆಗುತ್ತದೆ ಇಲ್ಲದಿದ್ದರೆ ಬರೆದವರಿಗೂ ಮತ್ತು ಪ್ರಕಟಿಸಿದವರಿಗೂ ಬೇಜಾರು ಆಗುತ್ತದೆ. ಮತ್ತು ಇದರಿಂದ ರಾಜ್ಯಕ್ಕೂ ಮತ್ತು ರಾಷ್ಟ್ರಕ್ಕೂ ಅನಾಹುತವಾಗುತ್ತದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೊನೆಯದಾಗಿ, ಕರ್ನಾಟಕ ರಾಜ್ಯದಲ್ಲಿ ಬಹಳ ವರ್ಷಗಳಿಂದ ಭಾರತ ಸೇವಾದಳ ಕೆಲಸ ಮಾಡುತ್ತಿದೆ. ಅದಕ್ಕೆ ರಾಷ್ಟ್ರೀಯ ಹಿನ್ನೆಲೆ ಕೂಡ ಇದೆ. ಮಹಾತ್ಮಾ ಗಾಂಧೀಜಿಯವರ ತತ್ವದ ಆಧಾರದ ಮೇಲೆ ಯುವಕರನ್ನು ತಯಾರು ಮಾಡತಕ್ಕ ಈ ಒಂದು ಸ್ವಯಂ ಸೇವಕ ಸಂಘಕ್ಕೆ ತಾವು ಸಾಕಷ್ಟು ಬೆಂಬಲ ಕೊಡುತ್ತಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಸ್ಕೌಟ್‌ಗೆ ಹೆಚ್ಚಿನ ಬೆಂಬಲ ದೊರಕುತ್ತದೆ. ಅದಕ್ಕೆ ಬೆಂಬಲ ಕೊಡಬಾರದು ಎಂದು ಅಲ್ಲ, ಅದಕ್ಕೆ ಎಷ್ಟು ಬೆಂಬಲವನ್ನು ಕೊಡುತ್ತಿದ್ದೀರೋ ಅಷ್ಟೇ ಬೆಂಬಲವನ್ನು ಈ ಭಾರತ ಸೇವಾ ದಳಕ್ಕೂ ಕೊಡಬೇಕಾದ್ದು ಬಹಳ ಅಗತ್ಯ. ಸ್ಕೌಟ್ಸ್—ಇದರ ಹಿನ್ನೆಲೆ ಏನೋ ಒಳ್ಳೆಯದು ಆದರೆ ಅದರಲ್ಲಿ ಬರೀ ಇಂಗ್ಲೀಷ್‌ಗೆ ಪ್ರಾಧಾನ್ಯತೆ ಇದೆ, ಆದರೆ ಭಾರತೀಯ ಸ್ವಯಂ ಸೇವಾ ದಳದಲ್ಲಿ ನಮ್ಮ ಭಾರತ ಸಂಸ್ಕೃತಿಗೆ ಹೆಚ್ಚಿನ ಪ್ರಾಧ್ಯಾನತೆಯನ್ನು ಕೊಟ್ಟಿದೆ ಆದುದರಿಂದ ಆದಕ್ಕೂ ತಾವು ಹೆಚ್ಚಿನ ಬೆಂಬಲ ಕೊಡಬೇಕೆಂದು ಹೇಳಿ. ತಮ್ಮ ಇಲಾಖೆಯ ಬೇಡಿಕೆ ಏನಿದೆ ಅದಕ್ಕೆ ಇನ್ನೂ ಹೆಚ್ಚಿನ ಹಣದ ಅವಶ್ಯಕತೆ ಇದೆ ಆದಾಗ್ಯೂ ಕೂಡ ತಾವು ಈಗ ಮಂಡಿಸಿರುವ ಬೇಡಿಕೆ ನ್ಯಾಯ ಸಮ್ಮತವಾಗಿರುವುದರಿಂದ ಇದಕ್ಕೆ ಎಲ್ಲರೂ ಒಮ್ಮತದ ಬೆಂಬಲ ಕೊಡಬೇಕೆಂದು ಅರಿಕೆ ಮಾಡಿಕೊಂಡು ಮಾನ್ಯ ಅಧ್ಯಕ್ಷಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಬಿ. ವಿ. ಕಕ್ಕಿಲ್ಲಾಯ (ಬಂಟ್ವಾಳ). ಸನ್ಮಾನ್ಯ ಅಧ್ಯಕ್ಷರೆ. ನಮ್ಮ ಸಂವಿಧಾನದಲ್ಲಿ ಪೀಠಿಕೆಯಲ್ಲಿರುವುದಕ್ಕೆ ಬದಲಾವಣೆ ಮಾಡಿ, ನಮ್ಮ ರಾಷ್ಟ್ರ ಧರ್ಮ ನಿರಾಪೇಕ್ಷ ರಾಷ್ಟ್ರ, ಸಮಾಜವಾದೀ ಮತ್ತು ಗಣತಂತ್ರ ರಾಷ್ಟ್ರವೆನ್ನುವುದನ್ನು ನಾವು ಒಪ್ಪಿಕೊಂಡಿದ್ದೇವೆ. ನಮ್ಮ ವಿದ್ಯಾಭ್ಯಾಸ ಕ್ಷೇತ್ರದ ಭಾವನೆಯನ್ನು ನಮ್ಮ ವಿದ್ಯಾರ್ಥಿಗಳಲ್ಲಿ ಮತ್ತು ಮುಂದಿನ ಪೀಳಿಗೆಯಲ್ಲಿ ಅದು ರಕ್ತಗತ ಆಗುವ ಹಾಗೆ ಮಾಡುವ ನಿಟ್ಟಿನಲ್ಲಿ ನಮ್ಮ ವಿದ್ಯಾಭ್ಯಾಸ ಕ್ಷೇತ್ರವನ್ನು ತೆಗೆದುಕೊಂಡು ಹೋಗಬೇಕಾಗಿದೆ. ವೈಜ್ಞಾನಿಕ ದೃಷ್ಟಿಕೋನ ನಮ್ಮ ಮಕ್ಕಳಲ್ಲಿ ಬೆಳೆಯುವ ಹಾಗೆ, ಮಾನವೀಯತೆ ಭಾವನೆ, ಸ್ವತಂತ್ರ ದೃಷ್ಟಿಕೋನ ಈ ಭಾವನೆಗಳು ನಮ್ಮ ಮಕ್ಕಳಲ್ಲಿ ಬೆಳೆಯುವ ಹಾಗೆ ನಮ್ಮ ವಿದ್ಯಾಭ್ಯಾಸ ಕ್ಷೇತ್ರ ಕೆಲಸ ಮಾಡಬೇಕಾಗಿದೆ. ಕಾಯಕಕ್ಕೆ ಹೆಚ್ಚಿನ ಗೌರವ ಸಲ್ಲುವ ರೀತಿಯಲ್ಲಿ ಮತ್ತು ಎಲ್ಲ ಮಕ್ಕಳಿಗೂ ಶಾರೀರಕ ಮತ್ತು ಪರಿಶ್ರಮದ ಮೂಲಕ ಕೆಲಸಕ್ಕೆ ಹೆಚ್ಚಿನ ಗೌರವ ಸಲ್ಲುವ ರೀತಿಯಲ್ಲಿ ಮಕ್ಕಳನ್ನು ತರಬೇತಿ ಮಾಡುವುದು ಕೂಡ, ಇವತ್ತು ನಮ್ಮ ಮುಂದಿನ ರಾಷ್ಟ್ರದ ನಿರ್ಮಾಣ ಯಾವ ದಿಕ್ಕಿನಲ್ಲಿ ಹೋಗಬೇಕು ಎಂಬುದನ್ನು ಕೂಡ ನಾವು ನಮ್ಮ ಸಂವಿಧಾನದಲ್ಲಿ ಸೂಚಿಸಿದ್ದೇವೆ. ಆ ರೀತಿಯಲ್ಲಿ ಆಗಬೇಕು ಆದರೆ ಇವತ್ತು ಪ್ರಾಥಮಿಕ ವಿದ್ಯಾಭ್ಯಾಸದ ಮಟ್ಟದಿಂದ ಹಿಡಿದು ವಿಶ್ವವಿದ್ಯಾನಿಲಯಗಳವರೆಗಿನ ಮಟ್ಟವನ್ನು ನಾವು ನೋಡಿದಾಗ ಒಂದಕ್ಕೊಂದು ವಿರುದ್ಧವಾದ ದಿಕ್ಕಿನಲ್ಲಿ ನಮ್ಮ ವಿದ್ಯಾಭ್ಯಾಸದ ಧೋರಣೆ, ನೀತಿ, ಶಿಕ್ಷಣ, ಸಂಪ್ರದಾಯ ಮತ್ತು ಸಿಲಬಸ್‌ಗಳು, ಎಲ್ಲವೂ ಕೂಡ ಪೂರ್ತಿ ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿದೆ. ಎಂದು ವಿಷಾದದಿಂದ ಹೇಳಬೇಕಾಗಿದೆ. ಇವತ್ತು ನೀವು ವಿಶ್ವವಿದ್ಯಾನಿಲಯಗಳನ್ನು ತೆಗೆದುಕೊಳ್ಳಿ. ಅಥವಾ ಸೆಕೆಂಡರಿ ಮಟ್ಟದಲ್ಲಿರತಕ್ಕ ಶಾಲೆಗಳನ್ನು ತೆಗೆದುಕೊಳ್ಳಿ. ಅಥವಾ ಪ್ರೈಮರಿ ಶಾಲೆಗಳನ್ನು ತೆಗೆದುಕೊಳ್ಳಿ ಪ್ರತಿಯೊಂದರಲ್ಲೂ ಕೂಡ ಸಂಕುಚಿತ ಮನೋಭಾವನೆಯನ್ನು, ಪ್ರಾದೇಶಿಕ, ಜ್ಯಾತೀಯತೆಯನ್ನು ಮಕ್ಕಳಲ್ಲಿ ಬೆಳೆಸುವಂಥ ರೀತಿಯಲ್ಲಿ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಅವ್ಯವಹಾರ ನಡೆಯುತ್ತಿದೆ. ಈಗ ನಮ್ಮ ಸಂವಿಧಾನ ಘಟನೆಯು ಹಿಂದೇ ವಿಧಿಯಲ್ಲಿ ಅಲ್ಪಸಂಖ್ಯಾತರಿಗೆ ಕನಿಷ್ಟ ವಿದ್ಯಾಭ್ಯಾಸಕ್ಕೆ ಅವರಿಗೆ ರಕ್ಷಣೆ ಕೊಡಬೇಕು ಮತ್ತು ಸರ್ಕಾರ ಯಾವುದೇ ರೀತಿಯಲ್ಲಿ ಅವರ ಮಧ್ಯದಲ್ಲಿ ಪ್ರವೇಶ ಮಾಡಬಾರದು ಎನ್ನುವ ಒಂದು ರಕ್ಷಣೆಯನ್ನೂ ಕೂಡ ಕೊಡಲಾಗಿದೆ. ಇದರ ಬಗ್ಗೆ ಕೂಡ ಇವತ್ತು ನಾವು ಯೋಚನೆ ಮಾಡಬೇಕಾದುದು ಬಹಳ ಅಗತ್ಯ. ಏಕೆಂದರೆ ಇವತ್ತು ಅಲ್ಪ ಸಂಖ್ಯಾತರ ಕೋಮಿಗೆ ಸೇರಿದ ಜನರ ಮತ್ತು ವಿದ್ಯಾರ್ಥಿಗಳ ಸಹಾಯಕೋಸ್ಕರ, ಅವರ ಪ್ರಯೋಜನಕ್ಕೋಸ್ಕರ, ಅವರಿಗೆ ರಕ್ಷಣೆ ಕೊಡುವುದಕ್ಕೋಸ್ಕರ ನಾವು ಸಂವಿಧಾನದಲ್ಲಿ ಈ ಒಂದು ಅಂಶವನ್ನು ಸೇರಿಸಿದ್ದೇವೆ, ಆದರೆ ವ್ಯವಹಾರದಲ್ಲಿ ಏನಾಗುತ್ತಿದೆ ಎಂದರೆ ಆ ಒಂದು ಕೋಮಿನ ಮತ್ತು ವಿದ್ಯಾರ್ಥಿಗಳ ಹೆಸರಿನಲ್ಲಿ ವಿದ್ಯಾ ಸಂಸ್ಥೆಗಳನ್ನು ನಡೆಸುವಂತಹ ಮ್ಯಾನೇಜ್‌ಮೆಂಟ್‌ಗಳು ಅವ್ಯವಹಾರಗಳನ್ನು ನಡೆಸುವಾಗ ಕೂಡ ಮಧ್ಯೆ ಪ್ರವೇಶ ಮಾಡುವುದಕ್ಕೆ ಮತ್ತು ಅದನ್ನು ಹತೋಟಿಯಲ್ಲಿಡುವುದಕ್ಕೆ ಆತಂಕವಾಗುವ ರೀತಿಯಲ್ಲಿ ನಾವು ಇವತ್ತು ಇದನ್ನು ಪಾಲಿಸುತ್ತಿದ್ದೇವೆ ಆದ್ದರಿಂದ ಇದರ ಬಗ್ಗೆ ವಿಚಾರ ನಡೆಸಿ, ಅವ್ಯವಹಾರಗಳು ಆಗದ ಹಾಗೆ ಮಾಡುವುದಕ್ಕೆ ಬೇಕಾದಂತಹ ಅಧಿಕಾರಿಗಳನ್ನು ಇವತ್ತು ವಿದ್ಯಾ ಇಲಾಖೆಗೆ ಕೊಡುವ ಹಾಗೆ ಸಂವಿಧಾನದಲ್ಲಿ ತಿದ್ದುಪಡಿ ಆಗುವ ಹಾಗೆ ಇದ್ದರೆ ಮಾಡಬೇಕು ಇಲ್ಲದಿದ್ದರೆ ಸಂವಿಧಾನದಲ್ಲಿ ಬದಲಾವಣೆ ಮಾಡುವಾಗ, ಖಾಸಗಿಯವರು ನಡೆಸತಕ್ಕ ಶಾಲೆಗಳಲ್ಲಿ ಅವ್ಯವಹಾರಗಳು ನಡೆಯದ ಹಾಗೆ ನಿಯಂತ್ರಣಕ್ಕೆ ತರುವುದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಹೇಳುವಾಗ ಇವತ್ತು ನಮ್ಮ ವಿದ್ಯಾ ಕ್ಷೇತ್ರದಲ್ಲಿರತಕ್ಕ ಮುಖ್ಯ ಪ್ರಶ್ನೆಗಳನ್ನು ಗಮನಿಸಬೇಕಾಗುತ್ತದೆ. ತಾವು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರವೇ ಪ್ರತಿಯೊಂದು ಮಟ್ಟದಲ್ಲಿ ನೋಡಿದಾಗಲೂ ಕೂಡ ಸರ್ಕಾರಿ ಶಾಲೆಗಳಿಗಿಂತ ಖಾಸಗಿ ಶಾಲೆಗಳ ಸಂಖ್ಯೆ ಜಾಸ್ತಿ ಇವೆ. ಕಾಲೇಜಿನ ಮಟ್ಟಕ್ಕೆ ಬಂದರೆ ೨೪ ಸರ್ಕಾರೀ ಕಾಲೇಜುಗಳಿದ್ದರೆ ೨೪೪ ಖಾಸಗೀ ಕಾಲೇಜುಗಳಿವೆ. ವಿದ್ಯಾರ್ಥಿ ಸಂಖ್ಯೆಗಳನ್ನು ನೋಡಿದರೆ, ಪಿ.ಯು.ಸಿ.ಯಲ್ಲಿ ೧೪೫೯೯ ಮಂದಿ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಲ್ಲಿದ್ದರೆ ೬೮೮೫೧ ಮಂದಿ ವಿದ್ಯಾರ್ಥಿಗಳು ಖಾಸಗೀ ಶಾಲೆಗಳಲ್ಲಿದ್ದಾರೆ. ಡಿಗ್ರಿ ಕೋರ್ಸನ್ನು ತೆಗೆದುಕೊಂಡರೆ ೨೮೦೩೮ ವಿದ್ಯಾರ್ಥಿಗಳು ಸರ್ಕಾರಿ ಕಾಲೇಜುಗಳಲ್ಲಿಯೂ ೮೧೮೧೦ ವಿದ್ಯಾರ್ಥಿಗಳು ಖಾಸಗೀ ಕಾಲೇಜುಗಳಲ್ಲಿ ಕಲಿಯುತ್ತಿದ್ದಾರೆ ಅಧ್ಯಾಪಕರುಗಳ ಸಂಖ್ಯೆಯನ್ನು ನೋಡಿದರೂ ಕೂಡ ಸರ್ಕಾರೀ ಶಾಲೆಗಳಿಗಿಂತ ಖಾಸಗೀ ಶಾಲೆಗಳಲ್ಲಿ ಜಾಸ್ತಿ ಇದೆ. ಖಾಸಗೀ ಶಾಲೆಗಳಲ್ಲಿ ಅಧ್ಯಾಪಕರುಗಳನ್ನು ಸಾಕಷ್ಟು ಮಂಜೂರ್ಮಾಡುತ್ತಿದ್ದಾರೆ; ಆದರೆ ಸರ್ಕಾರಿ ಶಾಲೆಗಳಲ್ಲಿ ಅಧ್ಯಾಪಕರ ಅಗತ್ಯ ಇದ್ದರೂ ಕೂಡ ಅವರನ್ನು ನೇಮಕ ಮಾಡುವುದಕ್ಕೆ ಸರ್ಕಾರದಿಂದ ಮಂಜೂರಾತಿ ಬರುವುದಿಲ್ಲ. ಏತಕ್ಕೆ ಇಂಥ ಒಂದು ವಿಪರ್ಯಾಸ ಎಂದು ಗೊತ್ತಾಗುವುದಿಲ್ಲ. ನಿನ್ನೆ ದಿವಸ

ಮಾನ್ಯ ಮಳ್ಳೂರು ಆನಂದರಾಯರು ಹೇಳಿದ ಹಾಗೆ, ಪ್ರಾಥಮಿಕ ಹಂತದಿಂದ ಹಿಡಿದು ಕಾಲೇಜು ಮಟ್ಟದವರೆಗೆ ಶಾಲಾ ಕಾಲೇಜುಗಳನ್ನು ನಡೆಸತಕ್ಕ ಮ್ಯಾನೇಜ್‌ಮೆಂಟ್‌ನವರು ಕೋಟ್ಯಾಂತರ ರೂಪಾಯಿಗಳನ್ನು ವಿದ್ಯಾ ಇಲಾಖೆಯಿಂದ ಹೊಡೆದುಕೊಳ್ಳುವುದರಲ್ಲಿ ಈ ವಿದ್ಯಾ ಇಲಾಖೆಯ ಅಧಿಕಾರಿಗಳು ಕೂಡ ಮೇಲಿನಿಂದ ಹಿಡಿದು ಕೆಳಗಿನವರೆಗೆ ಶಾಮೀಲಾಗುತ್ತಾರೆಂದು ಕಾಣುತ್ತದೆ ಆದ್ದರಿಂದ, ಇದನ್ನು ತೀವ್ರವಾಗಿ ಬದಲಾವಣೆ ಮಾಡತಕ್ಕದ್ದು ಆವಶ್ಯಕವಾಗಿದೆ. ಏಕೆಂದರೆ, ರಾಷ್ಟ್ರದ ಪುನರ್‌ನಿರ್ಮಾಣಕ್ಕೆ ಇದು ಆಧಾರವಾದ್ದರಿಂದ ಸರ್ಕಾರ ಈ ಬಗ್ಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಸರ್ಕಾರ ಇಡೀ ವಿದ್ಯಾಭ್ಯಾಸದ ಕ್ಷೇತ್ರವನ್ನು ತನ್ನ ಒಂದು ಹತೋಟಿಗೆ, ಹದ್ದುಬಸ್ತಿಗೆ ತರಬೇಕಾಗುತ್ತದೆ. ಖಾಸಗಿಯವರಿಗೆ ಪ್ರೋತ್ಸಾಹ ಕೊಡುತ್ತಾ ಬಂದರೆ ಬಹಳ ಕಷ್ಟವಾಗುತ್ತದೆ, ಭ್ರಷ್ಟಾಚಾರಕ್ಕೆ, ಪ್ರತಿಯೊಂದಕ್ಕೆ ಅವಕಾಶ ಮಾಡಿ ಕೊಟ್ಟಾಂತಾಗುತ್ತದೆಂದು ಹೇಳಬಯಸುತ್ತೇನೆ. ಮಾನ್ಯ ಆನಂದರಾಯರು ವಿದ್ಯಾ ಕ್ಷೇತ್ರದಲ್ಲಿ ದುಡಿದವರು ಮತ್ತು ಅವರು ಹಲವು ಪ್ರಸಂಗಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ; ಅವುಗಳ ಬಗ್ಗೆ ವಿಚಾರಣೆ ನಡೆಸಿದರೆ ಸತ್ಯಾಂಶ ಕಂಡುಬರುತ್ತದೆಂದು ಕಾಣುತ್ತದೆ. ಅವರು ನಿನ್ನೆ ಏನು ದಾಖಲೆಗಳನ್ನು ಒದಗಿಸಿದ್ದಾರೆ ಆ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ, ಕ್ರಮ ತೆಗೆದುಕೊಂಡಿದ್ದರಿಂದ ಮಾತ್ರವೇ ಭ್ರಷ್ಟಾಚಾರ ಮುಕ್ತಾಯವಾಗುತ್ತದೆಂದು ನನಗನ್ನಿಸುವುದಿಲ್ಲ ಏಕೆಂದರೆ, ಇವತ್ತು ಇರತಕ್ಕ ವಿದ್ಯಾಭ್ಯಾಸದ ವಿಧಾನ ಕೂಡ ಭ್ರಷ್ಟಾಚಾರಕ್ಕೆ ಪೂರಕವಾಗುವ ರೀತಿಯಲ್ಲಿ, ಅವಕಾಶ ಕೊಡುವ ರೀತಿಯಲ್ಲಿ ನಡೆಯುತ್ತಾ ಇರುವುದರಿಂದ ತನಿಖೆ ಮಾಡಿದ ಮಾತ್ರಕ್ಕೆ ಮುಕ್ತಾಯವಾಗುತ್ತದೆಂದು ಅನ್ನಿಸುವುದಿಲ್ಲ. ಆದ್ದರಿಂದ, ಇವತ್ತಿನ ಎಲ್ಲ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯಾ ಕ್ಷೇತ್ರದಲ್ಲಿ ಅವುಗಳನ್ನು ಪೂರೈಸಲೇ ಬೇಕಾದ ರೀತಿಯಲ್ಲಿ ವಿದ್ಯಾ ಕ್ಷೇತ್ರವನ್ನು ಪುನರ್ರಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಇನ್ನು ನಮ್ಮ ಮಾನ್ಯ ವಿದ್ಯಾ ಸಚಿವರನ್ನು ಒಂದು ವಿಚಾರದಲ್ಲಿ ಅಭಿನಂದಿಸಲಿಚ್ಛಿಸುತ್ತೇನೆ. ನಮ್ಮ ರಾಜ್ಯದಲ್ಲಿ ೨ ಹೊಸ ವಿಶ್ವವಿದ್ಯಾನಿಲಯಗಳನ್ನು ರಚನೆ ಮಾಡುವುದಕ್ಕೆ ಸರ್ಕಾರ ತೀರ್ಮಾನ ಮಾಡಿದೆ ಎಂದು ಮಾನ್ಯ ಸಚಿವರು ಈ ಸದನದಲ್ಲಿ ಹೇಳಿದರು. ಇದರ ಬಗ್ಗೆ ಸಮಿತಿಗಳನ್ನು ರಚನೆ ಮಾಡಬೇಕೆಂದು ವರದಿಗಳು ಬಂದಿವೆ. ಈ ಬಗ್ಗೆ ಹೇಳಬೇಕೆಂದರೆ, ಹೊಸ ವಿಶ್ವ ವಿದ್ಯಾನಿಲಯಗಳನ್ನು, ಹಳೆಯ ಕರ್ನಾಟಕ ವಿಶ್ವ ವಿದ್ಯಾನಿಲಯಗಳ ಶಾಸನ ಏನಿದೆ ಅದಕ್ಕೆ ಒಳಪಟ್ಟಂತೆ ಸ್ಥಾಪನೆ ಮಾಡುವುದರಿಂದ, ನಿಜವಾಗಿ ಯಾವ ಉದ್ದೇಶದಿಂದ ವಿಶ್ವ ವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಬೇಕೋ ಆ ಉದ್ದೇಶ ಈಡೇರಿದಂತೆ ಆಗುವುದಿಲ್ಲ. ಹಳೆಯ ಶಾಸನವನ್ನು ಪೂರ್ಣವಾಗಿ ಬದಲಾವಣೆ ಮಾಡಬೇಕಾದ ಅವಶ್ಯಕತೆ ಇರುವಾಗ ಹೊಸ ವಿಶ್ವ ವಿದ್ಯಾನಿಲಯಗಳನ್ನು ಕೂಡ ಅದೇ ರೀತಿಯಲ್ಲಿ ಅದೇ ಶಾಸನದ ಕೆಳಗೆ ಮಾಡುವುದರಿಂದ ನಮ್ಮ ಉದ್ದೇಶ ಈಡೇರುವುದಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳುತ್ತೇನೆ. ವಿಶ್ವ ವಿದ್ಯಾನಿಲಯಗಳಿಗೆ ಸ್ವಯಂ ಆಡಳಿತದ ಹಕ್ಕನ್ನು ಕೊಡತಕ್ಕದ್ದು ಹಳೆಯ ಶಾಸನದಲ್ಲಿ ನಿಷೇಧವಾಗಿದೆ. ಆ ಉದ್ದೇಶ ಈಡೇರಲಿಕ್ಕೆ ಸಾಧ್ಯವಿಲ್ಲವಾಗಿದೆ. ಅಂದಾಗ ಸರ್ಕಾರ ಹೆಚ್ಚಿನ ಅಧಿಕಾರವನ್ನು ಪಡೆಯುವ ದೃಷ್ಟಿಯಿಂದ ತಾವು ಆ ಶಾಸನವನ್ನು ಮಾಡಿದ್ದೀರಿ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಇವತ್ತು ಏನಾಗಿದೆ ಎಂದರೆ ಸರ್ಕಾರಕ್ಕೂ ಕೂಡ ವಿಶ್ವ ವಿದ್ಯಾನಿಲಯಗಳನ್ನು ಹತೋಟಿಗೆ ತರತಕ್ಕ ಅಧಿಕಾರ ಇಲ್ಲವೋ ಏನೋ ಎಂದೂ ಮತ್ತು ಸೆನೇಟ್, ಸಿಂಡಿಕೇಟ್ ಮತ್ತು ಅಕ್ಯಾಡೆಮಿಕ್ ಕೌನ್ಸಿಲ್ ಮಾಡಿದ ತೀರ್ಮಾನಗಳನ್ನು ಕೂಡ ರದ್ದು ಮಾಡಿ ತಾನೇ ನೇರವಾಗಿ ವಿಶ್ವ ವಿದ್ಯಾನಿಲಯಗಳ ವ್ಯವಹಾರಗಳಲ್ಲಿ ಮಧ್ಯೆ ಪ್ರವೇಶ ಮಾಡಿ ತನ್ನ ಆಜ್ಞೆಯನ್ನು ಅಲ್ಲಿ ಜಾರಿಗೊಳಿಸುವುದಕ್ಕೆ ಛಾನ್ಸಲರ್ ಅವರಿಗೆ ಪೂರ್ತಿಯಾಗಿ ಅಧಿಕಾರವನ್ನು ಕೊಟ್ಟಂತೆ ಈ ಶಾಸನದಲ್ಲಿ ಕಂಡು ಬರುತ್ತದೆ. ಆದ್ದರಿಂದ ಈ ಶಾಸನವನ್ನು ಬದಲಾವಣೆ ಮಾಡಬೇಕು, ಅವು ಸ್ವಯಂ ಆಡಳಿತವನ್ನು, ಅಧಿಕಾರವನ್ನು ಹೊಂದಿದ ವಿಶ್ವ ವಿದ್ಯಾನಿಲಯಗಳಾಗಿ ನಡೆಯಬೇಕೆಂದು ಒತ್ತಾಯ ಮಾಡುತ್ತೇನೆ. ಎರಡನೆಯದಾಗಿ ವಿಶ್ವ ವಿದ್ಯಾನಿಲಯಗಳು ಎಲ್ಲೋ ಶಿಖರದಲ್ಲಿದ್ದುಕೊಂಡು, ಎಲ್ಲ ಜನರ ಮೇಲೆ ಏನೋ ನಾವು ಮೇಧಾವಿಗಳು, ಬುದ್ಧಿ ಜೀವಿಗಳು ಎಂಬ ರೀತಿಯಲ್ಲಿ ಇರುವುದರಿಂದ ಉಪಯೋಗವಿಲ್ಲ. ವಿಶ್ವ ವಿದ್ಯಾನಿಲಯಗಳು ನಮ್ಮ ರಾಜ್ಯದಲ್ಲಿರುವ ಸಾಮಾನ್ಯ ಜನತೆಗೆ ನೇರವಾಗಿ ಸಂಪರ್ಕ ಹೊಂದುವ ರೀತಿಯಲ್ಲಿ ತಮ್ಮ ರಚನೆ ಮತ್ತು ಚಟುವಟಿಕೆಗಳನ್ನು ರೂಪಿಸಿಕೊಳ್ಳಬೇಕಾದುದು ಬಹಳ ಅಗತ್ಯ. ವಿಶ್ವ ವಿದ್ಯಾನಿಲಯಗಳು ಜನ ಸಾಮಾನ್ಯರ ಅನೇಕ ಕಾರ್ಯಗಳಲ್ಲಿ ಅವರಿಗೆ ಬೇಕಾದ ಶಿಕ್ಷಣವನ್ನು ಕೊಡುವುದಕ್ಕೆ, ವಯಸ್ಕರ ಶಿಕ್ಷಣದಲ್ಲಿ ನೇರವಾಗಿ

ಭಾಗಿಗಳಾಗುವುದಕ್ಕೆ, ಹಾಗೂ ರಚನಾತ್ಮಕ ಕಾರ್ಯಗಳಲ್ಲಿ ತೊಡಗುವುದಕ್ಕೆ, ವಿಶ್ವ ವಿದ್ಯಾನಿಲಯದ ಅಧ್ಯಾಪಕರು ವಿದ್ಯಾರ್ಥಿಗಳಿಗೂ ಸಹ ಸಹಾಯವಾಗುವ ಹಾಗೆ ಯೋಜನೆಗಳನ್ನು ತಯಾರಿಸಿ, ವಿಶ್ವ ವಿದ್ಯಾನಿಲಯಗಳು ಜನತೆಯ ಸಂಸ್ಥೆಗಳಾಗಿ ಬೆಳೆಯುವ ರೀತಿಯಲ್ಲಿ ಶಾಸನವನ್ನು ರೂಪಿಸುವುದಕ್ಕೆ ತಾವು ಮುಂದೆ ಶಾಸನ ಮಾಡುವಾಗ ಗಮನ ಕೊಡುತ್ತೀರೆಂದು ನಾನು ಭಾವಿಸುತ್ತೇನೆ.

ಇನ್ನು ಪ್ರಾಥಮಿಕ ಶಾಲೆಗಳಲ್ಲಿ ಮಧ್ಯಾಹ್ನದ ಆಹಾರವನ್ನು ಒದಗಿಸುತ್ತಿರುವ ಬಗ್ಗೆ ಹೇಳುವುದಾದರೆ, ಅದು ಬಹಳ ಒಳ್ಳೆಯ ಯೋಜನೆ ಬಡ ವಿದ್ಯಾರ್ಥಿಗಳು ಯಾರಿದ್ದಾರೆ. ಹಾಗೂ, ಅವಶ್ಯಕತೆ ಇರುವವರಿಗೆಲ್ಲರಿಗೂ ಆಹಾರವನ್ನು ಒದಗಿಸುತ್ತಿದ್ದೀರಿ. ಅದು ಹೆಚ್ಚು-ಕಡಿಮೆ, ಒಳ್ಳೆಯದು-ಕೆಟ್ಟದ್ದು ಎಂದು ಹೇಳತಕ್ಕ ಪ್ರಶ್ನೆ ಬೇರೆ. ಅದರ ಜೊತೆಗೆ ಹೊಸದೊಂದು ಕಾರ್ಯಕ್ರಮವನ್ನು ತಂದಿದ್ದೀರಿ. ಅದು ಯಾವುದೆಂದರೆ, ನ್ಯೂಟ್ರಿಷನ್ ಚಾಕಲೆಟ್ ಎಂದು ಕೊಡುತ್ತಿರುವುದು, ಅದು ಶೇಂಗಾ ತರಹ ಇರುತ್ತದೆ. ಅದನ್ನು ಹರಿಜನ ಮತ್ತು ಗಿರಿಜನ ಮಕ್ಕಳಿಗೆ ಹಂಚಬೇಕೆಂದು ಏರ್ಪಾಟು ಮಾಡಿದ್ದೀರಿ. ಅದನ್ನು ಹಂಚುವುದು ಬಹಳ ಒಳ್ಳೆಯದು. ನಾನು ಅದಕ್ಕೆ ವಿರೋಧಿಯಲ್ಲ. ನನ್ನ ಪ್ರಾರ್ಥನೆ ಏನೆಂದರೆ ಇದನ್ನು ಎಲ್ಲಾ ಶಾಲೆಗಳಲ್ಲಿ ಎಲ್ಲಾ ಮಕ್ಕಳಿಗೂ ಹಂಚುವ ಏರ್ಪಾಡು ಮಾಡಬೇಕು. ಶಾಲೆಗಳಲ್ಲಿ ಚಾಕೋಲೇಟ್ ಹಂಚುವಾಗ ಬಡವರ ಮಕ್ಕಳು ಯಾರಿದ್ದಾರೆ ಅವರಿಗೆ ಹಂಚಿ, ಉಳಿದವರನ್ನು ಹಾಗೆಯೇ ಬಿಡಬಾರದು; ಕೊಟ್ಟರೆ ಎಲ್ಲಾ ಮಕ್ಕಳಿಗೂ ಕೊಡಬೇಕು. ಶಾಲೆಗಳಲ್ಲಿ ಒಂದು ಮಗುವಿಗೆ ಚಾಕೋಲೇಟ್ ಕೊಟ್ಟು ಇನ್ನೊಂದು ಮಗುವಿಗೆ ಅದನ್ನು ಕೊಡದೇ ಹೋದರೆ ಆ ಮಗು ಚಾಕೋಲೇಟ್ ತಿನುತ್ತಾ ಇರತಕ್ಕಂಥ ಮಗುವನ್ನು ನೋಡುತ್ತಾ ನಿಂತರೆ ಅವರಲ್ಲಿ ಕೂಡ ಜಾತೀಯ ಭಾವನೆ ಬೆಳೆಯುತ್ತದೆ. ಅವರಲ್ಲಿ ಜಾತೀಯ ಭಾವನೆ ಬೆಳೆಯುವುದು ಮಾತ್ರವಲ್ಲ, ಪರಸ್ಪರರಲ್ಲಿ ಪಂಕ್ತಿ ಭೇದ ತಾರತಮ್ಯ ಭಾವನೆ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇದಕ್ಕೆ ಈ ಒಂದು ವಿದ್ಯಾ ಕ್ಷೇತ್ರದಲ್ಲಿ ತಾವು ಅವಕಾಶ ಮಾಡಿಕೊಡಬಾರದು. ಇದನ್ನು ಬೇಕಾದರೆ ಮನೆ ಮನೆಗೆ ತಲುಪಿಸುವ ಏರ್ಪಾಡು ಮಾಡಿ, ಅಥವಾ ಹಣದ ರೂಪದಲ್ಲಿ ಕೊಡಿ.

೩–೦೦ ಪಿ. ಎಂ.

ಅಧ್ಯಕ್ಷರು.—ಅವರಿಗೆ ಬೇರೆ ಬೇರೆಯಾಗಿ ಕೊಡುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಶಾಲೆಗಳಲ್ಲಿ ಪಂಕ್ತಿ ಭೇಧ ಮಾಡಬಾರದೆಂಬುದೇ ನನ್ನ ಅಭಿಪ್ರಾಯ ಒಬ್ಬರು ತಿನ್ನುವಾಗ ಇನ್ನೊಬ್ಬರು ನೋಡಿಕೊಂಡು ಕುಳಿತರೆ ಅದರಿಂದ ಜಾತೀ ಭಾವನೆ ಬರುತ್ತದೆ. ಆದ್ದರಿಂದ ಕೊಟ್ಟರೆ ಎಲ್ಲರಿಗೂ ಕೊಡಬೇಕು. ಯಾರು ಬಡಮಕ್ಕಳು ಇರುತ್ತಾರೆ ಅವರಿಗೆ ಜಾಸ್ತಿ ಕೊಡಿ. ಈ ಚಾಕೋಲೇಟ್ ತಿನ್ನುವ ಮಟ್ಟಿಗೆ ಬೇರೆಯವರಿಗೆ ಏನು ಸವಲತ್ತನ್ನು ಕೊಡುತ್ತಿರೋ ಅದನ್ನು ಎಲ್ಲರಿಗೂ ಕೊಡಿ ಎಂದು ಹೇಳುತ್ತಿದ್ದೇನೆ. ಇದರಲ್ಲಿ ಒಂದು ಮಗುವಿಗೆ ಕೊಟ್ಟು ಇನ್ನೊಂದು ಮಗುವಿಗೆ ಇಲ್ಲ ಎಂದು ಹೇಳಿದರೆ ಅದು ಸಮಂಜಸವಾಗಿರುವುದಿಲ್ಲ,

ಶ್ರೀ ವಿ ಎಂ. ಗಾಡಿ.—ಅದನ್ನು ಎಲ್ಲರಿಗೂ ಕೊಡುತ್ತಾರೆ, ಯಾರನ್ನು ಬಿಡುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಬಡಮಕ್ಕಳಿಗೆ ಅದನ್ನು ಕೊಡಬಾರದು ಎಂದು ನಾನು ಹೇಳುವುದಿಲ್ಲ. ಒಬ್ಬರಿಗೆ ಕೊಟ್ಟು ಇನ್ನೊಬ್ಬರನ್ನು ಬಿಡುವುದರಿಂದ ಈ ಎಳೆಯ ಪ್ರಾಯದ ಮಕ್ಕಳಲ್ಲಿ. ಅವರ ಇಂಪ್ರೆಷನೇಬಲ್ ಏಜ್‌ನಲ್ಲಿ ಭೇದಭಾವನೆಗಳು ಬರುವುದಕ್ಕೆ ಅವಕಾಶ ಇದೆ. ಆ ಒಂದು ಏಜಿನಲ್ಲಿ ಆ ಮಕ್ಕಳಿಗೆ ಭೇದಭಾವನೆಗಳು ಬೆಳೆಯುವಂತೆ ಮಾಡುವುದಕ್ಕೆ ಹೋಗಬೇಡಿ ಎಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಚಾರವೇನೆಂದರೆ ಇವತ್ತು ಖಾಸಗೀ ವಿದ್ಯಾಸಂಸ್ಥೆಗಳನ್ನು ನಡೆಸತಕ್ಕಂಥ ಜನ ಬಹಳ ಪ್ರಬಲರಾಗಿದ್ದಾರೆ. ತಾವು ಈ ವಿದ್ಯಾಭ್ಯಾಸ ಕ್ಷೇತ್ರದ ಅಭಿವೃದ್ಧಿಗಾಗಿ ಬಹಳಷ್ಟು ಹಣವನ್ನು ಖರ್ಚು ಮಾಡಿತ್ತಿದ್ದೀರಿ ; ಅವರನ್ನು ತಾವು ಹತೋಟಿಗೆ ತರಬೇಕು. ಈ ಒಂದು ಖಾಸಗೀ ವಿದ್ಯಾಸಂಸ್ಥೆಗಳಲ್ಲಿ ದೊಡ್ಡ ದೊಡ್ಡ ಅಧಿಪತಿಗಳು ಇದ್ದಾರೆ; ಈ ಸಂಸ್ಥೆಗಳಲ್ಲಿ ಏನೇನು ಭ್ರಷ್ಟಚಾರಗಳು ನಡೆಯುತ್ತವೆ ಎನ್ನ ತಕ್ಕಂಥ ವಿಚಾರಗಳೆಲ್ಲಾ ತಮಗೆ ಗೊತ್ತಿದೆ ಇವತ್ತು ಒಂದು ವಿಶ್ವವಿದ್ಯಾನಿಲಯದ ಕುಲಪತಿಗಳು ಈ ಖಾಸಗೀ ಸಂಸ್ಥೆಯವರು ಯಾವ ರೀತಿ ಹಣ ಹೊಡೆಯಬೇಕು ಎನ್ನುವುದರ ಬಗ್ಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಖಾಸಗೀಯವರ ಪ್ರಾಬಲ್ಯವನ್ನು ಬೆಳೆಸುವುದಕ್ಕೆ ಇವತ್ತು ಒಂದು ವಿಶ್ವವಿದ್ಯಾನಿಲಯದ ಕುಲಪತಿಗಳು ಪ್ರಯತ್ನ

ಮಾಡುತ್ತಾರೆ ಎಂದರೆ ಇದಕ್ಕೆ ಪ್ರೋತ್ಸಾಹ ಕೊಡತಕ್ಕಂಥಾದ್ದು ಸರಿಯಲ್ಲ. ಇವರು ಖಾಸಗೀ ವಿದ್ಯಾ ಸಂಸ್ಥೆಗಳಿಗೆ ಅಧಿಪತಿಗಳಾಗಿದ್ದುಕೊಂಡು, ಒಂದು ಅಡ್ಮಿನಿಸ್ಟ್ರೇಟಿವ್ ಸೊಸೈಟಿ ಎಂದು ಮಾಡಿಕೊಂಡು ಈ ರೀತಿ ಪ್ರಯತ್ನ ಮಾಡುತ್ತಾರೆ ಎಂದರೆ ಅವರಿಗೆ ಗೌರವ ಸಲ್ಲತಕ್ಕಂಥಾದ್ದಲ್ಲ ಎಂದು ಹೇಳಬೇಕಾಗಿದೆ. ಇದರಿಂದ ಆಗತಕ್ಕಂಥ ಅಪಾಯ ಏನು ಎಂಬುದನ್ನು ತಾವು ಯೋಚನೆ ಮಾಡಬೇಕು. ರಾಜ್ಯದಲ್ಲಿ ಹೊಸದಾಗಿ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡತಕ್ಕಂಥ ಕಾಲದಲ್ಲಿ ಇವರ ಒಂದು ಪ್ರಾಬಲ್ಯವನ್ನು ಹತೋಟಿಗೆ ತರಬೇಕು. ಇಲ್ಲದೇ ಹೋದರೆ ಈ ಹೊಸ ವಿಶ್ವ ವಿದ್ಯಾನಿಲಯಗಳನ್ನು ಇವರು ತಮ್ಮ ಹತೋಟಿಗೆ ತೆಗೆದುಕೊಳ್ಳುವುದಕ್ಕೆ ಬರುತ್ತಾರೆ. ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ ೩೩ ಕಾಲೇಜುಗಳು ಇವೆ. ಇದರಲ್ಲಿ ಸರ್ಕಾರಿ ಕಾಲೇಜುಗಳು ೨ ಮಾತ್ರ ಇದೆ. ಇನ್ನುಳಿದ ಕಾಲೇಜುಗಳಲ್ಲಿ ಖಾಸಗೀ ಜನರ ಮ್ಯಾನೇಜ್‌ಮೆಂಟ್ ಇದೆ. ಈ ಕಾಲೇಜುಗಳಲ್ಲಿ ಇರತಕ್ಕಂಥ ಖಾಸಗೀ ಮ್ಯಾನೇಜ್‌ಮೆಂಟ್‌ಗಳವರು ಸರ್ಕಾರದ ಅಧಿಕಾರಿಗಳ ಮೂಲಕ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವುದಷ್ಟೇ ಅಲ್ಲ, ವಿಶ್ವ ವಿದ್ಯಾನಿಲಯಗಳನ್ನು ತಮ್ಮ ಹತೋಟಿಗೆ ತೆಗೆದುಕೊಂಡು ಲಂಗುಲಗಾಮು ಇಲ್ಲದೇ ಅಧಿಕಾರ ಮಾಡಿ ಇಡೀ ವಿದ್ಯಾ ಕ್ಷೇತ್ರವನ್ನೇ ಕೆಡಿಸುವಂಥ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ತಾವು ಗಮನಿಸಬೇಕು. ಇದನ್ನು ತಡೆ ಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಮತ್ತೊಂದು ವಿಚಾರ ವೇನೆಂದರೆ ಮೊನ್ನೆಯ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಒಬ್ಬರು ವಿದ್ಯಾರ್ಥಿಗಳು ಪರೀಕ್ಷೆಗೆ ಆಯುಧಗಳನ್ನು ಹಿಡಿದುಕೊಂಡು ಹೋಗುವಂಥಾದ್ದರ ಬಗ್ಗೆ ಮತ್ತು ಇದೆಲ್ಲಾ ಏತಕ್ಕೋಸ್ಕರ ಆಗುತ್ತಿವೆ ಎಂಬ ಬಗ್ಗೆ ಲೇಖನವನ್ನು ಬರೆದಿದ್ದಾರೆ. ಅವರು ಏನು ಹೇಳುತ್ತಾರೆ ಎಂದರೆ, ಇವತ್ತು ಹಳ್ಳಿಗಳಲ್ಲಿ ಶ್ರೀಮಂತ ರೈತರ ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಎಷ್ಟು ಆಸಕ್ತಿ ಇದೆ ಎಂದರೆ ಅವರು ಬೇಗ ಡಿಗ್ರಿ ಪಡೆಯುವುದಕ್ಕೆ ಅಷ್ಟೇ, ಅವರು ನಾಳಿನ ಭವಿಷ್ಯತ್ತಿಗೆ ಇದನ್ನೇ ಹೊಂದಿಕೊಂಡಿರುವುದಿಲ್ಲ. ಆದರೆ ಮಧ್ಯಮ ವರ್ಗದ ಜನರ ಮಕ್ಕಳು ಶಾಲಾ ಕಾಲೇಜುಗಳಲ್ಲಿ ಚೆನ್ನಾಗಿ ಕಲಿತು, ನಾಳಿನ ಭವಿಷ್ಯತ್ತಿಗೆ ಅದನ್ನೇ ಹೊಂದಿಕೊಂಡಿರುತ್ತಾರೆ. ಆದ್ದರಿಂದ ಅವರು ಚೆನ್ನಾಗಿ ಅಭ್ಯಾಸ ಮಾಡುತ್ತಾರೆ, ಪರೀಕ್ಷೆಗಳಲ್ಲಿ ಹೆಚ್ಚಿನ ಮಾರ್ಕ್ಸ್‌ಗಳನ್ನು ತೆಗೆದುಕೊಳ್ಳುತ್ತಿರುತ್ತಾರೆ. ಅವರಿಗೆ ಬೇರೆ ಆಸ್ತಿ ಯಾವುದು ಇರುವುದಿಲ್ಲ, ವಿದ್ಯೆಯೇ ಅವರಿಗೆ ದೊಡ್ಡ ಆಸ್ತಿ. ಅವರು ಯಾವ ಒಂದು ಅಶಿಸ್ತಿನ ವರ್ತನೆಗೆ ಕಾರಣರಾಗಿರುವುದಿಲ್ಲ. ಆದರೆ ಈ ಶ್ರೀಮಂತ ರೈತರ ಮಕ್ಕಳು ಎಲ್ಲಾ ತರಹದ ಅಶಿಸ್ತಿಗೂ ಕಾರಣರಾಗಿರುತ್ತಾರೆ ಎನ್ನತಕ್ಕಂಥ ವಿಚಾರವನ್ನು ಸ್ಪಷ್ಟವಾಗಿ ಇದರಲ್ಲಿ ತೋರಿಸಿಕೊಟ್ಟಿದ್ದಾರೆ. ಈ ಬಗ್ಗೆ ತಾವು ಗಮನಹರಿಸಬೇಕು. ಇವತ್ತು ಶಾಲಾ ಕಾಲೇಜುಗಳಲ್ಲಿ, ಪ್ರೈಮರಿ ಶಾಲೆಗಳಲ್ಲಿ, ಎಲ್ಲಾ ಕಡೆಗಳಲ್ಲಿ ಕೂಡ ನಮ್ಮ ಮಕ್ಕಳಲ್ಲಿ ಒಂದು ರೀತಿಯ ಭೇದಭಾವನೆಗಳನ್ನು, ಜಾತೀಯ ಭಾವನೆಗಳನ್ನು ಕೆರಳಿಸಿ, ಅಧ್ಯಾಪಕರ ಮೇಲೆ, ಸಮಾಜದ ಮೇಲೆ ಒತ್ತಡ ಹೇರುವುದಕ್ಕೆ ಬೇಕಾದಂಥ ತರಬೇತಿಯನ್ನು ಕೊಡುವುದಕ್ಕೆ ಕೆಲವು ಸಂಘ ಸಂಸ್ಥೆಗಳು ಅವಕಾಶ ಮಾಡಿಕೊಡುತ್ತಿವೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಶಾಲೆಗಳಲ್ಲಿ ಈ ತರಹ ನಡೆಯುತ್ತಿದೆ ಆದ್ದರಿಂದ ನಾನು ಹೇಳುವುದೇನೆಂದರೆ ಶಾಲೆಗಳಲ್ಲಿ ಈ ತರಹ ಕಾರ್ಯ ನಡೆಯತಕ್ಕಂಥಾದ್ದನ್ನು ತಪ್ಪಿಸಿ, ಶಾಲೆಗಳಲ್ಲಿ ಸ್ಕೌಟ್, ಎನ್. ಸಿ. ಸಿ ಗಳವರು ಏನಿದ್ದಾರೆ ಅವರು ಮಕ್ಕಳಿಗೆ ಒಳ್ಳೆಯ ಚಟುವಟಿಕೆಗಳನ್ನು ಕಲಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ಸರ್ಕಾರದ ನಿಯಂತ್ರಣದಲ್ಲಿ ನಡೆಯುತಕ್ಕಂಥ ಯಾವುದೇ ಸಂಸ್ಥೆಗಳ ಮೂಲಕ ಮಕ್ಕಳಿಗೆ ಈ ಬಗ್ಗೆ ಅಭ್ಯಾಸ ಕೊಡುವಂತೆ ವ್ಯವಸ್ಥೆ ಮಾಡಿ. ಸಂಸ್ಕೃತಿಯ ಹೆಸರಿನಲ್ಲಿ ಕೆಲಸ ಮಾಡತಕ್ಕಂಥ ಸಂಸ್ಥೆಗಳು ಸರ್ಕಾರೀ ಮೈದಾನಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಮಕ್ಕಳಿಗೆ ಆಯುಧ ಸಮೇತ ಟ್ರೈನಿಂಗ್ ಕೊಡತಕ್ಕಂಥಾದ್ದನ್ನು ತಾವು ತಡೆಹಿಡಿಯಬೇಕು. ಮಾನ್ಯ ಮುಖ್ಯ ಮಂತ್ರಿಯವರು ಬೊಂಬಾಯಿಯಲ್ಲಿ 'ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ' ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ತಮ್ಮ ಸರ್ಕಾರದಲ್ಲಿ ಒಂದು ಕಾನೂನು ಆಗಬೇಕು. ಈ ಬಗ್ಗೆ ಆ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ಮಾನ್ಯ ಕಾನೂನು ಸಚಿವರು ವಿರೋಧ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಎಂದರೆ ಅದರಿಂದ ನಮಗೆ ಬೇಸರವಾಗಿದೆ ಹಾಗೂ ಭಯವಾಗುತ್ತಾ ಇದೆ. ಏಕೆಂದರೆ ನಮ್ಮ ದೇಶದಲ್ಲಿ ಎಲ್ಲಾ ಕಡೆಗಳಲ್ಲಿ ಕೂಡ ಸಾರ್ವಜನಿಕ ಸ್ಥಳಗಳಲ್ಲಿ ಇಂತಹ ತರಬೇತಿ ಆಗುವಂಥಾದ್ದನ್ನು ತಡೆಯಬೇಕು ಎನ್ನುವ ಪ್ರಯತ್ನ ನಡೆಯುತ್ತಿರುವಾಗ, ನಮ್ಮ ಕರ್ನಾಟಕ ರಾಜ್ಯದಲ್ಲಿ ಕೂಡ ಆ ಒಂದು ಪ್ರಯತ್ನ ಮಾಡುತ್ತಾ ಇರುವಾಗ ತಮ್ಮ ಸರ್ಕಾರದಲ್ಲಿ ಇದಕ್ಕೆ ಸಾಕಷ್ಟು ದೃಢವಾದ ಸಂಕಲ್ಪ ಇಲ್ಲವಲ್ಲ ಎಂದು ನಮಗೆ ಭಯ ಬರುತ್ತಿದೆ. ಅಂತಹ ದೃಢ ಸಂಕಲ್ಪವನ್ನು ತಾವು ಮಾಡಬೇಕು

ಎಂದು ಹೇಳುತ್ತೇನೆ. ಇದರಲ್ಲಿ ಏನಾದರೂ ಆತಂಕಗಳು ಇದ್ದರೆ ಕಾನೂನು ತಜ್ಞರನ್ನು ವಿಚಾರಿಸಿ, ನಮ್ಮ ಶಾಲಾ ಕಾಲೇಜುಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಇಂತಹ ತರಬೇತಿಗಳನ್ನು ಮಕ್ಕಳಿಗೆ ಕೊಡುವಂಥಾದ್ದನ್ನು ತಡೆಗಟ್ಟಲು ಬೇಕಾದಂಥ ಕ್ರಮಗಳನ್ನು ಸರ್ಕಾರದವರು ನಿರ್ದಾಕ್ಷಿಣ್ಯವಾಗಿ ಕೈಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ ಇಷ್ಟು ವಿಷಯಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆನಂದಕುಂದ ಹೆಗಡೆ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ವಿದ್ಯಾಖಾತೆಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಯ ಮೇಲೆ ಮಾತನಾಡುತ್ತಾ, ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಒಂದು ರಾಜ್ಯದ ಅಥವಾ ದೇಶದ ಕ್ಷೇಮ, ಅಭ್ಯುದಯ ಹಾಗೂ ಭವಿಷ್ಯವು ಅದರಲ್ಲಿಯೂ ಮಾನವನ ಮನೋಧರ್ಮವೂ ಅಲ್ಲಿನ ಒಂದು ದಕ್ಷತೆಯ ಮೇಲೆ ಹಾಗೂ ಯೋಗ್ಯತೆಯ ಮೇಲೆ ಅವಲಂಬಿಸಿರುತ್ತದೆ. ಮತ್ತೆ ದಕ್ಷತೆ ಹೆಚ್ಚಬೇಕಾದರೆ ವಿದ್ಯೆಯ ಪಾತ್ರ ಅನಿವಾರ್ಯ. ಈ ವಿದ್ಯೆ ವಿಚಾರವು ಸಾಕಷ್ಟು ವಾದಗ್ರಸ್ತವಾಗಿರುವುದರಿಂದ ಪಕ್ಷಗಳು ಪ್ರತಿಪಕ್ಷಗಳು ಬಹಳಷ್ಟು ವಿಚಾರವನ್ನು ಹೇಳಿರುವುದರಿಂದ ಇಲ್ಲಿ ಮೌಲ್ಯಕಿಂತ ಮಹತ್ವ ಹೆಚ್ಚಿನದಾಗಿದೆ. ಸ್ವಾಮಿ ವಿವೇಕಾನಂದರು ಕೂಡ ವಿದ್ಯೆಯ ಬಗ್ಗೆ ಮಹತ್ವದ ಮಾತುಗಳನ್ನು ಆಡಿದ್ದಾರೆ. ಸಾಮೂಹಿಕವಾಗಿ ಎಲ್ಲರೂ ವಿದ್ಯಾವಂತರಾಗುವಂತ ಒಂದು ವ್ಯವಸ್ಥೆಯನ್ನು ನಾವು ಮಾಡಬೇಕು. ಶಿಕ್ಷಣ ಕ್ಷೇತ್ರದ ರತಕ್ಕ ಆಂತರಿಕ ಸಮಸ್ಯೆಗಳನ್ನು ತೆಗೆದುಹಾಕಬೇಕು. ಶಿಕ್ಷಣದ ಕ್ಷೇತ್ರದ ಬಗ್ಗೆ ನನ್ನ ಸೂಚನೆಯೇನು ಅಂದರೆ ಕಡಿಮೆ ಅವಧಿಯಲ್ಲಿ ಹೆಚ್ಚು ಕೆಲಸ ಕಡಿಮೆ ವೆಚ್ಚದಲ್ಲಿ ಹೆಚ್ಚು ಸೌಲಭ್ಯಗಳು ದೊರೆಯುವಂತಾಗಬೇಕು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಏನಾಗಿದೆ ಅಂದರೆ, ಹೆಚ್ಚು ಅವಧಿಯಲ್ಲಿ ಕಡಿಮೆ ಕೆಲಸ ಹೆಚ್ಚು ವೆಚ್ಚದಲ್ಲಿ ಕಡಿಮೆ ಸೌಲಭ್ಯಗಳು ಇವೆ. ಇವತ್ತು ದಕ್ಷತೆಯನ್ನು ಹೆಚ್ಚಿಸುವ ಬಗ್ಗೆ ಕ್ರಮಗಳನ್ನು ಕೈಗೊಂಡರೆ ಇದು ಸಾಧ್ಯ. ಇದು ಪ್ರಾಥಮಿಕ ಮಾಧ್ಯಮಿಕ ಪ್ರೌಢ ಹಾಗೂ ಕಾಲೇಜು ಹಂತಗಳಿಂದ ಕ್ರಿಯಾತ್ಮಕವಾಗಿ ಆಗಬೇಕು. ಉದ್ದೇಶ ಒಳ್ಳೆಯದು ಇದ್ದರೆ ಸಾಲದು ಪರಿಣಾಮಗಳು ಒಳ್ಳೆಯದಿದ್ದರೆ ಮಾತ್ರ ಅದು ಸಾರ್ವತ್ರಿಕವಾಗಿ ಒಳ್ಳೆಯ ಫಲವನ್ನು ನೀಡಲಿಕ್ಕೆ ಸಮರ್ಥವಾಗುತ್ತದೆಂದು ಹೇಳುತ್ತೇನೆ.

ನಮ್ಮ ದೇಶದಲ್ಲಿ ತಮಗೆಲ್ಲಾ ಗೊತ್ತಿರುವಹಾಗೆ ಬ್ರಿಟೀಷರು ಹೋದನಂತರ ಎರಡುಕೋಟಿ ಪದವೀಧರರು ನಮ್ಮನ್ನು ಆಳುತ್ತಿದ್ದಾರೆ. ಅಥವಾ ಅವರ ಒಂದು ಪ್ರಭಾವಕ್ಕೆ ನಾವು ಒಳಗಾಗಿದ್ದೇವೆ. ಉಳಿದ ೭೨ ಕೋಟಿ ಜನದಲ್ಲಿ ಶೇಕಡ ೮೧-೮೨ ರಷ್ಟು ಜನ ವಿದ್ಯಾಭ್ಯಾಸ ಹೊಂದಿದ್ದಾರೆ. ಅಂದರೆ ೭೨ ರಷ್ಟು ಜನ ಅನಿವಾರ್ಯವಾಗಿ ಪ್ರಭಾವಕ್ಕೆ ಒಳಗಾಗಿದ್ದೇವೆ. ಶೋಷಣೆ ರಹಿತವಾದಂಥ ಸಮಾಜವನ್ನು ಇವತ್ತು ನಾವು ನಿರ್ಮಾಣ ಮಾಡಬೇಕು, ಈ ದಿಸೆಯಲ್ಲಿ ಜನತೆ ಜಾಗೃತರಾಗಬೇಕು ಕಾಯಿದೆಗಳಿಂದ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಹೆಚ್ಚು ಗೊತ್ತಿದ್ದವರು ಕಡಿಮೆ ಗೊತ್ತಿದ್ದವರಿಗೆ ವಿಚಾರಗಳನ್ನು ತಿಳಿಯಪಡಿಸಬೇಕು. ಕಡಿಮೆ ತಿಳುವಳಿಕೆಯುಳ್ಳವರು ತಮ್ಮನ್ನು ತಾವು ರಕ್ಷಿಸಿಕೊಳ್ಳುವಂತಾಗಬೇಕು. ಈ ವಿಚಾರದಲ್ಲಿ ಪೇಟೆಯವರು ಮತ್ತು ಪಟ್ಟಣದವರು ಹಿಂದೆ ಬಿದ್ದಂತೆ ಕಾಣುವುದಿಲ್ಲ ಗ್ರಾಮಾಂತರದವರು ಮಾತ್ರ ಸಾಕಷ್ಟು ಹಿಂದೆ ಉಳಿದಿದ್ದಾರೆ. ಸಂವಿಧಾನಬದ್ಧವಾಗಿ ಪರಿಣಾಮಕಾರಿಯಾದ ಕಾರ್ಯವಾಗಿಲ್ಲ. ಸರ್ಕಾರದವರು ಈ ದಿಸೆಯಲ್ಲಿ ನಿರ್ದಿಷ್ಟವಾದ, ಖಚಿತವಾದ ಪತ್ರವನ್ನು ನಿರ್ವಹಿಸಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಪ್ರೋತ್ಸಾಹವೇನೋ ಇದೆ ಪರಿಣಾಮ ಅಪೇಕ್ಷಿತ ಮಟ್ಟದಲ್ಲಿ ಆಗಿಲ್ಲ. ನಮಗೆ ಸ್ವಾತಂತ್ರ್ಯ ಬಂದು ೨೨ ವರ್ಷಗಳಾಯಿತು. ಗ್ರಾಮಾಂತರ ಪ್ರದೇಶದಲ್ಲಿ ಶಿಕ್ಷಣದ ಪ್ರಗತಿ ಕಂಡುಬರುತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯನ್ನು ತಾಲೂಕು ಬೋರ್ಡುಗಳಿಗೆ ವಹಿಸಿಕೊಟ್ಟರೆ ಒಳ್ಳೆಯದೆಂದು ಅನಿಸುತ್ತದೆ. ಹಿಂದೆ ನಮ್ಮಲ್ಲಿ ಬ್ರಿಟೀಷ್ ಸರ್ಕಾರ ಇದ್ದಾಗ ತಾಲ್ಲೂಕು ಬೋರ್ಡುಗಳ ಕೆಳಗೆ ಶಿಕ್ಷಣ ಕೊಡುವಂಥ ಪದ್ಧತಿ ಇತ್ತು. ಅದು ಪರಿಣಾಮಕಾರಿಯಾಗಿ ಇದ್ದುದನ್ನು ನಾನು ಕಂಡಿದ್ದೇನೆ. ಆದರೆ, ಇಂದಿನ ಶಿಕ್ಷಣ ಸರಿಯಾದರೀತಿಯಲ್ಲಿ ಪರಿಣಾಮಕಾರಿಯಾಗಿಲ್ಲ ಎನ್ನುವುದು ಕಂಡು ಬರುತ್ತದೆ ಇಂದಿನ ಶಾಲೆಗಳಲ್ಲಿ ಮಾನಸಿಕವಾಗಿ ಹಾಜರಾತಿ ಅಭಾವ ಇದೆ ದೈಹಿಕವಾಗಿಯೂ ಹಾಜರಾತಿಯ ಅಭಾವ ಇದೆ. ಇದರಿಂದ ಶಿಕ್ಷಣ ಖಾತೆಯ ಅಧ್ಯಕ್ಷತೆ ನಮಗೆ ಎದ್ದು ಕಾಣುತ್ತದೆ. ಮಾನ್ಯ ಮಂತ್ರಿಗಳು ಈ ದಿಸೆಯಲ್ಲಿ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅಲ್ಲದೆ ವಾರ್ಷಿಕ ಪರೀಕ್ಷೆಗಳು ನಡೆಯುವುದೇ ಕಾಣುತ್ತಿಲ್ಲ. ವಿಚಾರಗಳು ಇದ್ದರೂ ವರದಿಗಳಿಗೆ ಕೊರತೆ ಇಲ್ಲ, ಅವು ನಡೆಯುತ್ತಿವೆ.

ಕನ್ನಡಕ್ಕೆ ಹೆಚ್ಚು ಪ್ರೋತ್ಸಾಹ ಕೊಡುವ ಬಗ್ಗೆ ಹೆಚ್ಚು ಆಸ್ತೆಯನ್ನು ವಹಿಸಬೇಕಾಗಿದೆ. ನಮ್ಮ ರಾಜ್ಯಸರ್ಕಾರದಲ್ಲಿ ಗಜೆಟ್ ಹೊರಡುತ್ತೆ, ಕನ್ನಡದಲ್ಲಿಯೂ ಕೂಡ ರಾಜ್ಯಪತ್ರವನ್ನು ಪ್ರಕಟಣೆ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರಿ ಮುದ್ರಣಾಲಯದಲ್ಲಿರುವ ಕನ್ನಡ ಭಾಷಾಂತರಕಾರರಿಗೆ (ಭಾಷಾಂತರ) ತುಕೋಳ್ ವೇತನ. ಮತ್ತು ಪೈ ವೇತನದ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಹೈಕೋರ್ಟ್, ವಿಧಾನ ಮಂಡಲ ಸಚಿವಾಲಯ ಹಾಗೂ ಸರ್ಕಾರಿ ಮುದ್ರಣಾಲಯ ಇನ್ನು ಮುಂತಾದ ಕಡೆಗಳಲ್ಲಿರುವ ಭಾಷಾಂತರಕಾರರನ್ನು ರಾಜ್ಯದ ಭಾಷಾಂತರ ಇಲಾಖೆಗೆ ವಿಲೀನಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸಹಾಯಕ ವಿದ್ಯಾಧಿಕಾರಿಯವರ ಕಛೇರಿಯಲ್ಲಿ ಸಂಬಳದ ಬಿಲ್‌ಗಳನ್ನು ಮಾಡಲು ಉಪಾಧ್ಯಾಯರುಗಳನ್ನು ಹಾಕಿಕೊಂಡಿದ್ದಾರೆ, ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು ಅಧ್ಯಾಪಕರುಗಳು ಶಾಲೆಗಳಲ್ಲಿಯೇ ಕೆಲಸ ಮಾಡುವಂತ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಉಪಾಧ್ಯಾಯರು ಬಿಲ್‌ಗಳನ್ನು ಮಾಡುವ ಉದ್ದೇಶ ಇಟ್ಟುಕೊಂಡು ಸಂಚಾರ ಮಾಡುವುದರಲ್ಲಿಯೇ ಕಾಲ ಕಳೆಯುತ್ತಾರೆ.

ನಮ್ಮ ರಾಜ್ಯದಲ್ಲಿ ೭ ವೃತ್ತಿಪರ ಶಾಲೆಗಳು ಇವೆ. ಇವುಗಳ ಪೈಕಿ ನಮ್ಮ ಜಿಲ್ಲೆಯ ಕೋಟಾದಲ್ಲಿ ಇದೆ. ವೃತ್ತಿಪರಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಹೇಳುತ್ತೇನೆ. ಮಾನ್ಯ ರಾಮಸ್ವಾಮಿಯವರು ಹೇಳಿದಂತೆ ಶಾಲೆಗಳ ರಜಾ ದಿನಗಳಿಗೂ ಮತ್ತು ಅಧ್ಯಾಪಕರ ರಜಾ ದಿನಗಳಿಗೂ ಸುಮಾರು ೬೦ ದಿವಸ ಅಂತರ ಇದೆ. ಇದು ಹೊಂದಿಕೊಂಡಿರಬೇಕೆಂದು ಹೇಳುತ್ತೇನೆ. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೂ ಗಂಡುಮಕ್ಕಳ ವಿದ್ಯಾಭ್ಯಾಸಕ್ಕೂ ಇರತಕ್ಕ ಅಂತರವನ್ನು ನಿವಾರಣೆ ಮಾಡಬೇಕೆಂದು ಹೇಳುತ್ತೇನೆ. ಅಧ್ಯಾಪಕರ ನೇಮಕಾತಿಯನ್ನು ಬಿಹಾರದಲ್ಲಿರುವಂತೆ ಜಾರಿಗೆ ತಾಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸುಮಾರು ೬೦೦ ಜನ ಉಪಾಧ್ಯಾಯರುಗಳ ಕೊರತೆ ಇದೆ, ಶಾಲಾಕಟ್ಟಡಗಳ ಕೊರತೆಯೂ ಇದೆ. ಇದನ್ನು ನಿವಾರಣೆ ಮಾಡಬೇಕೆಂದು ಹೇಳುತ್ತೇನೆ.

ಮುಖ್ಯವಾಗಿ ಪ್ರಾಥಮಿಕ ಉಪಾಧ್ಯಾಯರುಗಳಿಗೆ ಬಡ್ತಿಕೊಡುವ ಬಗ್ಗೆ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಪ್ರಾಥಮಿಕ ಉಪಾಧ್ಯಾಯರುಗಳಿಗೆ ಬಡ್ತಿ ಅವಕಾಶಗಳೇ ಇಲ್ಲ ಇಷ್ಟು ಹೇಳುತ್ತಾ ಮಾನ್ಯ ವಿದ್ಯಾಸಚಿವರು ಮಂಡಿಸಿರುವ ಬೇಡಿಕೆಗೆ ಬೆಂಬಲವನ್ನು ಸೂಚಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI B.B. SAYANAK (Belgaum).—Mr. Speaker Sir, I rise to oppose the demands placed by the Hon. Minister for Education and I wish to offer my comments The Karnataka Government is spending Rs. 142 crores on Education *i.e.*, about one third of our budget amount. But what is the out come of his? According to me, the outcome is very poor. The out come according to Sri Mallur Anand Rao is zero. The quality and standard of our education is also very poor. If you visit the primary schools and if you ask something to students the students are not going to give you any reply. All these things are going on because the teachers are interested in Private tutions after the classes If students do not take up the tution, they will be made to fail. This is the attitude prevailing among teachers even of I or II standard. We talk of patriotism, even after 30 years of our independence we have not inculcated this patriatism in the students world. I am of the opinion hat the Government of India or the State Government must give prominence to the patriatism in

the student world and there must be a drastic change in education. The Government of India is thinking and the Prime Minister of India is also saying again and again that they want to have a drastic change in education and that our education system must be a job oriented one. From 1st to 4th Standard there are 16, 11, 255 students and from 5th to 7th Standard there are 15, 96, 234 students. The remaining 66% of students are giving up or drop out of education What the Government is going to do for the 66% of students who have given up their education? Their parents may be poor and they may not be in a position to send their children to schools. Why cannot the Government open night schools for such children? Whether they are going to get wise education? There are very few private primary schools in Bombay Karnataka area. The Government of Karnataka has taken over almost all the primary schools. There are very few private schools. In Karnataka there are 455 private schools and the Government is paying the salaries of teachers Why the Government is not going to take over all these 445 primary schools? My hon. Friend Sri Mallur Anand Rao stated that in private schools, there is corruption, there is nepotism etc. There is collusion between the officers and the management. Why the Government is not going to take all the 445 schools? There is one school by name Rajaputh bondhu there is tusses between the management and the teachers that teachers are not getting their salaries for the last 8 years. What will be the conditions of all those teachers who are not getting their salaries from the last 8 months I request the Government to take over all these private schools immediately. The teachers have filed a case in the High Court against the management, the High Court has also seized of the matter.

SRI B. SUBBAIAH SHETTY.—Would you give your consent to take over the minority languages' schools?

SRI B.B. SAYANAK.—I am of the opinion that you must take over all the schools including the minority one. Do you think that I am opposing the inclusion of minority schools? No.

SRI B. SUBBAIAH SHETTY.—Because you are enthusiastic about the Marathi language schools, so I asked the question.

SRI B.B. SAYANAK,—There is no exception. When I said all the primary schools, it means including Marathi schools. Another thing, the Government of Karnataka has taken a decision to accept three language formula; the mother tongue, Hindi and English. Now the Government of Karnataka has changed its policy. They have adopted Kannada English and Hindi or Sanskrit & Marathi. There are some non-kannada schools where Marathi is taught. I am of the opinion

why the Government of Karnataka is not going to give option to learn Hindi which is a national language. Why are they curbing Marathi people to learn Hindi? This might be due to the fact that Southern States are opposing the imposition of Hindi. So I request the Government not to accept that policy until the Maharastra Karnataka Border dispute is solved. I r quest that you must give scope to learn Hindi as a national language. You have accepted three language policy; give chance for Marati as mother tongue Hindi as national language and English as third language. I request you as a Member of minority, that there are so many minority communities in Karnataka whose mother tongue is not Kannada. There are some Government servants or the teachers who have not learnt the Kannada language. You have stopped their increments and promotions. Therefore, I request you for god sake not to take such stringent action against them.

Those who want to learn Kannada, I have no objection, let them learn it. The standard of education cannot be improved when there are not sufficient number of school buildings. For example, in Belgaum, the Corporation has constructed four Kannada Primary Schools but they have not constructed a single Marathi or Urdu Primary school. Similar is the case in Nippani and Khanapur. I cannot understand why the Government is making such a discrimination. The boys belonging to the Marathi and Urdu schools are your children. I request you to give them sufficient number of school buildings.

3-30 P.M.

There are not adequate number in the Marathi and Urdu Schools. When there is unemployment problem, the government can appoint sufficient numb r of teachers to these schools. Last time I had tabled a quest on regarding the headmaster's post remaining vacant for three years in caster lock school. I had also informed that there was no teacher for the social studies for three years. The Minister had assured me then that action would be taken to post the headmaster and the other teachers.

Government should take action to supply books to the students at the commencement of the school. This year English book for VII standard was not available upto January in the market in Belgaum. If there is delay in the supply of books, how can you expect to improve the standard f education.

SRI B. SUBBIAH SHETTY.—What about books for the next year?

SRI B. B. SAYANAK:— I am speaking of th last y ar. Las year, you had not done justice n r spect of s ply of books. Ther are many school building which req ire urgent repairs. The school bu l dings shou'd be repair d in the month of May It is very necessary to maintain th school buildings in good condition.

The Government had started 31 High Schools la ye r in the whole State but I ask the Government whe her they h ve started a single school in Belgaum and Nipp ni a d Kh napur Taluk. Til' now not a single school h s been started at Kh napur and B lg um. Even here the e is discrimination. I request you atle st to start a school at Gamboti which is a forest area where t ere are large number of students.

Regarding mid-day meal scheme, th government is spending lakhs of rupees on this scheme but in Belg um municip l area for he last 3-4 years I h ve not seen any school h ving a mid-day me l scheme. I r quest you kindly to start mid-day m al scheme in the Marathi speaking areas

In Khanapur there is a AEO who knows only Kannada. He is expected to insp ct the Urdu and Marathi schools. In Khanapur Taluka there are 225 Marathi schools, Kannada schools only 40 and Urdu Schools 80. This AEO is inspecting the schools and giving a report in Kannada. Our Marathi teachers are not able to follow the Kannada reports. I request the government to appoint an AEO a DD PI or a Joint Director for Belgaum who is familiar with three languages. If this request is conceded, then I think you will be doing justice to the minority institutions.

Th re is a Vishwabharathi Education Society at Belgaum which is running about 15 High Schools but the management of this institution is not giving full salary to the teachers. The managem nt is deducting Rs. 1' 0 from out of the salary of each teacher. This is why the teachers have formed an association and fighting wi h the management demanding full payment of salary. The management is victimising some of the teachers for their demands. There is one peon by name Babu Rama Kumble whose sa ary is only 125 p.m The headmaster of the school where this peon is working has beaten this peon twice. This headmaster happens to be son-in-law of the Chairman of this Society. The peon has filed two cases against the Chairman and the Headmaster but no action has been t ken by the Educ tion Department against the headmaster or the Chairman of this Society. This is the fate of peons in the private schools. He is Harijan by caste.

We are fed up with the present examination system. I know in one case where copying was going on in the SSLC Examination Centre. Copying is going on even in B.A. and B.Sc. examinations. A rich-man's son will pay money to the Supervisor and copy and then get through the examination. This year in Belgaum in the SSLC centre a teacher entered the examination centre. When the police objected to his entering, that teacher braadish his revolver to the policeman. Immediately the teacher was arrested and taken into the custody. A case was filed and he was convicted in the cour for two days.

All these things are going on in examination hall. So, I request you to take drastic action against the supervisors. Last year the Karnataka University has sent some Inspectors to supervise what is going on in examination hall and number of students were caught and punished. Unless and until you take drastic action against the supervisors, this copying business will not stop.

Regarding the Adult education, it is a very good scheme. But in my area, I have not seen any classes that are going on in the name of adult education. If you are serious and sincere, about this adult education, you must start adult education in all regions.

Regarding NCC education, it is for teaching discipline. But whether students are having discipline after NCC training we have to see. Very few people are taking the advantage of this NCC. But 90 percent of the students are not having any discipline at all. Then what is the use of giving money for these training.

Then there is one General library in Belgaum. That library is not getting grants for the last two years. Just because the administration is in the hands of Marathi people, the grant has not been given for the last two years. Therefore, I request the Minister to see to it and release the grant to the library. With these few words, I conclude my speech.

SRI C. M. ARUMUGHAM:—The attendance is very thin. Even the Treasury bench is empty. What is the reason ?

MR. CHAIRMAN :—For my purpose, sufficient attendance is there. there is quorum.

SRI C. M. ARUMUGHAM :— If we also go out, there will not be any quorum.

SRI S. R. BOMMAI:—Of late, I am extremely sorry to say that Parliamentary institutions-whether it is Lok Sabha or State Legislatures are not doing justice to our representatives. We are spending huge amonnt to collect information and also to deliberate on very important issues. But seriousness which is required for this purpose is lost.

I am not saying to this side or that side. The seriousness to think over and discuss certain issues are all disappearing. We are all responsible for this political atmosphere.

MR. CHAIRMAN:—I fully agree with you.

SRI S. R. BOMMAI :— If the Ministers are not otherwise engaged in Government work; either they should be present in this House or in the other House. That will add dignity and decorum to the House and also inspire speakers for a purposeful debate. Therefore. I request through you Sir let the Ministers be present–as many as possible so that the deliberation of this House becomes fruitful and purposeful. Whatever criticisms made by hon. Members of this House will have to be noted carefully and replied. I am sure the Minister for Education will do his best. Government must be sensitive when allegations or criticisms are made and action is taken immediately. Then the attendance and tone of the debate will also improve. In a number of cases, within half-an-hour the debate will be over, I know the Education Minister does not belong to that block and he would reply each and every point. I would only appeal to you that something must be done to see that the debate is continued with all seriousness and effectively

MR. CHAIRMAN.— I appreciate your views.

† ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ) :— ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಶಿಕ್ಷಣ ಮಂತ್ರಿಗಳು ಸದನದ ಮುಂದೆ ಮಂಡಿಸಿರತಕ್ಕಂಥ ವಿದ್ಯಾ ಇಲಾಖೆ ಬೇಡಿಕೆಯನ್ನು ಬೆಂಬಲಿಸುತ್ತಾ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶಿಕ್ಷಣ ವಿಚಾರದಲ್ಲಿ ನಾವು ವಿಚಾರ ಮಾಡಿದರೆ ಈ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ನಡೆದಿದೆ ಎಂದು ಹೇಳಬಹುದು. ಮಾನ್ಯ ಸದಸ್ಯರಾದ ಶ್ರೀ ಹಾರ್ನಹಳ್ಳಿ ರಾಮಸ್ವಾಮಿಯವರು ಶಾಲೆಗಳು ಬೆಳೆದ ಸಂಖ್ಯೆ ಮತ್ತು ವಿದ್ಯಾರ್ಥಿಗಳು ಬೆಳೆದ ಸಂಖ್ಯೆಯನ್ನು ಹೇಳಿದ್ದಾರೆ ನಾನು ಅದರ ಬಗ್ಗೆ ಮಾತನಾಡ ಬಯಸುವುದಿಲ್ಲ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಎಲ್ಲರೂ ಸುಶಿಕ್ಷಿತರಾಗಬೇಕು, ಆಗ ಮಾತ್ರ ಪ್ರಜಾಪ್ರಭುತ್ವ ರಾಷ್ಟ್ರ ಚೆನ್ನಾಗಿ ನಡೆಯುತ್ತದೆ. ಆ ದೃಷ್ಟಿಯಿಂದ ನೋಡಿದರೆ ನಮ್ಮಲ್ಲಿ ೧/೩ ಭಾಗ ಮಾತ್ರ ಸುಶಿಕ್ಷಿತರಿದ್ದಾರೆ. ಈ ಸಂಖ್ಯೆ ಬಹಳ ಕಡಿಮೆ ಇದೆ. ಮಾನ್ಯ ಮಿತ್ರರು ಮತ್ತೊಂದು ಮಾತನ್ನು ಹೇಳಿದ್ದಾರೆ ಶಿಕ್ಷಣ ಇಲಾಖೆಗೆ ಇನ್ನೂ ಹೆಚ್ಚು ಹಣವನ್ನು ಒದಗಿಸಬೇಕಾಗಿತ್ತು ಎಂಬುದಾಗಿ. ಅದು ಸರಿಯಾದುದು. ಆದರೆ ನಾವು ಯಾವ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಲಿ ಆ ಇಲಾಖೆಗೆ ಹೆಚ್ಚು ಹಣ ಬೇಕಾಗಿತ್ತು ಎಂದೇ ಹೇಳುತ್ತೇವೆ. ಅಂದರೆ ಪ್ರತಿಯೊಂದು ಕ್ಷೇತ್ರದಲ್ಲೂ ನಾವು ಪ್ರಗತಿಯನ್ನು ಬಯಸುತ್ತೇವೆ. ನಮ್ಮದು ಅಭಿವೃದ್ಧಿ ಹೊಂದುತ್ತಿರುವ ದೇಶವಾದ್ದರಿಂದ ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿಯಾಗಬೇಕಾದ ಅವಶ್ಯಕತೆ ಇದೆ. ಪ್ರತಿಯೊಂದು ಕ್ಷೇತ್ರದಲ್ಲೂ ಅಭಿವೃದ್ಧಿಯನ್ನು ಮಾಡುತ್ತಿದ್ದೇವೆ. ಅಭಿವೃದ್ಧಿ ಆಗಬೇಕಾದರೆ ನಮಗೆ ಮುಖ್ಯವಾಗಿ ಹಣ ಬೇಕು. ನಾವು ಪ್ರತಿಯೊಂದು ಇಲಾಖೆಗೂ ಹೆಚ್ಚಿಗೆ ಹಣ ಬೇಕು ಎಂದು ಹೇಳುತ್ತಾ ಹೋದರೆ ನಮಗೆ ಹಣ ಎಲ್ಲಿಂದ ಬರಬೇಕು ಎಂಬುದನ್ನೂ ವಿಚಾರ ಮಾಡಬೇಕು. ನಮ್ಮ ರಾಜ್ಯದಲ್ಲಿ ಇಡೀ ರಾಜ್ಯದ ಆಯವ್ಯಯದಲ್ಲಿ ಸಿಂಹಪಾಲು ಹಣವನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಇದು ಅತ್ಯಂತ ಅಭಿನಂದನೀಯವಾದುದು ಶಿಕ್ಷಣ ಇಲಾಖೆಯವರು ಹಾವನೂರ್ ಸಮಿತಿ ವರದಿ ಪ್ರಕಾರ ಹಿಂದುಳಿದ ಜಾತಿ ಮತ್ತು ಹಿಂದುಳಿದ ವರ್ಗದವರಿಗೆ ಹೆಚ್ಚಿನ ಶಿಕ್ಷಣ ಸವಲತ್ತನ್ನು ಕೊಡುತ್ತಿರುವುದಕ್ಕಾಗಿ ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ, ಇಲ್ಲಿ ಸರ್ಕಾರದವರು ತಿಳಿಸಿರುವ ಹಾಗೆ ೫ನೆ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ೬ ರಿಂದ ೧೦ ವರ್ಷದ ಬಾಲಕರಿಗೆ

ಶಿಕ್ಷಣವನ್ನು ಕೊಡುವ ಕೆಲಸ ಪೂರ್ತಿ ಗೊಳ್ಳಬೇಕು ಎಂದು ಇದೆ. ಇದೂ ಕೂಡ ಅಭಿನಂದನೀಯವಾದ ಸಂಗತಿ. ಅದೇ ರೀತಿ ೧೦-೧೪ ವರ್ಷದವರೆಗೂ ವಿದ್ಯಾರ್ಥಿಗಳಿಗೆ ಕಡ್ಡಾಯ ಶಿಕ್ಷಣವನ್ನು ಕೊಡುವ ಯೋಜನೆಯನ್ನೂ ಹಾಕಿದ್ದಾರೆ. ಆದರೆ ಇದರಲ್ಲಿ ಕೆಲವೊಂದು ತೊಂದರೆಗಳಿರುವ ಸಂಗತಿಗಳನ್ನು ಮಾನ್ಯ ಮಂತ್ರಿಗಳಿಗೆ ಮಾನ್ಯ ಅಧ್ಯಕ್ಷರ ಮುಖಾಂತರ ಹೇಳಬಯಸುತ್ತೇನೆ ಗ್ರಾಮಾಂತರ ಪ್ರದೇಶಗಳಲ್ಲಿ ತಿರುಗಾಡಿ ಶಾಲೆಗೆ ಹೋಗತಕ್ಕ ಮಕ್ಕಳು ಎಷ್ಟು ಜನ ಇದ್ದಾರೆ ಎಂಬುದನ್ನು ನೋಡಿ ಬರೆದುಕೊಂಡು ಹೋಗಿ ಅವರನ್ನೆಲ್ಲಾ ಶಾಲೆಗೆ ಹೋಗುವಂತೆ ಮಾಡುತ್ತಾರೆ ನಾನು ಒಂದೆರಡು ಶಾಲೆಗಳಿಗೆ ಭೇಟಿ ಕೊಟ್ಟಾಗ ನೋಡಿದ್ದೇನೆ. ಶಾಲೆಗಳಿಗೆ ಎಷ್ಟು ವಿದ್ಯಾರ್ಥಿಗಳು ಹೋಗಬೇಕೋ ಅದರಲ್ಲಿ ಕಾಲು ಭಾಗ ವಿದ್ಯಾರ್ಥಿಗಳೂ ಕೂಡ ಶಾಲೆಯಲ್ಲಿ ಹಾಜರಿರುವುದಿಲ್ಲ. ಆದರೆ ಉಪಾಧ್ಯಾಯರು ಮಾತ್ರ ಎಲ್ಲ ವಿದ್ಯಾರ್ಥಿಗಳಿಗೂ ಹಾಜರಿಯನ್ನು ಹಾಕುತ್ತಾರೆ. ನಾನು ಒಮ್ಮೆ ಹೋದಾಗ ಅಲ್ಲಿ ವಿಚಾರಿಸಿದೆ, ನಿಮ್ಮಲ್ಲಿ ೫೦ ಹುಡುಗರು ಬರುವ ಕಡೆ ೧೦ ಹುಡುಗರು ಮಾತ್ರ ಬಂದಿದ್ದಾರೆ, ಆದರೆ ಎಲ್ಲರಿಗೂ ಹಾಜರಿ ಹೇಗೆ ಹಾಕಿದ್ದೀರಿ ಎಂದು ಕೇಳಿದೆ. ಆಗ ಆ ಮಾಸ್ತರು ಹೇಳಿದರು, ನಾವು ಈ ರೀತಿ ಹಾಜರಿ ಹಾಕಲೇಬೇಕು. ಒಂದು ವೇಳೆ ಹೀಗೆ ಹಾಕದಿದ್ದರೆ ಈ ಶಾಲೆಗೆ ಹೆಚ್ಚು ಜನ ಗುರುಗಳು ಬೇಕಾಗಿಲ್ಲ ಎಂದು ಮಾಸ್ತರ ಸಂಖ್ಯೆಯನ್ನು ಕಡಿಮೆ ಮಾಡುತ್ತಾರೆ ಆ ದೃಷ್ಟಿಯಿಂದ ಹೀಗೆ ಹಾಕುತ್ತೇವೆ ಎಂದು ಹೇಳಿದರು. ಮತ್ತೊಂದು ವಿಚಾರ ಏನೆಂದರೆ ಒಂದು ಸರ್ಕಾರಿ ಆದೇಶ ಇದೆ. ಅದೇನೆಂದರೆ ಯಾವುದೇ ವಿದ್ಯಾರ್ಥಿ ವರ್ಷದಲ್ಲಿ ೧೨೦ ದಿವಸ ಶಾಲೆಗೆ ಹಾಜರಾದರೆ ಅವನನ್ನು ಪರೀಕ್ಷೆಯಲ್ಲಿ ಫೈಲ್ ಮಾಡಬಾರದು, ಪಾಸ್ ಮಾಡಬೇಕು ಎಂದು ಅವನು ಓದದಿದ್ದರೂ ಕೂಡ ಆ ಬಾಲಕ ಶಾಲೆಗೆ ೧೨೦ ದಿವಸ ಹೋದರೆ ಅವನನ್ನು ಪಾಸು ಮಾಡಬೇಕು ಎಂದು ಹೇಳುತ್ತಾರೆ ಈ ರೀತಿ ಕೆಳಮಟ್ಟದಲ್ಲಿ ಶಿಕ್ಷಣ ಪದ್ಧತಿ ನಡೆಯುತ್ತಿದೆ. ವಿದ್ಯಾರ್ಥಿಗಳು ಶಾಲೆಗೆ ಹೋಗದಿದ್ದರೂ ಕೂಡ ಅಲ್ಲಿ ಗುರುಗಳು ಅವನು ಬಂದಿದ್ದಾನೆ ಎಂದು ಹಾಜರಿ ಹಾಕುವುದು ಮತ್ತು ೧೨೦ ದಿವಸ ಅವನಿಗೆ ಹಾಜರಿ ಇದೆ ಎಂಬ ದೃಷ್ಟಿಯಿಂದ ಅವನನ್ನು ಪಾಸ್ ಮಾಡುವುದು—ಈ ರೀತಿ ಮಾಡಿದರೆ ಶಿಕ್ಷಣ ಮಟ್ಟ ಕೆಳಗಿಳಿಯುವುದು ಸ್ವಾಭಾವಿಕವೇ, ಈ ರೀತಿ ಮಾಡುವುದು ತಪ್ಪು. ಇದನ್ನು ಮಾನ್ಯ ಮಂತ್ರಿಗಳು ಯಾವ ರೀತಿ ದುರಸ್ತಿ ಮಾಡುತ್ತಾರೋ ಗೊತ್ತಿಲ್ಲ. ಶಾಲೆಗೆ ಹೋಗದೇ ಇರುವ ಬಾಲಕರಿಗೆ ಹಾಜರಿ ಹಾಕುವುದನ್ನು ಹೇಗೆ ಬಂದ್ ಮಾಡುತ್ತಾರೆ? ಮತ್ತು ೧೨೦ ದಿವಸ ಹಾಜರಾದರೆ ಅವನನ್ನು ಪಾಸ್ ಮಾಡಬೇಕು ಎಂದು ಏನು ನಿಯಮ ಮಾಡಿದ್ದಾರೆ ಅದು ಸರಿಯೋ ತಪ್ಪೋ ಎಂಬುದನ್ನೂ ವಿಚಾರ ಮಾಡಬೇಕು. ಪ್ರತಿ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯುತ್ತಿದೆ. ನೂರಾರು ಜನ ಪದವೀಧರರಾಗಿ ಹೊರಗೆ ಬರುತ್ತಿದ್ದಾರೆ. ಅನೇಕ ಜನ ಇಂಜಿನಿಯರುಗಳಾಗಿ ವೈದ್ಯರುಗಳಾಗಿ ಮತ್ತು ಇತರ ಕ್ಷೇತ್ರಗಳಿಂದ ಬರುತ್ತಿದ್ದಾರೆ. ಹೀಗಾಗಿ ನಿರುದ್ಯೋಗ ಸಮಸ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ ನಮ್ಮ ಶಿಕ್ಷಣ ಕ್ರಮದಲ್ಲಿ ಯಾವುದೋ ಒಂದು ದೋಷ ಇದೆ, ಇದನ್ನು ನಿವಾರಣೆ ಮಾಡಬೇಕು ಎಂಬ ಮಾತನ್ನು ನಾನು ಬಹಳ ವರ್ಷಗಳಿಂದ ಕೇಳುತ್ತಿದ್ದೇನೆ. ಕೆಲವೊಂದು ಜನ ನಮ್ಮ ದೇಶದಲ್ಲಿ ಬುದ್ಧಿವಂತರು, ವಿಚಾರವಂತರು ಹೇಳಿರುವುದನ್ನು ನಾನು ಓದಿದ್ದೇನೆ. ಅವರೆಲ್ಲರೂ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಏನೋ ದೋಷವಿದ್ದು ಅದನ್ನು ನಿವಾರಣೆ ಮಾಡಬೇಕು ಶಿಕ್ಷಣ ಪದ್ಧತಿಯನ್ನು ಬದಲಾವಣೆ ಮಾಡಬೇಕು ಎಂಬ ಮಾತನ್ನು ಅವರೆಲ್ಲರೂ ಹೇಳಿದ್ದಾರೆ ಈಗ ನಮ್ಮ ದೇಶದಲ್ಲಿ ಎಲ್ಲ ರೀತಿಯ ಶಿಕ್ಷಣ ಪದ್ಧತಿಯೂ ಇದೆ. ಯಾರಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿಯಿದೆಯೋ ಅವರು ಆ ಕ್ಷೇತ್ರದಲ್ಲಿ ವಿದ್ಯಾಭ್ಯಾಸವನ್ನು ಮಾಡಬಹುದಾಗಿದೆ. ಆದರೆ ಎಲ್ಲಿ ದೋಷವಿದೆ ಎಂಬುದೇ ಸಮಸ್ಯೆ. ಒಂದು ವೇಳೆ ಕಾಲೇಜು ವಿದ್ಯಾಭ್ಯಾಸವನ್ನು ಬಂದ್ ಮಾಡಿ ತಾಂತ್ರಿಕ ಶಿಕ್ಷಣವನ್ನು ಎಲ್ಲರಿಗೂ ಕೊಟ್ಟರೆ ಆ ಕ್ಷೇತ್ರದವರು ಹೆಚ್ಚಾಗಿ ಅಲ್ಲಿ ನಿರುದ್ಯೋಗಸಮಸ್ಯೆ ಉಂಟಾಗುತ್ತದೆ. ಯಾವರೀತಿ ಮಾಡಿದರೂ ಒಂದಲ್ಲ ಒಂದು ಸಮಸ್ಯೆ ಉದ್ಭವವಾಗುತ್ತದೆ. ನನ್ನ ದೃಷ್ಟಿಯಲ್ಲಿ ಎಲ್ಲಿ ದೋಷ ಇದೆ ಎಂದು ಹೇಳುವುದಾದರೆ ನಮ್ಮ ಸಮಾಜ ಮೇರೆಗೆ ಏನು ಕೆಲವೊಂದು ಸಂಗತಿಗಳಾಗುತ್ತಿವೆಯೋ ಅಲ್ಲಿ ದೋಷ ಇದೆ. ಉದಾಹರಣೆಗೆ ನಮ್ಮಲ್ಲಿ ರಚನೆಯ ಅನೇಕ ಖಾಸಗಿ ವಿದ್ಯಾಸಂಸ್ಥೆಗಳಿವೆ. ಈ ಖಾಸಗಿ ವಿದ್ಯಾಸಂಸ್ಥೆಗಳು ನಮ್ಮ ಜನರಿಗೆ ಕಲ್ಯಾಣವಾಗಲಿ, ನಮ್ಮ ದೇಶ ಉದ್ಧಾರವಾಗಲೀ ಎಂಬ ಉದ್ದೇಶದಿಂದ ಹುಟ್ಟಿಕೊಂಡಿಲ್ಲ. ಕೆಲವೊಂದು ಜಾತಿಗಳವರು, ಕೆಲವೊಂದು ಸಮಾಜದ ಹಿತಾಶಕ್ತಿಗಳು ತಮ್ಮ ಸಮಾಜವನ್ನು ಮೇಲೆ ತರಬೇಕು. ತಮ್ಮ ಸಮಾಜದಲ್ಲಿ ಪ್ರತಿಯೊಬ್ಬರೂ ವಿದ್ಯಾವಂತರಾಗ ಬೇಕು, ಸಮಾಜ ಮುಂದೆ ಬರಬೇಕು ಎಂಬ ಉದ್ದೇಶದಿಂದ ಶಿಕ್ಷಣ ಸಂಸ್ಥೆಗಳನ್ನು ತೆರೆಯುತ್ತಾರೆ. ಆಯಾ ಸಮಾಜದ ಶಿಕ್ಷಣ ಸಂಸ್ಥೆಗಳು ಆಯಾ ಸಮಾಜದವರಿಗೆ ಮಾತ್ರ ಹೆಚ್ಚು ಸವಲತ್ತುಗಳನ್ನು ನೀಡಿ ಶಿಕ್ಷಣ ಕೊಡುತ್ತಿರುವುದರಿಂದ ಪ್ರತಿಯೊಂದು ಜಾತಿಯವರಿಗೂ, ಪ್ರತಿಯೊಂದು ಸಮಾಜದವರಿಗೂ ನ್ಯಾಯವಾಗಿ ದೊರೆಯಬೇಕಾದ ಶಿಕ್ಷಣ ಸೌಲಭ್ಯ ದೊರೆಯುತ್ತಿಲ್ಲ.

ಮಾನ್ಯ ಸದಸ್ಯರಾದ ಹಾರ್ನಳ್ಳಿ ರಾಮಸ್ವಾಮಿಯವರು ಮಾತನಾಡುತ್ತಾ ನಮ್ಮಲ್ಲಿ ಸರ್ಕಾರಿ ಶಾಲೆಗಳಿಗಿಂತ ಖಾಸಗಿ ಶಾಲೆಗಳೇ ಹೆಚ್ಚಾಗಿವೆ ಎಂದು ಹೇಳಿದರು. ನಾನು ನನ್ನ ಬಜೆಟ್ ಭಾಷಣವಲ್ಲೂ ಒಂದು ಮಾತನ್ನು ಹೇಳಿದ್ದೆ ಅದೇನೆಂದರೆ ನಮ್ಮ ದೇಶದಲ್ಲಿ ನಾನಾ ತರಹ ಹಿತಾಸಕ್ತಿಗಳಿವೆ ಎಂದು.

ಶ್ರೀ ಎಸ್ ಆರ್. ಬೊಮ್ಮಾಯಿ:— ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ. ಏನೆಂದರೆ ನಮ್ಮ ಮಾನ್ಯ ಸಾರಿಗೆ ಮಂತ್ರಿಗಳು ದಿನಕ್ಕೊಂದು ತರಹ ಬಣ್ಣ ಬಣ್ಣದ ಬಟ್ಟೆಯನ್ನು ಹಾಕಿಕೊಂಡು ಬರುತ್ತಿದ್ದಾರೆ. ಆದ್ದರಿಂದ ಅವರ ನಿಜವಾದ ಬಣ್ಣ ಯಾವುದು ಎಂಬುದೇ ಗೊತ್ತಾಗುತ್ತಿಲ್ಲ.

ಶ್ರೀ ಮಳ್ಳೂರು ಆನಂದರಾವ್:— ಇವತ್ತು ಕಪ್ಪು ಬಟ್ಟೆ ಹಾಕಿಕೊಂಡು ಬಂದಿದ್ದಾರೆ. ಇದರ ಅರ್ಥ ಏನು ? ಇದು ದುಃಖ ಸೂಚಕವೋ ಅಥವಾ ಯಾವುದಾದರೂ ಪ್ರತಿಭಟನೆ ಸೂಚಿಸುತ್ತಿದ್ದಾರೋ ಅಥವಾ ಶಬರಿಮಲೈಗೆ ಹೋಗುತ್ತಾರೋ ಏನು ?

ಛೇರ್ಮನ್:— ಅವರು ಇಷ್ಟಬಂದ ಬಟ್ಟೆಯನ್ನು ಹಾಕಿಕೊಂಡು ಬರಬಹುದು. ಅದು ಅವರ ಹಕ್ಕು. ಅದನ್ನು ಯಾರೂ ಕಸಿದ ಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಪಿ. ಪಿ. ಹೆಗಡೆ:— ನಮ್ಮ ಸಮಾಜದಲ್ಲಿ ಯಾರೇ ಯಾವುದೇ ಕಾರ್ಯವನ್ನು ಮಾಡಬೇಕಾದರೂ ತಮ್ಮ ಹಿತಾಸಕ್ತಿಗಳಿಗೆ ಅನುಸಾರವಾಗಿ. ತಮ್ಮ ಫಾಯಿದೆಯ ಸಲುವಾಗಿ ಕೆಲಸ ಮಾಡುತ್ತಿದ್ದಾರೆ. ಅದರಿಂದ ಕೆಲವೊಂದು ಜನರಿಗೆ ಮಾತ್ರ ಅನುಕೂಲವಾಗಿರಬಹುದು. ಇದರಿಂದ ಕೆಳಗಿನ ವರ್ಗಕ್ಕೆ ಯಾವ ರೀತಿ ಅನ್ಯಾಯವಾಗಿದೆ ಎಂಬುದನ್ನು ನೋಡಬೇಕು.

೪-೦೦ ಪಿ. ಎಂ.

ನಮ್ಮ ಕೆಲವು ಮಾನ್ಯ ಮಿತ್ರರು ಈಗಾಗಲೇ ಹೇಳಿದ ಹಾಗೆ ನಮ್ಮಲ್ಲಿರುವ ಶಿಕ್ಷಣ ಸಂಸ್ಥೆ ಅವರಲ್ಲೂ ಪ್ರೈಮರಿ ಎಜುಕೇಷನ್‌ನ್ನು ಖಾಸಗಿಯವರು ತಮ್ಮ ಕೈವಶ ಮಾಡಿಕೊಂಡಿದ್ದಾರೆ. ಸರ್ಕಾರಿ ರಂಗದಲ್ಲಿರುವ ಸಂಸ್ಥೆಗಳಲ್ಲೇ ಹರಿಜನ-ಗಿರಿಜನರಿಗೆ ಎಷ್ಟು ರಿಸರ್ವೇಷನ್ ಕೊಡಬೇಕೋ ಅದನ್ನು ಇನ್ನೂ ಕೊಟ್ಟಿಲ್ಲ. ಸಾಧಾರಣ ೬ ಪರ್ಸೆಂಟ್ ರಿಸರ್ವೇಷನ್ ಕೊಟ್ಟಿದ್ದಾರೆ. ಅದನ್ನೂ ಇನ್ನೂ ಕೊಡಬೇಕಾಗಿದೆ. ಸರ್ಕಾರಿ ರಂಗದಲ್ಲಿರುವ ಸಂಸ್ಥೆಗಳಲ್ಲೇ ಈ ರೀತಿಯಾದರೆ ಇನ್ನು ಖಾಸಗಿ ರಂಗದಲ್ಲಿರುವ ಪ್ರೈಮರಿ ಎಜುಕೇಷನ್‌ನಲ್ಲಿ ೧೩,೪೬೦ ಜನ ಉಪಾಧ್ಯಾಯರುಗಳಿದ್ದಾರೆ. ಅದರಲ್ಲಿ ಹರಿಜನ-ಗಿರಿಜನರಿಗೆ ಏನು ಕೊಟ್ಟಿದ್ದಾರೋ? ಎಷ್ಟರ ಮಟ್ಟಿಗೆ ರಿಸರ್ವೇಸನ್ ಕೊಟ್ಟಿದ್ದಾರೋ? ತಿಳಿಯದು. ಆ ರೀತಿ ಕೊಟ್ಟಿದ್ದರೂ ಒಂದು ಪರ್ಸೆಂಟ್ ಕೊಟ್ಟಿರಬಹುದು. ಖಾಸಗಿಯವರಿಂದ ಕೆಲವು ಜನರಿಗೆ ಉಪಯೋಗವಾಗಿರಬಹುದು. ಅದರಿಂದ ಕೆಲವರು ಫಾಯಿದೆ ತೆಗೆದುಕೊಂಡಿರಬಹುದು. ಆದರೆ ಯಾವ ದುರ್ದೈವಿ ಜನಗಳಿಗೆ ಸರ್ಕಾರದಿಂದ ಕೂಡ ರಿಯಾಯಿತಿಯನ್ನು ಕೊಡುತ್ತಿದ್ದಾರೆ ಆದರೆ ಖಾಸಗಿ ರಂಗದಲ್ಲಿರುವ ಶಿಕ್ಷಣ ಸಂಸ್ಥೆಗಳು ಆ ಒಂದು ರಿಯಾಯಿತಿಯನ್ನು ಕೊಟ್ಟಿಲ್ಲ ಆದ್ದರಿಂದ ಖಾಸಗಿಯವರು ನಮಗೆ ಬೇಡ. ಇನ್ನೂ ಖಾಸಗಿಯವರು ನಡೆಸುತ್ತಿರುವ ಸೆಕೆಂಡರಿ ಸ್ಕೂಲ್ ವಿಚಾರದಲ್ಲಿ ಹೇಳುವುದಾದರೆ; ಇವರಲ್ಲಿ ೧೮,೭೭೫ ಜನ ಉಪಾಧ್ಯಾಯರುಗಳಿದ್ದಾರೆ. ಇವರಲ್ಲಿ ೧೦೦ ಜನ ಉಪಾಧ್ಯಾಯರನ್ನು ತೆಗೆದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಅದೇ ರೀತಿ ಖಾಸಗಿಯವರು ನಡೆಸುತ್ತಿರುವ ಕಾಲೇಜುಗಳಲ್ಲಿ ೯,೭೭೩ ಜನ ಉಪಾಧ್ಯಾಯರು ಇದ್ದಾರೆ. ಇದರಲ್ಲೂ ಹರಿಜನ-ಗಿರಿಜನರಿಗೆ ನ್ಯಾಯವಾಗಿ ಕೊಡಬೇಕಾದಂತಹ ಪರ್ಸೆಂಟೇಜನ್ನು ಕೊಟ್ಟಿದ್ದಾರೋ ಇಲ್ಲವೋ ತಿಳಿಯದು. ಸರ್ಕಾರದವರು ನಡೆಸತಕ್ಕಂತಹ ಸಂಸ್ಥೆಯಲ್ಲಿ ಹರಿಜನ-ಗಿರಿಜನರಿಗೆ ನ್ಯಾಯವಾಗಿ ಕೊಡಬೇಕಾದ ಪರ್ಸೆಂಟೇಜನ್ನು ಕೊಡಬೇಕೆಂದು ನಾವು ಕೇಳುವುದಕ್ಕೆ ಹಕ್ಕು ಇದೆ. ಆದರೆ ಖಾಸಗಿ ಸಂಸ್ಥೆಯವರ ಮೇಲೆ ನಾವು ಆ ರೀತಿ ಕೇಳುವಂತಹ ಹಕ್ಕು ಇರುವುದಿಲ್ಲ. ಆದರೂ ಖಾಸಗಿ ಸಂಸ್ಥೆಯವರೂ ಕೂಡ ರಿಜಿಸ್ಟ್ರೇಷನ್‌ ಬದ್ಧವಾಗಿ ಕೊಡಬೇಕಾದ ರಿಸರ್ವೇಷನನ್ನು ಕೊಡಬೇಕೆಂದು ಸರ್ಕಾರ ಆದೇಶವನ್ನು ಹೊರಡಿಸಿದೆ ಈ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ. ಖಾಸಗೀ ಕ್ಷೇತ್ರದಲ್ಲಿರುವ ಶಿಕ್ಷಣ ಸಂಸ್ಥೆಯಲ್ಲೂ ಕೂಡ ಹರಿಜನ-ಗಿರಿಜನರಿಗೆ ರಿಸರ್ವೇಷನ್ನು ಕೊಡಬೇಕೆಂದು ಸರ್ಕಾರ ಆಜ್ಞೆ ಮಾಡಿದ್ದಾರೆ. ಈ ರೀತಿ ಆಜ್ಞೆಯನ್ನು ಮಾಡಿದ ನಂತರ ಯಾವಯಾವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಎಷ್ಟೆಷ್ಟು ಹರಿಜನ-ಗಿರಿಜನರಿಗೆ ಕೊಟ್ಟಿದ್ದಾರೆ? ಎಂಬುದಾಗಿ ಕೇಳಿದ್ದೆ. ಆದರೆ ಅದು ಇದುವರೆಗೂ ಏಕೋ ಬರಲೇ ಇಲ್ಲ. ಇದರ ಬಗ್ಗೆ ನನಗೆ ಡಿ.ಪಿ.ಐ.ರವರು ಪತ್ರ ಬರೆದಿದ್ದಾರೆ. ಆ ಪ್ರಕಾರ ನೋಡಬೇಕಾಗಿದೆ. ಬೆಳಗಾಂ ಜಿಲ್ಲೆಯಲ್ಲಿ ೧೮೬ ಖಾಸಗಿ ಶಿಕ್ಷಣ

ಸಂಸ್ಥೆಗಳಿವೆ. ಇವುಗಳಲ್ಲಿ ಸರ್ಕಾರದವರು ಆಜ್ಞೆ ಮಾಡಿದ ಬಳಿಕ ೪೮೦ ಜನ ಉಪಾಧ್ಯಾಯರನ್ನು ಈ ಖಾಸಗಿ ಸಂಸ್ಥೆಯವರು ಭರ್ತಿ ಮಾಡಿಕೊಂಡಿದ್ದಾರೆ: ಅವರಲ್ಲಿ ಹರಿಜನ–ಗಿರಿಜನರಿಗೆ ಕೇವಲ ೩೩ ಜನರಿಗೆ ಮಾತ್ರ ತೆಗೆದು ಕೊಂಡಿದ್ದಾರೆ. ಅದೂ ಕೂಡ ಯಾರನ್ನು ತೆಗೆದುಕೊಂಡಿದ್ದಾರೆ ಎಂದರೆ ಕ್ಲಾಸ್ (೪)ನ್ನು ತೆಗೆದುಕೊಂಡಿದ್ದಾರೆ. ಸರ್ಕಾರದವರು ಪ್ರತಿಯೊಂದು ಕೇಡರ್‌ನಲ್ಲೂ ಹರಿಜನ–ಗಿರಿಜನರಿಗೆ ನಿಗದಿಪಡಿಸಲಾಗಿರುವ ಪರ್ಸೆಂಟೇಜ್ ಪ್ರಕಾರ ತೆಗೆದುಕೊಳ್ಳಬೇಕೆಂದು ಆದೇಶವನ್ನು ಕೊಟ್ಟಿದ್ದರೂ ಈ ರೀತಿ ಮಾಡಿದ್ದಾರೆ. ಅದೇ ರೀತಿ ಹರಿಜನ–ಗಿರಿಜನ ವಿದ್ಯಾರ್ಥಿಗಳಿಗೆ ಸರಿಯಾದ ಮಾನ್ಯತೆಯನ್ನು ಕೊಡುತ್ತಿಲ್ಲ. ಈ ಎಲ್ಲಾ ಕಾರಣಗಳಿಂದಲೇ ಶಿಕ್ಷಣ ಕ್ರಮದಲ್ಲಿ ದೋಷ ಇದೆ ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಶಿಕ್ಷಣ ಕ್ರಮದಲ್ಲಿ ಮೂಲಭೂತವಾಗಿ ಬದಲಾವಣೆಯಾಗಬೇಕಾಗಿದೆ ಎಂಬುದಾಗಿ ನಮ್ಮ ಮಿತ್ರರೊಬ್ಬರು ಹೇಳಿದರು. ಮುಂದೆ ಈ ದೇಶವನ್ನು ಕಟ್ಟತಕ್ಕಂತಹ ಪ್ರಜೆಗಳು ಈ ಶಿಕ್ಷಣದಿಂದ ಪ್ರಾರಂಭವಾಗುತ್ತದೆ. ಈ ರೀತಿಯ ಶಿಕ್ಷಣ ಕ್ರಮ ನಮ್ಮಲ್ಲಿ ಇಲ್ಲ ಅದು ಏಕೆ ಇಲ್ಲವೋ ನನಗೆ ತಿಳಿಯದು, ಸಂವಿಧಾನದ ಪ್ರಸ್ತಾವನೆಯಲ್ಲಿ, ಸಾರ್ವಭೌಮತ್ವ, ಸಮಾಜವಾದ, ಜಾತ್ಯಾತೀತ, ಹಾಗೂ ಪ್ರಜಾಪ್ರಭುತ್ವ ಎಂಬುದಾಗಿ ಹೇಳಿದ್ದಾರೆ. ಈ ವಿಷಯವನ್ನು ನಮ್ಮ ವಿದ್ಯಾರ್ಥಿಗಳು ಕಲಿಯುವುದಕ್ಕೆ ನಾವು ಏನಾದರೂ ಪ್ರಯತ್ನ ಮಾಡಿದ್ದೇವೆಯೇ? ನಾವು ಸಮಾಜವಾದವನ್ನು ಕಟ್ಟುವುದಕ್ಕೆ ಹೊರಟಿರುವಂತಹ ನಾವು ಸಮಾಜವಾದದ ವಿಚಾರವನ್ನು ವಿದ್ಯಾರ್ಥಿಗಳಿಗೇನಾದರೂ ತಿಳಿಸಿದ್ದೇವೆಯೇ? ಅವರು ಯಾವುದೊ ಒಂದು ಮಾರ್ಗದಲ್ಲಿ ಹೋಗುತ್ತಿದ್ದಾರೆ. ಅವರು ದೇಶವನ್ನು ಯಾವ ರೀತಿ ಕಟ್ಟಬೇಕು ಎಂಬುದು ಗೊತ್ತಿಲ್ಲ. ಮತ್ತೆ ವಿದ್ಯಾರ್ಥಿಗಳಿಗೆ ಸಮಾಜವಾದದ ಕಲ್ಪನೆ ಕೂಡ ಇಲ್ಲ. ಇದರಿಂದ ನಾವು ಸಮಾಜವಾದವನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತೆ ನಾವು ವರ್ಗರಹಿತ ಹಾಗೂ ಜಾತ್ಯಾತೀತ ಸಮಾಜವನ್ನು ಕಟ್ಟುವುದಕ್ಕೆ ಹೊರಟಿರತಕ್ಕಂತಹ ನಾವು ಆ ಬಗ್ಗೆ ನಾವು ಪ್ರೈಮರಿ ಶಾಲೆಗಳಲ್ಲಿ, ಹೈಸ್ಕೂಲ್‌ಗಳಲ್ಲಿ ಹಾಗೂ ಕಾಲೇಜುಗಳಲ್ಲಿ ಏನಾದರೂ ವಿದ್ಯಾರ್ಥಿಗಳಿಗೆ ತಿಳಿಸಿದ್ದೇವೆಯೇ? ಈ ವಿಷಯವನ್ನು ನಾವು ಯಾರಿಗೂ ತಿಳಿಸಿಲ್ಲ, ಸರ್ಕಾರದವರು ಖಾಸಗಿ ಸಂಸ್ಥೆಗಳಿಗೆ ಸಹಾಯ ಮಾಡುತ್ತಿದ್ದಾರೆ. ನಾವು ಬರಿ ಬಾಯಲ್ಲಿ ಸಮಾಜವಾದವನ್ನು ಜಾರಿಗೆ ತರುತ್ತೇವೆಂದು ಹೇಳಿದರೆ ಸಾಧ್ಯವಾಗುವುದಿಲ್ಲ ಇದನ್ನು ಜಾರಿಗೆ ತರಬೇಕಾದರೆ ಪ್ರಾರಂಭದಿಂದಲೇ ಜಾರಿಗೆ ತರಬೇಕು ಇದರಿಂದ ಸಮಾಜಕ್ಕೆ ಫಾಯಿದೆಯಾಗಬೇಕು. ಆದರೆ ಖಾಸಗಿ ಸಂಸ್ಥೆಯವರನ್ನು ಏನು ನೀವು ನಿರ್ಮಾಣ ಮಾಡಿದ್ದೀರಿ. ಅವರು ತಮ್ಮ ಜಾತಿ, ತಮ್ಮ ಜನ, ತಮ್ಮ ಧರ್ಮ ಇವುಗಳನ್ನು ಮೇಲಕ್ಕೆ ತರುವುದಕ್ಕೆ ನಿರ್ಮಾಣವಾಗಿವೆ ಹೊರತು. ಸಮಾಜದ ನಿರ್ಮಾಣಕ್ಕಲ್ಲ. ಆದ್ದರಿಂದ ಈ ಶಿಕ್ಷಣ ಕ್ರಮ ಸುಧಾರಣೆಯಾಗಬೇಕು. ಶಿಕ್ಷಣ ಕ್ರಮ ಸರ್ಕಾರದ ಕೈಯಲ್ಲಿ ಇರಬೇಕು. ಈ ದೇಶವನ್ನು ಹೇಗೆ ಕಟ್ಟಬೇಕೆಂಬುದನ್ನು ವಿಚಾರ ಮಾಡಬೇಕು ಈ ವಿಚಾರವನ್ನು ವಿದ್ಯಾರ್ಥಿಗಳ ತಲೆಯಲ್ಲಿ ಹಾಕಬೇಕು. ಆದರೆ ಖಾಸಗಿ ಸಂಸ್ಥೆಯವರು ತಮಗೆ ಹೇಗೆ ಬೇಕೋ ಹಾಗೆ ಶಿಕ್ಷಣವನ್ನು ಕೊಟ್ಟು ತಮಗೆ ಹೇಗೆ ಬೇಕೋ ಆ ರೀತಿಯಲ್ಲಿ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿದ್ದಾರೆ. ಆದ್ದರಿಂದ ಈ ಒಂದು ಶಿಕ್ಷಣ ಕ್ಷೇತ್ರವನ್ನು ಖಾಸಗಿಯವರ ಕೈಯಲ್ಲಿ ಕೊಡಬಾರದು. ಇದರಿಂದ ದೇಶಕ್ಕೆ ದೊಡ್ಡ ಹಾನಿಯಾಗುತ್ತದೆ. ಇದರಿಂದ ನಾವು ಸಮಾಜವಾದವನ್ನು ಕಟ್ಟಲು ಬೇರೆ ದಾರಿಯನ್ನು ಅವರ ವಿರುದ್ಧವಾಗಿ ನಿರ್ಮಾಣ ಮಾಡಿದಂತಾಗುತ್ತದೆ. ಆದ್ದರಿಂದ ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ಆಗ್ರಹ ಮಾಡಿಕೊಳ್ಳುವುದೇನೆಂದರೆ ಇದು ಸಾಮಾನ್ಯವಾದ ಸಂಗತಿಯಲ್ಲ ಇದನ್ನು ಅಷ್ಟು ಸುಲಭವಾಗಿ ತೆಗೆದುಕೊಳ್ಳಬಾರದು ಈ ದೇಶವನ್ನು ಕಟ್ಟುವ ಸಲುವಾಗಿ ಈ ದೇಶದ ಭವಿಷ್ಯದ ಸಲುವಾಗಿ ಶಿಕ್ಷಣ ಕ್ಷೇತ್ರವನ್ನು ಸರ್ಕಾರದವರೇ ತೆಗೆದುಕೊಳ್ಳಬೇಕು. ಅದು ಪ್ರಾಥಮಿಕ ಶಾಲೆಯಾಗಿರಬಹುದು ಅಥವಾ ಹೈಸ್ಕೂಲೇ ಆಗಿರಬಹುದು. ನಮ್ಮ ಮುಂದಿನ ಸಮಾಜವನ್ನು ಕಟ್ಟುವುದಕ್ಕೆ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿ ಈಗ ಇರವಂತಹ ಶಿಕ್ಷಣ ಕ್ರಮದಿಂದ ದೊಡ್ಡವರು ಇನ್ನೂ ದೊಡ್ಡವರಾಗಿ ಮೇಲೆ ಬರುತ್ತಾರೆ, ಹಿಂದುಳಿದವರು ಹಿಂದುಳಿದವರಾಗಿಯೇ ಇರುತ್ತಾರೆ. ಆದ್ದರಿಂದ ಇದರ ಕಡೆ ಹೆಚ್ಚು ಲಕ್ಷವನ್ನು ಹರಿಸುವುದು ಸರ್ಕಾರದ ಕರ್ತವ್ಯ ಮತ್ತೆ ಕೆಲವು ಸಾಮಾನ್ಯ ಸದಸ್ಯರು ವಿದ್ಯಾರ್ಥಿಗಳಲ್ಲಿ ಅಶಾಂತಿ, ಅಶಿಸ್ತು ಉಂಟಾಗಿ ವಿದ್ಯಾರ್ಥಿಗಳೆಲ್ಲರೂ ಕೆಟ್ಟು ಬಿಟ್ಟಿದ್ದಾರೆಂದು ಹೇಳಿದ್ದಾರೆ. ವಿದ್ಯಾರ್ಥಿಗಳು ಹೀಗೆ ಆಗುವುದರಿಂದ ನಮಗೆ ಕಷ್ಟ ಬರುತ್ತದೆ. ಇದರ ಬಗ್ಗೆ ಹೇಳಬೇಕಾದುದ್ದು ಬಹಳ ಇದೆ. ಇತ್ತೀಚೆಗೆ ನಾಲ್ಕಾರು ವರ್ಷಗಳಿಂದ ವಿದ್ಯಾರ್ಥಿಗಳು ಕೆಡುವುದಕ್ಕೆ ರಾಜಕೀಯ ಮುಖಂಡರಾದ ನಾವುಗಳೇ ಕಾರಣ. ರಾಜಕೀಯ ಪಕ್ಷದ ಮುಖಂಡರು ವಿದ್ಯಾರ್ಥಿಗಳನ್ನು ತಪ್ಪು ದಾರಿಗೆ ಎಳೆದು ತನ್ನ ಒಂದು ಅನುಕೂಲಕ್ಕಾಗಿ ವಿದ್ಯಾರ್ಥಿಗಳನ್ನು ಬಳಸಿಕೊಳ್ಳುವುದರಿಂದ ಈ ರೀತಿಯ ಅಶಾಂತಿ ಮೂಡುವುದಕ್ಕೆ ಕಾರಣವಾಗಿದೆ.

ನಾನು ಈ ಬಗ್ಗೆ ಹೇಳುವುದೇನೆಂದರೆ ಒಂದು ಸಾರಿ ಈ ವಿದ್ಯಾರ್ಥಿಗಳ ಮನಸ್ಸನ್ನು ಕೆಡಿಸಿಬಿಟ್ಟರೆ ಅವರನ್ನು ಪುನಃ ಕೈಹಿಡಿದು ಎತ್ತುವುದು ಕಷ್ಟ. ಅವರು ಮತ್ತೇ ನಮ್ಮ ಕೈಗೆ ಸರಿಯಾಗಿ ಸಿಕ್ಕುವುದಿಲ್ಲ. ಆದುದರಿಂದ ನಾವು ಈ ವಿದ್ಯಾರ್ಥಿಗಳನ್ನು ಸರಿಯಾದ ರೀತಿಯಲ್ಲಿ ತಯಾರು ಮಾಡಬೇಕಾದರೆ ಸರಿಯಾದ ಜಾಗರೂಕತೆಯಿಂದ ಅವರನ್ನು ತಯಾರು ಮಾಡಬೇಕಾಗಿದೆ. ಮತ್ತು ನಮ್ಮ ಈ ಶಿಕ್ಷಣದಲ್ಲಿ ನಮ್ಮ ದೇಶವನ್ನು ಯಾವ ರೀತಿಯಾಗಿ ಮುಂದಕ್ಕೆ ಚೆನ್ನಾಗಿ ಬೆಳೆಸಿಕೊಂಡು ಹೋಗಬೇಕೋ ಆ ಬಗ್ಗೆ ಸರಿಯಾದ ಜಾಗೃತಿ ವಹಿಸಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಒಂದು ಮಹತ್ವವಾದ ನಿರ್ಧಾರವನ್ನು ಈ ಸಮಯದಲ್ಲಿ ತೆಗೆದುಕೊಂಡು ಅದರಂತೆ ನಡೆದುಕೊಂಡು ಹೋಗುವ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಈಗ ಸಮಾಜದಲ್ಲಿ ಇದಕ್ಕೆ ವಿರುದ್ಧವಾದ ದೂರುಗಳು ಬರುತ್ತ ಇವೆ. ಇದಕ್ಕೆ ಅವಕಾಶ ಕೊಡದೆ ಇದನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗುವಂತೆ ಜಾಗರೂಕತೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮತ್ತೊಮ್ಮೆ ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಡಿ. ಚೌಡಯ್ಯ (ಕೊರಗೋಡು) : ಸನ್ಮಾನ್ಯ ಅಧ್ಯಕ್ಷರೇ, ನನ್ನ ನಾಲ್ಕು ಮಾತುಗಳನ್ನು ಈ ವಯಸ್ಕರ ಶಿಕ್ಷಣದಿಂದ ಮೊಟ್ಟ ಮೊದಲಾಗಿ ಪ್ರಾರಂಭ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ಶಿಕ್ಷಣ ಕ್ಷೇತ್ರದಲ್ಲಿ ಈ ವಯಸ್ಕರ ಶಿಕ್ಷಣ ಬಹಳ ಅತಿ ಮುಖ್ಯವಾದಂಥಾ ಒಂದ ಅಂಗ. ಕಳೆದ ವರ್ಷದ ರಿಪೋರ್ಟಿನಲ್ಲಿ ಈ ರೀತಿ ಇದೆ. ೧ ಲಕ್ಷ ೬೧ ಸಾವಿರ ರೂಪಾಯಿಯನ್ನು ನ್ಯಾಷನಲ್ ಅಡಲ್ಟ್ ಎಜುಕೇಷನ್ ಪ್ರೋಗ್ರಾಂ ಇನ್ ದಿ ಸ್ಟೇಟ್ ಅಂತ ಹೇಳಿ ಈ ಬಗ್ಗೆ ಸಮಾರಂಭಗಳನ್ನು ಹಳ್ಳಿ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಮಾಡಿದ್ದಕ್ಕಾಗಿ ಸರ್ಕಾರದವರು ಇಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಈಗ ಈ ಒಂದು ರಾಷ್ಟ್ರೀಯ ಕಾರ್ಯಕ್ರಮ ಯಾವ ರೂಪವನ್ನು ತಾಳಿದೆ ಎನ್ನತಕ್ಕಂಥಾದನ್ನು ಈ ಮಂದಿಯಲ್ಲಿ ಬಹುವಾಗಿ ಸರ್ಕಾರಕ್ಕೆ ಹೇಳುವುದಕ್ಕೆ ಸಾಧ್ಯವಾಗಿಲ್ಲಾ. ಈಗ ಇದರ ಬಗ್ಗೆ ನನ್ನ ಒಂದು ಕಿಂಚಿತ್ ಅನುಭವವನ್ನು ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿ ಸುಮಾರು ಹತ್ತಾರು ರಾತ್ರಿ ಶಾಲೆಗಳನ್ನು ವಯಸ್ಕರ ಶಿಕ್ಷಣ ಸಮಿತಿಯವರು ನಡೆಸಿದ್ದಾರೆ. ಸುಮಾರು ೧-೧½ ವರ್ಷದಿಂದ ಆ ಉಪಾಧ್ಯಾಯರಿಗೆ ಸಂಬಳವನ್ನೇ ಕೊಟ್ಟಿಲ್ಲಾ. ಸ್ಥಳೀಯ ತಾಲ್ಲೂಕ್ ಬೋರ್ಡಿನವರು ಅವರ ಸಂಬಳವನ್ನು ಒಂದಲ್ಲ ನಾಲ್ಕಾರು ಪತ್ರಗಳನ್ನು ಬರೆದಿದ್ದಾರೆ. ನಾನು ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿದ್ದಾಗ ಒಂದು ಪ್ರಶ್ನೆ ಹಾಕಿದೆ. ಏನೆಂದರೆ ಈ ಶಾಲೆಯನ್ನು ನಡೆಸಿದವರು ಯಾರು ಎಲ್ಲಿ ನಡೆಸಿದ್ದಾರೆ, ಯಾವಾಗ ನಡೆಸಿದರು, ಎಂದು. ಈ ಬಗ್ಗೆ ಯಾವ ದಾಖಲೆಯೂ ಇಲ್ಲಾ. ಅಷ್ಟೇ ಅಲ್ಲ ಆ ಶಾಲೆಗಳನ್ನು ನಮ್ಮ ತಾಲ್ಲೂಕ್ ಬೋರ್ಡ್ ಅಧಿಕಾರಿಗಳು ಹೋಗಿ ಇನ್‌ಸ್ಪೆಕ್ಷನ್ ಕೂಡ ಮಾಡಿ ಕೊಂಡು ಬರುವುದಕ್ಕೆ ಅವರು ಅವಕಾಶವನ್ನು ಕಲ್ಪಿಸಿಕೊಟ್ಟಿಲ್ಲಾ. ಹೀಗಾದರೆ ನಾವು ಸಂಬಳವನ್ನು ಅವರಿಗೆ ಹೇಗೆ ಕೊಡಬೇಕು? ಸುಮಾರು ೧½ ವರ್ಷದಿಂದಲೂ ಕೂಡ ನಾವು ನೋಡುತ್ತಾ ಇದ್ದೇವೆ ಆ ಉಪಾಧ್ಯಾಯರಿಗೆ ಇನ್ನೂ ಸಂಬಳವನ್ನೇ ಕೊಟ್ಟಿಲ್ಲಾ ಈ ಬಗ್ಗೆ ಮತ್ತೆ ಹೇಳಬೇಕಾದರೆ ಹತ್ತಾರು ವರ್ಷಗಳಿಂದಲೂ ಸಹ ಈ ವಯಸ್ಕರ ಶಿಕ್ಷಣದಲ್ಲಿ ಪಾಠ ಹೇಳತಕ್ಕಂಥಾ ಉಪಾಧ್ಯಾಯರಿಗೆ ಸಂಬಳವನ್ನು ಕೊಡತಕ್ಕಂಥಾದ್ದು ಇನ್ನೂ ಸಾಧ್ಯವಾಗಿಲ್ಲಾ ಎನ್ನತಕ್ಕಂಥಾ ಮಾತನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಇತ್ತೀಚಿಗೆ ಅನ್‌ಎಂಪ್ಲಾಯ್ಡ್ ಗ್ರಾಜುಯೇಟ್ಸ್‌ಗೆ ಅವರಿಗೆ ವಿವಿಧ ಇಲಾಖೆಗಳಲ್ಲಿ ಕೆಲಸ ಕೊಟ್ಟು ಅವರಿಗೆ ೧೫೦ ರೂಪಾಯಿ ಬರುವ ಹಾಗೆ ಮಾಡಿಕೊಟ್ಟಿದ್ದೀರಿ. ರಾತ್ರಿ ಶಾಲೆಗಳನ್ನೂ ಕೂಡ ನಡೆಸುವುದಕ್ಕೆ ಆ ಯುವಕರಿಗೆ ಕೆಲವರಿಗೆ ವಹಿಸಿಕೊಟ್ಟಿದ್ದೀರಿ. ಬಹುಶಃ ಅದರಲ್ಲಿ ಯಾರೂ ಕೂಡ ರಾತ್ರಿ ಶಾಲೆಗಳನ್ನು ನಡೆಸುತ್ತಾ ಇಲ್ಲಾ. ಅವರು ತಿಂಗಳಿಗೆ ೧೫೦ ರೂಪಾಯಿ ಸಂಬಳವನ್ನು ಮಾತ್ರ ತೆಗೆದುಕೊಳ್ಳುತ್ತಾರೆ, ಬಹುಶ: ಅವರು ಏತಕ್ಕೆ ನಡೆಸುತ್ತಾ ಇಲ್ಲ ಎಂದರೆ ಅವರಿಗೆ ಕೆಲಸವನ್ನು ಗೊತ್ತು ಪಡಿಸಿದರೆ ಅದನ್ನು ಸೂಪರ್‌ವಿಷನ್ ಮಾಡುವವರು ಯಾರು ಎನ್ನುವುದು ಏನಾದರೂ ನಿಗದಿಯಾಗಿದೆಯೋ ಎಂದು ಕೇಳುತ್ತೇನೆ. ಈಪ್ರವೃತ್ತಿ ಅವರ ಕೈಯಲ್ಲಿ ಏನೂ ಕೆಲಸವಿಲ್ಲದೆ ಬರೀ ಸಂಬಳವನ್ನು ಪಡೆಯುತ್ತಾ ಇರುವುದನ್ನು ನಾನು ಕಣ್ಣಾರೆ ನೋಡುತ್ತಿದ್ದೇವೆ.

ಇನ್ನು ಪ್ರೀಪ್ರೈಮರಿ ಎಜುಕೇಷನ್ ಬಗ್ಗೆ ಅಥವಾ ಶಿಶುವಿಹಾರದ ಬಗ್ಗೆ ಹೇಳುವುದಾದರೆ ಈ ವಿದ್ಯಾಭ್ಯಾಸದಲ್ಲಿ ಕಳೆದ ವರ್ಷ ೧೦ ಶಾಲೆಗಳನ್ನು ಪ್ರಾರಂಭ ಮಾಡಲಾಗಿದೆ. ಎಂದು ಇಲ್ಲಿ ತಿಳಿಸಲಾಗಿದೆ, ಅದರಲ್ಲೂ ಕೂಡ ಟ್ರೈಬಲ್ ಏರಿಯಾ ಇರುವ ಕಡೆ ಪ್ರಾರಂಭ ಮಾಡಿದ್ದೀರಿ. ಅಂಥಾ ಕಡೆ ಇನ್ನು ಹೆಚ್ಚು

ಹೆಚ್ಚು ಶಾಲೆಗಳನ್ನು ಪ್ರಾರಂಭ ಮಾಡಬೇಕಿತ್ತು ಎಂದು ನಾನು ಹೇಳುತ್ತೇನೆ. ಬಹುಶಃ ಈ ವರ್ಷ ಎಷ್ಟು ಶಾಲೆಗಳನ್ನು ಪ್ರಾರಂಭ ಮಾಡುತ್ತೀರಿ ಅನ್ನುವುದನ್ನು ಸರ್ಕಾರ ಖಚಿತವಾಗಿ ಹೇಳಲಿಲ್ಲ. ಅದೇನೇ ಇರಲಿ ಈ ಗ್ರಾಮಾಂತರ ಪ್ರದೇಶಗಳಲ್ಲಿ ಕಳೆದ ಹತ್ತಾರು ವರ್ಷಗಳಿಂದ ಅಂದರೆ ಒಂದೆರಡು ದಶಕಗಳಿಂದ ಅಲ್ಲಿಯ ಸ್ಥಳೀಯ ಜನರು ಸ್ವಯಂ ಪ್ರೇರಿತವಾಗಿ ಈ ಪ್ರೈಮರಿ ಶಾಲೆಗಳನ್ನು ಆಗಲಿ ಅಥವಾ ಶಿಶುವಿಹಾರಗಳನ್ನು ಆಗಲಿ ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಈ ಬಗ್ಗೆ ನನ್ನ ತಾಲ್ಲೂಕಿನಲ್ಲಿ ಹೇಳುವುದಾದರೆ ಇಂಥಾದ್ದು ಸುಮಾರು ೬೩ ಶಿಶುವಿಹಾರಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ೧೦–೧೫ ವರ್ಷಗಳಿಂದಲೂ ಕೂಡ ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಅವುಗಳಿಗೆ ತಾವು ಧನಸಹಾಯವನ್ನೇನಾದರೂ ಕೊಡುತ್ತಿದ್ದೀರಾ? ಈ ಬಗ್ಗೆ ನಮ್ಮಲ್ಲಿ ಏನಾದರೂ ಒಂದು ನಿಯಮ ಇದೆಯೇ? ಅಥವಾ ಏನಾದರೂ ಒಂದು ಪದ್ಧತಿ ಇದೆಯೇ? ಎಂದು ನೋಡಿದರೆ ಅದೇನೂ ಇದ್ದಂತೆ ಕಾಣುವುದಿಲ್ಲ. ಬಹುಶಃ ನನಗೆ ಜ್ಞಾಪಕ ಇರುವ ಹಾಗೆ ನಾನು ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿದ್ದಂಥಾ ಸಂದರ್ಭದಲ್ಲಿ ೧೯೬೩–೬೪ರಲ್ಲಿ ಎರಡು ವರ್ಷ ಅಡ್‌ಹಾಕ್ ಗ್ರಾಂಟನ್ನು ಒಂದೊಂದು ಶಿಶುವಿಹಾರಕ್ಕೆ ೩೦೦–೪೦೦ ರೂಪಾಯಿನಂತೆ ಕೊಡುತ್ತಾ ಇದ್ದವು ಎಂದು ನಾನು ಹೇಳುತ್ತೇನೆ. ಈ ರೀತಿಯಾಗಿ ಪ್ರೈಮರಿ ಮತ್ತು ಸೆಕೆಂಡರಿ ಶಿಕ್ಷಣ ಮತ್ತು ಕಾಲೇಜು ಶಿಕ್ಷಣಕ್ಕೂ ಕೂಡ ಗ್ರಾಂಟ್ ಇನ್ ಕೋಡ್ ಪ್ರಕಾರ ಧನ ಸಹಾಯ ಏನಾದರೂ ಕೊಡುತ್ತಿದ್ದೀರಾ, ಇನ್ನು ಅದಕ್ಕಿಂತ ಹೆಚ್ಚಿನದಾಗಿ ನಾನು ಹೇಳುವುದಾದರೆ ಎಲ್ಲಿ ಶಿಶುವಿಹಾರಗಳನ್ನು ನಿಮ್ಮ ಒಂದು ನಿಯಮದ ಪ್ರಕಾರ ಚೆನ್ನಾಗಿ ನಡೆಸಿಕೊಂಡು ಬರುತ್ತಾರೋ ಅಂಥ ಕಡೆಗಳಲ್ಲಿ ಒಂದು ಶಿಶುವಿಹಾರವನ್ನು ಕೊಡುವುದಕ್ಕೆ ಸರ್ಕಾರಕ್ಕೆ ಏನು ಕಷ್ಟ ಇದೆ ಎನ್ನುವ ಪ್ರಶ್ನೆಯನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮುಂದಾದರೂ ಕೂಡ ಈ ರೀತಿ ಮಾಡುವುದಕ್ಕೆ ಏನು ತೊಂದರೆ ಇದೆ ಎಂದು ಅನೇಕ ಜನ ನನ್ನ ಸ್ನೇಹಿತರು ಹೇಳಿದ್ದಾರೆ. ಈ ಕ್ಷೇತ್ರದಲ್ಲಿ ಇರತಕ್ಕಂತಹ ಲೋಪದೋಷಗಳು ಏನು ಇವೆ ಅನ್ನುವುದಕ್ಕೆ ನನಗೆ ಏನು ಅನ್ನಿಸುತ್ತದೆ ಎಂದರೆ ಇದರಲ್ಲಿರತಕ್ಕಂಥಾ ಒಂದು ದೊಡ್ಡ ಲೋಪದೋಷ ಏನೆಂದರೆ ಹಳ್ಳಿಮಟ್ಟದಲ್ಲಿ ೩ ವರ್ಷದಿಂದ ೬ ವರ್ಷದವರೆಗೆ ವಯಸ್ಸು ಇರತಕ್ಕಂಥಾ ಮಕ್ಕಳು ಏನು ಇದ್ದಾರೆ ಅವರನ್ನು ಈ ಒಂದು ಶಿಶುವಿಹಾರದಲ್ಲಿ ಸೇರಿಸಿ ಸರಿಯಾದ ಒಂದು ಶಿಕ್ಷಣ ಕೊಡುವುದಕ್ಕೆ ಈವೊತ್ತಿನ ವಸ ಸರ್ಕಾರವಾಗಲಿ ಅಥವಾ ಸಮಾಜವಾಗಲಿ ಈ ಬಗ್ಗೆ ಸಾಕಷ್ಟು ಪ್ರಯತ್ನ ಮಾಡಿಲ್ಲ, ಮಾಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಆದುದರಿಂದ ಈ ಶಿಕ್ಷಣದ ಒಂದು ಮಟ್ಟ ಈ ರೀತಿಯಾಗಿ ಕುಸಿದು ಬೀಳುತ್ತಾ ಇದೆ ಎಂದು ಹೇಳುತ್ತೇನೆ. ನಾನು ಬಂದಿರತಕ್ಕಂಥಾ ಮಂಡ್ಯ ಜಿಲ್ಲೆ ಬಗ್ಗೆ ಹೇಳುವುದಾದರೆ ಈ ಜಿಲ್ಲೆ ಶಿಕ್ಷಣದಲ್ಲಿ ಹಿಂದುಳಿದಿದ್ದರೂ ಕೂಡ ಬೇರೆಯದರಲ್ಲಿ ಮುಂದೆ ಇದೆ. ಈ ಒಂದು ವಿಷಯವನ್ನು ಹೇಳುವುದಕ್ಕೆ ನನಗೆ ವಿಷಾದವಾಗುತ್ತದೆ. ದಯಮಾಡಿ ಶಿಕ್ಷಣ ಸಚಿವರು ಈ ಶಿಕ್ಷಣ ಕ್ಷೇತ್ರದಲ್ಲಿ ಬಹುಮುಖವಾಗಿ ಈ ಪ್ರೀ ಪ್ರೈಮರಿ ಶಿಕ್ಷಣದ ಬಗ್ಗೆ ಒಂದು ಹೊಸ ತೀರ್ಮಾನವನ್ನು ಕೊಡತಕ್ಕಂಥಾದ್ದು ಅತಿ ಮುಖ್ಯ ಎಂದು ನಾನು ಸರ್ಕಾರದ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ.

ಇನ್ನು ಪ್ರೈಮರಿ ಎಜುಕೇಷನ್ ವಿಚಾರದಲ್ಲಿ ಹೇಳುವುದಾದರೆ ನಾವು ಕಳೆದ ವರ್ಷ ಶಾಸನಸಭೆಯಲ್ಲಿ ಅಂದರೆ ಕಳೆದ ವರ್ಷದ ಚುನಾವಣೆಯಲ್ಲಿ ನಾವು ಗೆದ್ದು ಬಂದ ಮೇಲೆ ಈ ವಿಚಾರವಾಗಿ ಏನು ಹೇಳಿದ್ದೇವೆ ಎಂದರೆ ನಾವು ಹಳ್ಳಿಗಳಿಗೆ ಹೋಗತಕ್ಕಂಥಾದ್ದರ ವಿಷಯಗಳ ಬಗ್ಗೆ ಮತ್ತು ಆ ಹಳ್ಳಿಯ ಜನರು ಆಮೇಲೆ ಬಂದು ತಮಗೆ ದೂರುಗಳನ್ನು ಹೇಳತಕ್ಕಂಥಾದ್ದು ಈ ವಿಚಾರವಾಗಿ ಕಳೆದ ವರ್ಷದ ಬಜೆಟ್‌ನಲ್ಲಿ ಅಧಿವೇಶನದಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಅಲ್ಲದೆ ವೈಯುಕ್ತಿಕವಾಗಿಯೂ ಕೂಡ ಅನೇಕ ಸಂದರ್ಭಗಳಲ್ಲಿ ಸರ್ಕಾರದ ಗಮನಕ್ಕೂ ಸಹ ತಂದಿದ್ದೇವೆ. ಹೋದ ವರ್ಷದ ಬಡ್ಜೆಟ್ ಅಧಿವೇಶನದಲ್ಲಿ ನಾವು ಸಾಮಾನ್ಯವಾಗಿ ಏನು ಹೇಳಿದ್ದೇವೆ ಎಂದರೆ ಹಳ್ಳಿಯ ಶಾಲೆಗಳಲ್ಲಿ ಉಪಾಧ್ಯಾಯರು ಇಲ್ಲಾ ಎಂದು. ಇದಕ್ಕೆ ಮಾನ್ಯ ಮಂತ್ರಿಗಳು ಆಗ ಭರವಸೆಯನ್ನೂ ಸಹ ಕೊಟ್ಟರು. ಏನಂತ ಅಂದರೆ ಇನ್ನು ಒಂದೆರಡು ತಿಂಗಳಲ್ಲಿ ಡಿ.ಎಲ್.ಆರ್.ಸಿ. ಕಮಿಟಿಗಳನ್ನು ರಚನೆ ಮಾಡಿ ಕೇವಲ ೨–೩ ತಿಂಗಳುಗಳಲ್ಲಿ ಉಪಾಧ್ಯಾಯರುಗಳನ್ನು ರೆಕ್ರೂಟ್‌ಮೆಂಟ್ ಮಾಡುತ್ತೇವೆ ಎಂದು. ಇದುವರೆಗೂ ಕೂಡ ತಾವು ಮಾಡಲಿಲ್ಲಾ. ಮತ್ತು ಏತಕ್ಕೆ ಇದನ್ನು ಇದುವರೆಗೂ ಮಾಡಿಲ್ಲ ಅನ್ನುವುದಕ್ಕೆ ಯಾವ ಕಾರಣವನ್ನೂ ಸಹ ಕೊಟ್ಟಿಲ್ಲಾ. ಒಂದು ಸಾರಿ ಮಂತ್ರಿಗಳನ್ನು ನಾವು ಕೇಳಿದಾಗ ಅವರು ಹೇಳಿದರು ಈ ಕಮಿಟಿಗಳನ್ನು ರೀಕಾನ್ಸ್ಟಿಟ್ಯೂಟ್ ಮಾಡಬೇಕು ಎಂದು. ಇದನ್ನು ಅವರು ಹೇಳಿ ೩–೪ ತಿಂಗಳಾಗಿದೆ. ಈ ಕಮಿಟಿಗಳನ್ನು ರೀಕಾನ್ಸ್ಟಿಟ್ಯೂಟ್ ಮಾಡುವುದಕ್ಕೆ ವರ್ಷಗಟ್ಟಲೆಯಾದರೂ ಕೂಡಾ ಮಾಡಿಲ್ಲಾ. ಅನೇಕ ಶಾಲೆಗಳಲ್ಲಿ ಉಪಾಧ್ಯಾ-

ಯರು ಇಲ್ಲ ಎಂದು ನಿಜವಾಗಿ ಹೇಳಿದರೂ ಸಹ, ಇಂತಹ ಕರುಣಾಜನಕವಾದ ವಿಷಯವನ್ನು ಅವರ ಗಮನಕ್ಕೆ ತಂದರೂ ಸಹ ಅವರು ಇನ್ನೂ ಗಮನ ಕೊಟ್ಟಿಲ್ಲ. ಇದು ಎಂತಹವರಿಗಾದರೂ ಕೂಡ ಕಣ್ಣಿನಲ್ಲಿ ನೀರು ಬರುವಂತಹ ವಿಷಯ ಈ ಮಾತನ್ನು ನಾನು ಅತ್ಯಂತ ವಿಶಾದದಿಂದ ಹೇಳಬೇಕಾಗಿದೆ. ಗ್ರಾಮ ಪಂಚಾಯಿತಿ ಚೇರ್ಮನರು ಮತ್ತು ಅಲ್ಲಿನ ಜನರು ಒಂದು ಸಾರಿ ಅಲ್ಲ ಎರಡು ಸಾರಿ ಮಾನ್ಯ ಮಂತ್ರಿಗಳು ಕಂಡು ಈ ಬಗ್ಗೆ ಮಾತನಾಡಿದ್ದಾರೆ. ಮತ್ತು ಇದಕ್ಕೆ ಸಂಬಂಧಪಟ್ಟ ಸೆಕ್ರೆಟರಿಯೊಂದಿಗೆ ಮಾತನಾಡಿದ್ದಾರೆ. ಆವಾಗ ಅವರು ಏನು ಹೇಳಿದರು ಎಂದರೆ ಇನ್ನೇನು ೧೫ ದಿವಸದಲ್ಲೋ, ಒಂದು ತಿಂಗಳಲ್ಲೋ ಎರಡು ತಿಂಗಳಲ್ಲೋ ರೆಕ್ರೂಟ್‌ಮೆಂಟ್ ಮಾಡಿಬಿಡುತ್ತೇವೆಂದು ಹೇಳಿದರು. ಸ್ವಾಮಿ, ಈ ಸಂದರ್ಭದಲ್ಲಿ ತಮ್ಮ ಒಂದು ವಿಷಯ ಕೇಳುತ್ತೇನೆ. ಅದೇನೆಂದರೆ ಯಾರಾದರೂ ಆಗಲಿ ಒಂದು ಸಾರಿ ಸುಳ್ಳು ಹೇಳಬಹುದು, ಎರಡು ಸಾರಿ ಸುಳ್ಳು ಹೇಳಬಹುದು, ಮೂರು ಸಾರಿಯೂ ಸುಳ್ಳು ಹೇಳಬಹುದು, ಹೀಗೆ ಎಷ್ಟು ಸಾರಿ ಸುಳ್ಳು ಹೇಳುವುದಕ್ಕಾಗುತ್ತದೆ ಹೇಳಿ. ಅನೇಕ ಸಾರಿ ನನ್ನ ತಾಲ್ಲೂಕಿನಲ್ಲಿರುವ ಶಾಲೆಗಳಿಗೆ ನಾನು ಭೇಟಿ ಕೊಟ್ಟಿದ್ದೇನೆ. ಕೆಲವು ದೊಡ್ಡ ದೊಡ್ಡ ಶಾಲೆಗಳಲ್ಲಿ ೧೩-೧೪ ಜನ ಉಪಾಧ್ಯಾಯರುಗಳು ಕಡೆಗಳಲ್ಲಿ ೬-೭ ಜನ ಜನ ಮಾತ್ರ ಇದ್ದಾರೆ. ಇನ್ನು ೬-೭ ಜನ ಉಪಾಧ್ಯಾಯರು ಇರುವ ಕಡೆಗಳಲ್ಲಿ ೨-೩ ಜನ ಮಾತ್ರ ಇದ್ದಾರೆ. ಇನ್ನು ಸಿಂಗಲ್ ಟೀಚರ್ಸ್ ಇರುವಂಥಾ ಶಾಲೆಗಳಲ್ಲಿ ಸುಮಾರು ಹತ್ತಾರು ಶಾಲೆಗಳು ಉಪಾಧ್ಯಾಯರುಗಳ ಕೊರತೆಯಿಂದ ತಿಂಗಳಾನುಗಟ್ಟಲೆ ಮುಚ್ಚಿ ಹೋಗಿರುವ ಸಂದರ್ಭವೂ ಇದೆ.

ಇದನ್ನೆಲ್ಲಾ ಇಲಾಖೆಯ ಗಮನಕ್ಕೆ ತನ್ನಿ ಎಂದು ತಾವು ಹೇಳಬಹುದು; ಆದರೆ ನಾನು ನೂರಾರು ಸಲ ಇದನ್ನು ಅವರ ಗಮನಕ್ಕೆ ತಂದಿದ್ದೇನೆ. ಸ್ಥಳೀಯ ಎ.ಇ.ಒ. ಅವರ ಗಮನಕ್ಕೆ ತಂದಿದ್ದೇನೆ; ಸರ್ಕಾರದ ಗಮನಕ್ಕೆ ತಂದಿದ್ದೇನೆ ಮತ್ತು ಡಿ.ಡಿ.ಪಿ.ಐ. ಅವರಿಗೆ ನಾಲ್ಕಾರು ಸಲ ಫೋನ್ ಮಾಡಿ ಹೇಳಿದ್ದೇನೆ. ಆದರೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರದವರು ಮಾರ್ಚಿ ತಿಂಗಳಲ್ಲಿ ಡಿಸ್ಟ್ರಿಕ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಯನ್ನು ರಚನೆ ಮಾಡಿದ್ದಾರೆ. ಆದರೆ ಅದರ ಕೆಲಸಕಾರ್ಯಗಳ ಬಗ್ಗೆ ಸರ್ಕಾರದಿಂದ ಸರಿಯಾದ ನಿರ್ದೇಶನ ಬಂದಿಲ್ಲವೆಂದು ಡಿ.ಡಿ.ಪಿ.ಐ. ನವರು ಹೇಳುತ್ತಾರೆ. ಈಗ ಅರ್ಜಿಗಳನ್ನು ಹಾಕಿಕೊಂಡಿರುವವರಿಗೇ ಇಂಟರ್‌ವ್ಯೂ ಕಳುಹಿಸಬೇಕೇ ಅಥವಾ ಹೊಸದಾಗಿ ಅರ್ಜಿಗಳನ್ನು ಕರೆಯಬೇಕೆ ಎಂಬ ಬಗ್ಗೆ ಡಿ.ಪಿ.ಐ. ನವರಿಂದ ನಿರ್ದೇಶನ ಬಂದಿಲ್ಲವೆಂದು ಅವರು ಹೇಳುತ್ತಿದ್ದಾರೆ. ಇಂತಹ ಸಣ್ಣ ವಿಷಯದಲ್ಲಿ ಸರ್ಕಾರ ಸಕಾಲದಲ್ಲಿ ಸೂಕ್ತ ಕ್ರಮ ಕೈಗೊಳ್ಳದಿರುವುದನ್ನು ನೋಡಿದರೆ ಸರ್ಕಾರಕ್ಕೆ ಇದರ ಬಗ್ಗೆ ನಿಜವಾಗಿಯೂ ಆಸಕ್ತಿ ಇದೆಯೋ ಎಂದು ಕೇಳಬೇಕಾಗಿದೆ? ಮಕ್ಕಳ ವಿದ್ಯಾಭ್ಯಾಸ ಸರಿಯಾಗಿ ನಡೆಯಬೇಕಾದರೆ ಈ ಕೆಲಸ ಮೊದಲು ಆಗಬೇಕು. ೬ ತಿಂಗಳಲ್ಲಿ ಮಾಡುವ ಕೆಲಸವನ್ನು ೬ ದಿವಸಗಳಲ್ಲಿ ಮಾಡಿ, ೬ ದಿವಸಗಳಲ್ಲಿ ಮಾಡುವ ೬ ಗಂಟೆಗಳಲ್ಲಿ ಮಾಡಿ, ೬ ಗಂಟೆಗಳಲ್ಲಿ ಮಾಡುವ ಕೆಲಸವನ್ನು ೬ ನಿಮಿಷಗಳಲ್ಲಿ ಮಾಡಿ ತಮ್ಮ ಒಂದು ದಕ್ಷತೆಯನ್ನು ತೋರಿಸಬೇಕೇ ಹೊರತು, ಇಷ್ಟೊಂದು ನಿಧಾನ ಮಾಡುವುದು ಸರಿಯಲ್ಲ. ಈ ಕಮಿಟಿಗಳಲ್ಲಿ ಕೆಲಸ ಮಾಡಲು ಬೇಕಾದರೆ ನಿಮ್ಮ ಪಕ್ಷದವರನ್ನೇ ಹಾಕಿ; ನಮ್ಮನ್ನು ಹಾಕಿ ಎಂದು ನಾವೇನೂ ನಿಮ್ಮಲ್ಲಿ ಭಿಕ್ಷೆ ಬೇಡುವುದಿಲ್ಲ. ಇದರ ಬಗ್ಗೆ ಸಕಾಲದಲ್ಲಿ ಏಕೆ ಕ್ರಮ ಕೈಕೊಳ್ಳಲಿಲ್ಲವೆಂಬ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ನಿರ್ದಿಷ್ಟವಾಗಿ ಹೇಳಬೇಕು. ಏಕೆಂದರೆ ಉಪಾಧ್ಯಾಯರುಗಳು ಇಲ್ಲದೆ ಶಾಲೆಗಳು ಏನಾದರು ಮುಚ್ಚಿದರೆ ಅದರ ಒಂದು ಶಾಪಕ್ಕೆ ತಾವು ಹೊಣೆಯಾಗಬೇಕಾಗುತ್ತದೆಂಬ ಮಾತನ್ನು ನಾನು ವಿಷಾದದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಶಾಲಾ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರದವರು ಕೊಡತಕ್ಕಂಥ ನಾಲ್ಕೂವರೆ ಸಾವಿರ ರೂ. ಗಳು ಯಾವುದಕ್ಕೂ ಸಾಲುವುದಿಲ್ಲವೆಂಬ ಮಾತನ್ನು ಹಿಂದಿನ ಸಲವೇ ಎರಡು ಕಡೆಯ ಸದಸ್ಯರು ಹೇಳಿದ್ದಾರೆ. ಇವೊತ್ತಿನ ದಿವಸ ಆರ್.ಸಿ.ಸಿ. ಕಟ್ಟಡವನ್ನು ಕಟ್ಟಬೇಕಾದರೆ ಹತ್ತರಿಂದ ಹನ್ನೊಂದು ಸಾವಿರ ರೂ. ಗಳು ಬೇಕಾಗುತ್ತದೆ. ಆರ್ಥಿಕವಾಗಿ ಮುಂದುವರೆದಿರುವ ಜನರು ಇರುವ ಕಡೆಗಳಲ್ಲಿ ಜನರ ಸಹಾಯದಿಂದ ಒಂದೆರಡು ರೂಮುಗಳನ್ನು ಕಟ್ಟಿಸಲು ಸಾಧ್ಯವಾಗಬಹುದು; ಆದರೆ ಆರ್ಥಿಕವಾಗಿ ಹಿಂದುಳಿದಿರತಕ್ಕಂಥ ಜನರಿರುವ ಕಡೆಗಳಲ್ಲಿ ಇಷ್ಟೊಂದು ಕಡಿಮೆ ಹಣದಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸಲು ಸಾಧ್ಯವಿಲ್ಲದ ಕಾರಣ ಇದನ್ನು ಹೆಚ್ಚು ಮಾಡಬೇಕೆಂದು ಕಳೆದ ಸಲ ನಾವು ಕೇಳಿದಾಗ ತಾವು ಒಪ್ಪಲಿಲ್ಲ. ಹಣದ ಕೊರತೆ ಇದೆ ಎಂದು ಹೇಳಿದಿರಿ. ಈಗ ೨೦ ಅಡಿ ಮತ್ತು ೧೫ ಅಡಿ ಇರತಕ್ಕಂಥ ಶಾಲಾ ಕೊಠಡಿಯನ್ನು ಸರ್ಕಾರದ ಒಂದು ಸ್ಪೆಸಿಫಿಕೇಷನ್ ಪ್ರಕಾರ ಕಟ್ಟಬೇಕಾದರೆ ಹನ್ನೊಂದು ಸಾವಿರ ರೂ. ಗಳು ಬೇಕಾಗುತ್ತದೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ವೈಯಕ್ತಿಕವಾಗಿ ಮತ್ತು ಬಹಿರಂಗವಾಗಿ ಏನು ಹೇಳಿದ್ದಾರೆ,

ಅದನ್ನು ನಾನು ಮೆಚ್ಚಿದ್ದೇನೆ. ಅವರು ಏನು ಹೇಳಿದ್ದಾರೆಂದರೆ ಹಳ್ಳಿಯ ಜನರು ಹನ್ನೊಂದು ಸಾವಿರ ರೂ.ಗಳಷ್ಟು ವಂತಿಗೆ ಹಾಕಿಕೊಂಡು ಈ ಕೆಲಸ ಮಾಡುವುದು ಕಷ್ಟವಿದೆ ಎಂಬುದು ನನಗೂ ಗೊತ್ತಿದೆ, ಏಕೆಂದರೆ ನಾನು ಸಹ ಹಳ್ಳಿಯಲ್ಲಿ ಹುಟ್ಟಿ ಬೆಳೆದವನು: ಆದ ಕಾರಣ ಸ್ಥಳೀಯವಾಗಿ ಸಿಗತಕ್ಕಂಥ ಮರ ಮುಟ್ಟುಗಳು ಹಾಗೂ ಇತರೇ ಸಾಮಾನುಗಳನ್ನು ಉಪಯೋಗಿಸಿಕೊಂಡು ಸ್ಥಳೀಯ ಜನರ ಮುಂದೆ ನಿಂತು ಶಾಲಾ ಕಟ್ಟಡವನ್ನು ಕಟ್ಟಿಸಿದರೆ ನನಗೆ ಸಂತೋಷ ಎಂದು ಹೇಳಿದ್ದಾರೆ. ಆದ ಕಾರಣ ಈ ಬಗ್ಗೆ ಮಾನ್ಯ ವಿದ್ಯಾಮಂತ್ರಿಗಳು ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ನಡೆಸಿ, ಅವರು ಹೇಳಿದಂತೆ ಮಾಡಿ ಎಂದು ಒಂದು ಆದೇಶವನ್ನು ಹೊರಡಿಸಬೇಕು. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಿದ್ದರೆ, ತಾವು ಆ ರೀತಿ ಹೇಳಿದ್ದು ನಿಜ ಎಂದು ಹೇಳುತ್ತಿದ್ದರು. ಆದಕಾರಣ ಈ ಬಗ್ಗೆ ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಸರ್ಕ್ಯುಲರ್ ರೂಪದಲ್ಲಿ ತಿಳಿಸಬೇಕು. ಇಲ್ಲದಿದ್ದರೆ ಅವರು ಯಾವ ಕ್ರಮವನ್ನೂ ಕೈಗೊಳ್ಳುವುದಿಲ್ಲ, ಸರ್ಕಾರದ ಸರ್ಕ್ಯುಲರ್ ಇಲ್ಲದೆ ಕ್ರಮ ತೆಗೆದುಕೊಂಡರೆ ಮುಂದೆ ಆಡಿಟ್ ಆಬ್ಜಕ್ಷನ್ ಆಗುತ್ತದೆ, ಮೇಲಿನ ಅಧಿಕಾರಿಗಳು ಪ್ರಶ್ನೆ ಮಾಡುತ್ತಾರೆಂದು ಕೆಳಗಿನ ಅಧಿಕಾರಿಗಳು ಹೇಳುತ್ತಾರೆ. ಆದ ಕಾರಣ ಈ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾದ ಆದೇಶ ಹೊರಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಮಕ್ಕಳು ಶಾಲೆಗಳಲ್ಲಿ ಕೂತುಕೊಳ್ಳಲು ಮಣೆ ಮತ್ತು ಬೆಂಚುಗಳನ್ನು ಒದಗಿಸಲು ಕಳೆದ ವರ್ಷ ೬ ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದೀರಿ. ಇಷ್ಟೊಂದು ಶಾಲೆಗಳಿಗೆ ೬ ಲಕ್ಷ ರೂ. ಗಳು ಸಾಕೇ ಎಂದು ನಾವೇನಾದರು ಕೇಳಿದರೆ, ಬೆಟರ್‌ಮೆಂಟ್ ಕಮಿಟಿ ಮೂಲಕ ಇಷ್ಟೊಂದು ಲಕ್ಷ ರೂ, ಗಳ ನೆರವು ಬಂದಿದೆ ಎಂದು ತಾವು ಹೇಳುತ್ತೀರಿ. ಆದರೂ ೬ ಲಕ್ಷ ರೂ. ಗಳು ಬಹಳ ಕಡಿಮೆಯಾಯಿತು. ೬೦ ಲಕ್ಷ ರೂ. ಗಳನ್ನಾದರೂ ತಾವು ಖರ್ಚು ಮಾಡಬೇಕು. ಇದರ ಜೊತೆಗೆ ಗುರುಗಳು ಕುಳಿತುಕೊಳ್ಳಲು ಕುರ್ಚಿಗಳನ್ನು ಒದಗಿಸಬೇಕು. ಅದು ಸಾಧ್ಯವಾಗದಿದ್ದರೆ ಸ್ಟೂಲುಗಳನ್ನಾದರೂ ಒದಗಿಸಬೇಕು. ಏಕೆಂದರೆ ಗುರುಪೀಠ ಸ್ವಲ್ಪ ಎತ್ತರದಲ್ಲಿರಬೇಕಾಗುತ್ತದೆ. ಮಕ್ಕಳು ಮತ್ತು ಉಪಾಧ್ಯಾಯರು ಒಂದೇ ಅಂತರದಲ್ಲಿ ಕುಳಿತುಕೊಳ್ಳುವುದು ಸರಿಯಲ್ಲ, ಆದರೂ ಇಂತಹ ಶಾಲೆಗಳು ನಮ್ಮ ರಾಜ್ಯದಲ್ಲಿ ಅದರಲ್ಲಿಯೂ ನಮ್ಮ ತಾಲ್ಲೂಕಿನಲ್ಲಿ ಕೆಲವು ಇವೆ. ಇದು ಸರಿಯಲ್ಲ, ಇಂತಹ ಶಾಲೆಗಳಿಗೆ ಕುರ್ಚಿ ಮತ್ತು ಟೇಬಲ್‌ಗಳನ್ನು ಮತ್ತು ಮಕ್ಕಳಿಗೆ ಕುಳಿತುಕೊಳ್ಳಲು ಮಣೆಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮಿಡ್ಡೇ ಮೀಲ್ ವ್ಯವಸ್ಥೆ ಅಷ್ಟೊಂದು ಚೆನ್ನಾಗಿ ನಡೆದಿಲ್ಲ. ನನ್ನ ಕ್ಷೇತ್ರಕ್ಕೆ ಬಂದರೆ ತೋರಿಸುತ್ತೇನೆ. ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಲ್ಲಿ ಪಿತೃ ಪಕ್ಷ ಎಂದು ಆಚರಣೆ ಮಾಡುತ್ತಾರೆ. ಆ ಸಮಯದಲ್ಲಿ ನಾನು ನನ್ನ ಕ್ಷೇತ್ರಕ್ಕೆ ಸೇರಿದ ಒಂದು ಊರಿಗೆ ಹೋದಾಗ. ಅಲ್ಲಿಯ ಒಬ್ಬ ಮನುಷ್ಯನನ್ನು ಈ ವಡೆ ಮತ್ತು ಕಜ್ಜಾಯ ಮಾಡಲು ಎಣ್ಣೆ ಮತ್ತು ರವೆಗೆ ಏನು ಮಾಡಿದೆ ಎಂದು ಕೇಳಿದಾಗ, ಅತ ಉಪಾಧ್ಯಾಯರ ಕಡೆಯಿಂದ ಕಡಿಮೆ ಬೆಲೆಗೆ ರವೆ ಮತ್ತು ಎಣ್ಣೆಯನ್ನು ತೆಗೆದುಕೊಂಡು ಬಂದೆ ಎಂದು ಹೇಳಿದ. ಕೂಡಲೇ ನಾನು ಈ ವಿಷಯವನ್ನು ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದೆ. ಇಂತಹ ಪ್ರಕರಣ ಅನೇಕ ಕಡೆಗಳಲ್ಲಿ ನಡೆಯುತ್ತಿದೆ. ತಾವೇನೋ ಇಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಹಚ್ಚಿದ್ದೇವೆಂದು ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಆದರೆ ಅದೆಲ್ಲಾ ಸರಿಯಾಗಿ ಮಕ್ಕಳಿಗೆ ಮುಟ್ಟುತ್ತಿಲ್ಲ. ಮಕ್ಕಳಿಗೆ ಎಂದು ಕೊಟ್ಟ ಆಹಾರ ಪದಾರ್ಥವನ್ನು ಯಾರಾದರು ದುರುಪಯೋಗ ಪಡಿಸಿಕೊಂಡರೆ, ಮಕ್ಕಳಿಗೆ ದ್ರೋಹ ಮಾಡಿದರೆ, ಅಂತಹವರು ಯಾರೂ ಬದುಕುವುದಿಲ್ಲ ಮತ್ತು ಉಳಿಯುವುದಿಲ್ಲವೆಂದು ನಾನು ಖಚಿತವಾಗಿ ಹೇಳುತ್ತೇನೆ. ಇಲ್ಲಿ ಬಡ ಮಕ್ಕಳಿಗೆಂದು ಕೊಟ್ಟ ಆಹಾರ ಪದಾರ್ಥವನ್ನು ವಡೆ, ಕಜ್ಜಾಯ ಮಾಡಲು ಉಪಯೋಗ ಮಾಡುವುದಾದರೆ, ಈ ಶಿಕ್ಷಣ ಇಲಾಖೆಯ ಆಡಳಿತದ ದಕ್ಷತೆ ಯಾವ ರೀತಿ ಇದೆ ಎಂಬುದನ್ನು ತೋರಿಸುತ್ತದೆ, ನಾನು ಹೇಳಿದ್ದು ಕಟ್ಟು ಕಥೆ ಅಲ್ಲ; ಹತ್ತಾರು ಗ್ರಾಮಗಳಲ್ಲಿ ಈ ರೀತಿ ನಡೆದಿದೆ. ಕೆಲವರು ಇದನ್ನೇ ಒಂದು ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಇದನ್ನು ಮೊದಲು ತಡೆಗಟ್ಟಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಇನ್ಸ್‌ಪೆಕ್ಷನ್ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಹೇಳಬೇಕೆಂದರೆ, ನನ್ನ ತಾಲ್ಲೂಕಿನಲ್ಲಿ ೫ ಹೋಬಳಿಗಳಿವೆ. ನಾಲ್ಕು ಜನ ಇನ್ಸ್‌ಪೆಕ್ಟರ್ಸ್ ಇದ್ದಾರೆ. ಕೆಲವರು ಅಲ್ಲಿ ೩ ವರ್ಷಗಳಿಂದ ಇದ್ದಾರೆ. ಮಲ್ಲೇನಹಳ್ಳಿ ಗ್ರಾಮಕ್ಕೆ ಹೋಗಿ ಅಲ್ಲಿಯ ಶಾಲೆಯನ್ನು ಕಳೆದ ಮೂರು ವರ್ಷಗಳಿಂದ ಇನ್ಸ್‌ಪೆಕ್ಷನ್ ಮಾಡಿಲ್ಲ. ಇನ್ನು ಇವರು ಯಾವ ರೀತಿ ಇನ್ಸ್‌ಪೆಕ್ಷನ್ ಮಾಡುತ್ತಾರೆಂಬುದನ್ನು ತಾವೇ ತಿಳಿದು ಕೊಳ್ಳಬಹುದು. ಸಂಬಳ ತೆಗೆದುಕೊಳ್ಳುವ ದಿವಸ ಇವರೆಲ್ಲರೂ ಒಂದು ಕಡೆ ಸೇರುತ್ತಾರೆ. ಆದರೆ ಇನ್ಸ್‌ಪೆಕ್ಷನ್

ಸರಿಯಾಗಿ ಮಾಡುವುದಿಲ್ಲ. ತಾವು ಅಧಿಕಾರ ವಿಕೇಂದ್ರೀಕರಣ ಮಾಡಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ತಾಲ್ಲೂಕ್ ಮಟ್ಟದಲ್ಲಿ ಎ.ಇ.ಒ. ಅವರು ಇದ್ದಾರೆ. ಜಿಲ್ಲಾ ಮಟ್ಟದಲ್ಲಿ ಡಿ.ಡಿ.ಪಿ.ಐ. ಅವರಿದ್ದಾರೆ; ಆದರೆ ಇವರಿಗೆಲ್ಲಾ ವಾಹನಗಳನ್ನು ಕೊಟ್ಟು ಹಳ್ಳಿಗಳಲ್ಲಿರುವ ಶಾಲೆಗಳನ್ನು ಎಫೆಕ್ಟೀವ್ ಆಗಿ ಸೂಪರ್‌ವಿಜನ್ ಮಾಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

೪-೩೦ ಪಿ. ಎಂ.

ಸ್ವಾಮಿ ಏನು ಈ ಒಂದು ಹೈಸ್ಕೂಲು ಶಿಕ್ಷಣದ ವಿಷಯದಲ್ಲಿ ಹೇಳುವುದಾದರೆ ಕಳೆದ ವರ್ಷ ೩೭ ಶಾಲೆಗಳನ್ನು ಸರ್ಕಾರದ ವತಿಯಿಂದ ಪ್ರಾರಂಭ ಮಾಡಿದರು. ಈ ವರ್ಷ ಎಷ್ಟು ಮಾಡುತ್ತಾರೆಂದು ಹೇಳಲಿಲ್ಲ. ವೈಯುಕ್ತಿಕವಾಗಿ ಮಂತ್ರಿಗಳ ಜೊತೆಯಲ್ಲಿ ನಾನು ಒಂದೆರಡು ಮಾತುಗಳನ್ನು ಮಾತನಾಡಿದ್ದೇನೆ. ಹೈಸ್ಕೂಲುಗಳನ್ನು ಪ್ರಾರಂಭ ಮಾಡತಕ್ಕ ಕಾಲದಲ್ಲಿ ಯಾವ ಪ್ರದೇಶ ಆರ್ಥಿಕ ಪರಿಸ್ಥಿತಿಯಲ್ಲಿ ಹಿಂದುಳಿದಿದೆಯೋ ಅಲ್ಲಿ ಶಾಲೆಗಳನ್ನು ಸ್ಥಾಪನೆ ಮಾಡಬೇಕು. ಯಾರು ಶಾಲೆಗಳನ್ನು ನಡೆಸುವುದಕ್ಕೆ ಕಟ್ಟಡವನ್ನು ಕೊಡುತ್ತಾರೋ ಅಂಥವರಿಗೆ ಆ ಊರಿನಲ್ಲಿ ಶಾಲೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ನನ್ನ ಊರಿಗೆ ಎರಡು ಮೈಲಿ ದೂರದಲ್ಲಿ ಒಂದು ಹಾಗೂ ಮೂರು ಮೈಲಿ ದೂರದಲ್ಲಿ ಒಂದೊಂದು ಹೈಸ್ಕೂಲುಗಳಿವೆ. ನಮ್ಮ ಊರಿನಲ್ಲಿ ಸರ್ಕಾರದವರು ಒಂದು ಹೈಸ್ಕೂಲನ್ನು ಸ್ಥಾಪನೆ ಮಾಡುವುದಾದರೆ ಅಲ್ಲಿ ಶಾಲೆಯ ಕಟ್ಟಡ ಕಟ್ಟುವುದಕ್ಕೆ ಒಂದು ಲಕ್ಷ ರೂಪಾಯಿಯನ್ನು ಬೇಕಾದರೂ ಕೊಡುತ್ತೇನೆ. ಹಾಗಾದರೆ ನಮ್ಮ ಊರಿಗೆ ಸರ್ಕಾರಿ ಹೈಸ್ಕೂಲನ್ನು ಸ್ಥಾಪನೆ ಮಾಡುತ್ತಾರೆಯೆ ? ಇಂತಹ ಕಡೆ ಹೈಸ್ಕೂಲುಗಳನ್ನು ಕಟ್ಟಿದರೆ ಏನು ಪ್ರಯೋಜನ. ಆರ್ಥಿಕವಾಗಿ ಹಿಂದುಳಿದಿರತಕ್ಕವರು ಮುಂದೆ ಬರಬೇಕು ಎನ್ನುವ ದೃಷ್ಟಿ ಸರ್ಕಾರಕ್ಕೆ ಬರಬೇಕಾದರೆ ಅಲ್ಲಿ ಅವರು ಕಟ್ಟಡವನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲದಿದ್ದರೆ ಸರ್ಕಾರದವರೇ ಕಟ್ಟಡವನ್ನು ಕಟ್ಟಿಸಿ ಅಲ್ಲಿಗೆ ಶಾಲೆಯನ್ನು ಮಂಜೂರು ಮಾಡಿಕೊಡಬೇಕು. ಈ ದೃಷ್ಟಿಯಿಂದ ನನ್ನ ಕ್ಷೇತ್ರದಲ್ಲಿ ಆರ್ಥಿಕವಾಗಿ ಹಿಂದುಳಿದಿರತಕ್ಕ ಜಿ. ಮಲ್ಲಿಗೆರೆ ಎಂಬ ಊರಿಗೆ ಒಂದು ಸರ್ಕಾರಿ ಹೈಸ್ಕೂಲನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ಆ ಊರು ಮಂಡ್ಯಕ್ಕೆ ೧೮ ಮೈಲಿ ದೂರದಲ್ಲಿದೆ ಆದಕಾರಣ ಈ ಊರಿಗೆ ಹೈಸ್ಕೂಲಿಗೆ ಕೊಡುವುದಾದರೆ ಸುಮಾರು ೧೦-೧೨ ಗ್ರಾಮಗಳಿಗೆ ಈ ಒಂದು ಹೈಸ್ಕೂಲು ಸೌಲಭ್ಯ ಸಿಕ್ಕುತ್ತದೆ. ಇದನ್ನು ತಾವು ಪರಿಶೀಲನೆ ಮಾಡಬೇಕು. ಇನ್ನು ಮಂಡ್ಯದಲ್ಲಿ ಹೆಣ್ಣುಮಕ್ಕಳ ಕಾಲೇಜನ್ನು ಕಟ್ಟಿಸುವುದಕ್ಕೆ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಪ್ರಾರಂಭ ಮಾಡಿದ್ದಾರೆ. ಅದರ ಅಂದಾಜು ವೆಚ್ಚ ೫೨ ಲಕ್ಷ ರೂಪಾಯಿ ಎಂದು ಇದೆ. ಆದರೆ ಈ ವರ್ಷ ಆ ಕಟ್ಟಡಕ್ಕೆ ಸರ್ಕಾರದವರು ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಹಣ ಕೇವಲ ೮೦ ಸಾವಿರ ರೂಪಾಯಿ . ಆ ಕಟ್ಟಡದ ಅಂದಾಜು ವೆಚ್ಚ ೫೨ ಲಕ್ಷವೋ ಅಥವಾ ೨೫ ಲಕ್ಷವೋ ಎನ್ನುವ ವಾದವಿವಾದವೂ ಇದೆ; ಹೀಗಿರುವಾಗ ಈ ಕಟ್ಟಡಕ್ಕೆ ಈ ವರ್ಷ ೮೦ ಸಾವಿರ ರೂಪಾಯಿಯನ್ನು ಒದಗಿಸಿದ್ದಾರೆ. ಈ ಒಂದು ಪ್ರಮಾಣದಲ್ಲಿ ಅದಕ್ಕೆ ಹಣವನ್ನು ಒದಗಿಸುತ್ತಾ ಹೋದರೆ ೨೫ ಲಕ್ಷ ರೂಪಾಯಿಗಳನ್ನು ಒದಗಿಸುವುದಕ್ಕೆ ಎಷ್ಟು ವರ್ಷ ಬೇಕಾಗುತ್ತದೆ. ೨೫ ವರ್ಷ ಬೇಕಾಗುತ್ತದೇನೋ ಗೊತ್ತಿಲ್ಲ ಅದೇ ರೀತಿ ಈ ಹೆಣ್ಣು ಮಕ್ಕಳ ಹಾಸ್ಟೆಲಿಗೆ ೧೬ ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಅದರ ಅಂದಾಜು ವೆಚ್ಚ ೭೦-೭೪ ಲಕ್ಷ ರೂಪಾಯಿ. ಆ ಹಣವನ್ನು ಒದಗಿಸಬೇಕಾದರೆ ಎಷ್ಟು ವರ್ಷ ಬೇಕಾಗುತ್ತದೋ ಗೊತ್ತಿಲ್ಲ. ಆದ್ದರಿಂದ ಯೋಜನೆಗಳನ್ನು ಹಾಕುವಾಗ ಸ್ವಲ್ಪ ದೀರ್ಘವಾಗಿ ಯೋಚನೆ ಮಾಡಿ ಯೋಜನೆಗಳನ್ನು ಹಾಕಬೇಕು. ಆ ರೀತಿ ಮಾಡದೇ ಹೋದರೆ ಯಾರಿಗೆ ಅವರ ಪ್ರಯೋಜನ ತಲುಪಬೇಕೋ ಅದು ಸಕಾಲದಲ್ಲಿ ಸರಿಯಾದ ರೀತಿಯಲ್ಲಿ ತಲುಪುವದಕ್ಕೆ ಆಗುವುದಿಲ್ಲ. ಒಂದು ವೇಳೆ ಸಕಾಲದಲ್ಲಿ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಆಗದಿದ್ದರೆ ಯೂನಿವರ್ಸಿಟಿಯವರು ಡೀಅಫಿಲಿಯೇಷನ್ ಮಾಡುವುದಕ್ಕೆ ಅವಕಾಶವಿದೆ. ಒಂದೆರಡು ಕಡೆ ಆ ರೀತಿ ಮಾಡಿದ್ದಾರೆ. ಆ ರೀತಿ ಒಂದು ಅವಕಾಶ ಕೊಡದೇ ಈ ಒಂದು ಶಿಕ್ಷಣ ಇಲಾಖೆ ಏನಿದೆ ಇದು ಹೆಚ್ಚು ಅಭಿವೃದ್ಧಿ ಕೆಲಸ ಮಾಡುವುದಕ್ಕೆ ಮಂತ್ರಿಗಳು ಅವಕಾಶ ಮಾಡಿಕೊಳ್ಳಬೇಕು. ಕಳೆದ ವರ್ಷ ಏನು ಲೋಪದೋಷಗಳಾಗಿವೆ ಅದನ್ನು ಈ ವರ್ಷ ಎತ್ತಿ ಹಿಡಿದಿದ್ದೇನೆ. ಅವು ಆರೋಗ್ಯಕರವಾದ ಟೀಕೆ ಎನ್ನತಕ್ಕ ರೀತಿಯಲ್ಲಿ ಮಂತ್ರಿಗಳು ಅದನ್ನು ಗಮನಕ್ಕೆ ತೆಗೆದುಕೊಂಡು ಮುಂದೆ ಅಂಥ ಟೀಕೆಗಳಿಗೆ ಅವಕಾಶ ಕೊಡಬಾರದು ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ವಿ. ನಾಯಕ್ (ಕುಮಟ) — ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು ಸುಮಾರು ೧೪೯ ಕೋಟಿ ರೂಪಾಯಿಗಳ ಶಿಕ್ಷಣ ಇಲಾಖೆಯ ಬೇಡಿಕೆಗೆ ನನ್ನ ಬೆಂಬಲವನ್ನು ಸೂಚಿಸುತ್ತಾ ಬೃಹತ್ ಮತ್ತು ಮಹತ್ವ ಎರಡರಲ್ಲಿಯೂ ದಿಟ್ಟ ಹೆಜ್ಜೆಯನ್ನು ಇಟ್ಟಿರುವ ಶಿಕ್ಷಣ ಇಲಾಖೆಯ ಶಿಕ್ಷಣದ ಮೂಲ ಭೂತ ತತ್ವದ ತಳಹದಿಯನ್ನು ಭದ ಪಡಿಸುತ್ತದೆ. ದೈಹಿಕ, ಮಾನಸಿಕ, ತಾತ್ವಿಕ ಮತ್ತು ಭಾವನಾತ್ಮಕ ಬೆಳವಣಿಗೆ ಏನಿದೆ ಅದನ್ನು ಮಕ್ಕಳಲ್ಲಿ ದೊರಕಿಸುವುದಕ್ಕೆ ಹಾಗೂ ಅವರಲ್ಲಿ ಒಳ್ಳೆಯ ಚಾರಿತ್ರ್ಯ ಮತ್ತು ಚಾತುರ್ಯವನ್ನು ದೊರಕಿಸುವುದಕ್ಕೆ ಶಿಕ್ಷಣ ಸಹಕಾರಿಯಾಗಬೇಕು. ಆದರೂ ಕೂಡ ಒಂದು ಶೋಚನೀಯವಾದ ಸಂಗತಿ ಏನೆಂದರೆ ನಮಗೆ ಸ್ವಾತಂತ್ರ್ಯ ಬಂದು ೩೨ ವರ್ಷಗಳು ಕಳೆದರೂ ಕೂಡ ನಮ್ಮ ಶಿಕ್ಷಣ ಪದ್ಧತಿ ಬ್ರಿಟಿಷರ ಕಾರ್ಬನ್ ಕಾಪಿಯಾಗಿದೆ ಎಂದು ವಿಷಾಧದಿಂದ ಹೇಳಬೇಕಾಗಿದೆ. ಇಷ್ಟೇ ಅಲ್ಲ ಹಲವಾರು ಶಿಕ್ಷಣ ತಜ್ಞರು ಶಿಕ್ಷಣ ಸೂತ್ರವನ್ನು ತಮ್ಮ ವರದಿಯ ಮೂಲಕ ನಿರೂಪಿಸಿದ್ದಾರೆ ಈ ಸಮಾಜ ಮುಂದೆ ಇಟ್ಟಿದ್ದಾರೆ. ಉದಾಹರಣೆಗೆ ಡಾ|| ರಾಧಾಕೃಷ್ಣನ್ ರೀಪೋರ್ಟ್ ಮೊದಲಿಯಾರ್ ಕಮಿಷನ್ ರಿಪೋರ್ಟ್, ಕೊಠಾರಿ ಕಮಿಷನ್ ರಿಪೋರ್ಟ್, ನಮ್ಮ ರಾಜ್ಯದಲ್ಲಿ ತಯಾರಿಸಿರುವ ರಿಪೋರ್ಟ್‌ಗಳ ಬಗ್ಗೆ ಹೇಳುವುದಾದರೆ ಶ್ರೀಮಾನ್ ಎ. ಸಿ. ದೇವೇಗೌಡರು, ಜೆ.ಬಿ. ಮಲ್ಲಾರಾಧ್ಯರ ರಿಪೋರ್ಟ್ ಶ್ರಿ ಮಾನ್ಯ ಬದರೀನಾರಾಯಣ್ ಅವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಈ ಎಲ್ಲಾ ರಿಪೋರ್ಟ್‌ಗಳು ಬಂದವು. ಅವೆಲ್ಲವೂ ಕೋಲ್ಡ್ ಸ್ಟೋರೇಜ್‌ನಲ್ಲಿ ಇವೆ. ಈ ವರದಿಗಳು ಬಹಳ ಗಂಭೀರವಾದುವುಗಳು ಎಂದು ಭಾವಿಸಿ ಈ ವರದಿಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಮಾಡಿದೆಯೆ ? ಎಂಬುದು ಬಹಳ ಮಹತ್ವವಾದ ಸಂಗತಿ. ಮಾನ್ಯ ಸದಸ್ಯರಾದ ಶ್ರೀಮಾನ್ ಮಳ್ಳೂರು ಆನಂದರಾಯರು ಮಾತನಾಡುತ್ತಾ ಶಿಕ್ಷಣ ಸಂಸ್ಥೆಯಲ್ಲಿ ನಡೆಯತಕ್ಕ ವಿಚಾರಗಳನ್ನು ಬಹಳ ಕೂಲಂಕಷವಾಗಿ ಪ್ರಸ್ತಾಪಮಾಡಿದ್ದಾರೆ. ಮತ್ತು ಪ್ರಾಮಾಣಿಕವಾಗಿ ಶಿಕ್ಷಣವನ್ನು ನೀಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಈ ಶಿಕ್ಷಣ ಸಂಸ್ಥೆಗಳನ್ನು ಮೂರು ವರ್ಗಗಳಾಗಿ ವಿಂಗಡಣೆ ಮಾಡಿದ್ದಾರೆ. ಪ್ರಾಮಾಣಿಕವಾಗಿ ಶಿಕ್ಷಣವನ್ನು ಕೊಡತಕ್ಕಂತಹ ಸಂಸ್ಥೆಗಳು ಮೊದಲನೇ ವರ್ಗ ಮಾಡಿದರು. ಆರ್.ಎಸ್.ಎಸ್. ಸೋಸಿಯಾಲಿಸ್ಟಿಕ್ ಸಂಬಂಧಪಟ್ಟ ಶಾಲೆಗಳನ್ನು ಎರಡನೇ ವರ್ಗ ಮಾಡಿದರು. ಮೂರನೇ ವರ್ಗ ಮಾಲೀಕರ ಒಡೆತನಕ್ಕೆ ಸೇರಿದ ಕಳ್ಳರ, ದರೋಡೆಕಾರರ ಖಾಸಗೀ ಕಾಲೇಜುಗಳು ಮತ್ತು ಶಾಲೆಗಳು ಎಂದು ಹೇಳಿದರು. ಅದಕ್ಕೆ ನಾನು ನನ್ನ ಧ್ವನಿಗೂಡಿಸುತ್ತಾ ಹೇಳುವುದಾದರೆ ಇದಕ್ಕಿಂತ ಹೆಚ್ಚು ಅನಿಷ್ಟ ಪರಂಪರೆಯನ್ನು ಹಾಕಿಕೊಂಡು ಬಂದಿರುವಂತಹ ಮತ್ತೊಂದು ವರ್ಗ ಇದೆ. ಅದನ್ನು ಮಳ್ಳೂರು ಆನಂದರಾವ್ ಅವರು ಹೇಳಲು ಮರೆತರು ಎಂದು ನಾನು ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ಸ್ವಾತಂತ್ರ್ಯನಂತರದಲ್ಲಿ ಈ ದೇಶದಲ್ಲಿ ಜಾತೀಯ ಧರ್ಮದ ಫಲಕವನ್ನು ಹೊತ್ತಂತ ಹಲವಾರು ಸಂಘ ಸಂಸ್ಥೆಗಳು ಸ್ವಾತಂತ್ರ್ಯೋತ್ತರದಲ್ಲಿ ತಮ್ಮ ನಾಮಫಲಕ ಏನಿತ್ತೋ ಅದನ್ನು ಬದಲಾವಣೆ ಮಾಡಿದರು. ಉದಾಹರಣೆಗೆ ಜಾತಿ ಅಥವಾ ಧರ್ಮದ ಮಾತನ್ನು ಹಾಯಿಸುವ ದೃಷ್ಟಿ ಹಲವಾರು ನಮ್ಮ ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕ ಲಿಂಗಾಯಿತ ಎಜುಕೇಷನ್ ಸೊಸೈಟಿ ಎಂದು ಇದ್ದುದನ್ನು ಸ್ವಾತಂತ್ರ್ಯೋತ್ತರದಲ್ಲಿ ಕರ್ನಾಟಕ ಲಿಬರಲ್ ಎಜುಕೇಷನ್ ಸೊಸೈಟಿ ಎಂದು ಮಾಡಿದ್ದರು. ಮಾನ್ಯ ಶಿಕ್ಷಣ ಸಚಿವರ ಜಿಲ್ಲೆಯಲ್ಲಿ ಒಂದು ಮಣಿಪಾಲ್ ಎಜುಕೇಷನ್ ಸೊಸೈಟಿ ಎನ್ನುವ ಒಂದು ಸೊಸೈಟಿ ಇತ್ತು. ಇವತ್ತು ಮಣಿಪಾಲದಲ್ಲಿ ಕೂಡ ಭವ್ಯ ಸೌಧವನ್ನು ಹೊಂದಿರತಕ್ಕ ಸಂಸ್ಥೆ ಇದು ಆಗಿದೆ. ಇದು ಮಾನ್ಯ ಶಿಕ್ಷಣ ಮಂತ್ರಿಗಳ ದೃಷ್ಟಿಯಿಂದ ಸ್ವಾಭಿಮಾನದ ದ್ಯೋತಕ ಎಂದು ಹೇಳಬಹುದು. ಈ ರೀತಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸ್ವಾಭಿಮಾನದ ದ್ಯೋತಕವಾಗಿ ಸ್ಥಾಪನೆಯಾಗಿರುವ ಸಂಸ್ಥೆಗಳು ಸಾಮಾಜಿಕ ನ್ಯಾಯವನ್ನು, ಸಮಾನತೆಯನ್ನು ಒದಗಿಸುವ ಶಿಕ್ಷಣ ಸಂಸ್ಥೆಗಳಾಗಿವೆಯೋ ಎಂದು ಪ್ರಶ್ನೆ ಮಾಡುತ್ತಿದ್ದೇನೆ. ಏಕೆಂದರೆ ಇಂಥ ಶಿಕ್ಷಣ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಅನೇಕ ಕಡೆ ನಾಯಿಕೊಡೆಯಹಾಗೆ ಹುಟ್ಟಿಕೊಂಡಿವೆ. ಇದರ ಜೊತೆಗೆ ಶೇಕಡ ೪೫-೫೦ ಮಕ್ಕಳಿಗೆ ಬೇಕಾದಂತಹ ವಿದ್ಯೆಯನ್ನು ತಮ್ಮ ಸ್ವಂತ ಬಲದಿಂದ ಹಣದ ಹಿನ್ನೆಲೆಯ ಪ್ರಭಾವದಿಂದ ಅಲ್ಲಿ ಪ್ರವೇಶವನ್ನು ಪಡೆಯುತ್ತಿದ್ದಾರೆ. ಇವತ್ತು ಮಧ್ಯಮವರ್ಗದವರು, ಬಡವರು ಶೋಷಣೆಗೆ ಒಳಗಾಗಿರುವಂತಹ ೮೫ ಪರ್ಸೆಂಟ್ ಜನ ಏನಿದ್ದಾರೆ ಇವರು ಸರ್ಕಾರಿ ಕಾಲೇಜಿನಲ್ಲಿ ಪ್ರವೇಶವು ದೊರೆಯದೇ ಇರುವಂತಹ ಸಂದರ್ಭದಲ್ಲಿ ಇವರು ಮನೆಯಲ್ಲಿ ಆಭರಣವನ್ನು ಒತ್ತೆ ಇಟ್ಟು ಮನೆಯನ್ನು ಒತ್ತೆ ಇಟ್ಟು ಜಮೀನನ್ನು ಒತ್ತೆ ಇಟ್ಟು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಅವರು ಅಲ್ಲಿ ೫೦ ಪರ್ಸೆಂಟ್ ಎಂ.ಬಿ.ಬಿ.ಎಸ್. ಪಾಸಾಗುತ್ತಾರೆ, ಬಾಕಿಯವರು ೫೦ ಪರ್ಸೆಂಟ್ ಪಾಸಾಗುತ್ತಾರೆ. ಅವರು ಸ್ಥಾನ ಬಲದಿಂದ, ಪ್ರಭಾವದಿಂದ ಪರದೇಶಗಳಿಗೆ ಹೋಗಿ ಶಿಕ್ಷಣ ಪಡೆದುಬಂದಿರುವುದರಿಂದ ಇವತ್ತು ಪ್ರಾಮಾ

ಣಕವಾಗಿ ಶಿಕ್ಷಣ ಪಡೆದಂಥ ಮಧ್ಯಮವರ್ಗದವರು, ಹಿಂದುಳಿದವರ್ಗದವರು, ಶೋಷಣೆಗೆ ಒಳಗಾದವರು ಮತ್ತೆ ಬೀದಿ ಪಾಲಾಗುವಂಥ ಪರಿಸ್ಥಿತಿ ಬಂದಿದೆ. ಇದು ಇವತ್ತು ಸಾಮಾಜಿಕ ನ್ಯಾಯವನ್ನು ದೂರ ಕಿಸಿಕೊಡುವುದಕ್ಕೆ ಹೋದಂಥ ಒಂದು ರೀತಿ. ಮಾನ್ಯ ಮಳ್ಳೂರು ಆನಂದರಾಯರು ಈಗ ಸಭೆಯಲ್ಲಿ ಇಲ್ಲ. ಅವರ ರೀತಿ, ಹಾವ, ಭಾವ ದ್ರೌಪದಿ ವಸ್ತ್ರಾಪಹರಣದಲ್ಲಿ ಕೀಚಕನಂತೆ ಇತ್ತು. ಇದನ್ನು ಹೇಳು ವಾಗ ಅಸಹಾಯಕರಾದ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತೇನೆ ಎಂದು ತಾವು ಭಾವಿಸಬಾರದು. ಅಸಹಾ ಯಕರಾದ ಅಧಿಕಾರಿಗಳು ತಮ್ಮನ್ನು ತಾವು ಸಮರ್ಥಿಸಿಕೊಳ್ಳುವುದಕ್ಕೆ ಆಗದೆ ಮೂಕಪ್ರಾಣಿಗಳಂತೆ ಕುಳಿತಿದ್ದರು. ನಿಯಮ, ಚೌಕಟ್ಟು ಇದ್ದರೂ ಕೂಡ ಈ ಸದನದ ಸತ್ಸಂಪ್ರದಾಯವನ್ನು ಗಾಳಿಗೆ ತೂರು ವುದಕ್ಕೆ ಕುಠಾರಪ್ರಾಯರಾಗಿದ್ದಾರೆಂದು ತಮ್ಮ ಅವಗಾಹನೆಗೆ ತರುತ್ತಿದ್ದೇನೆ. ಏಕೆಂದರೆ, ಸಮರ್ಥನೆ ಮಾಡಿಕೊಳ್ಳುವುದಕ್ಕಾಗದೆ ಅಸಹಾಯಕರಾದ ಒಬ್ಬ ಅಧಿಕಾರಿಯನ್ನು ಹೆಸರಿಟ್ಟು ದೂಷಿಸುವುದು ಅಷ್ಟೊಂದು ಸಾಧುವಾದುದಲ್ಲ ಎಂದು ತಮ್ಮ ಅವಗಾಹನೆಗೆ ತರುತ್ತಿದ್ದೇನೆ.

ಇನ್ನು ವಯಸ್ಕರ ಶಿಕ್ಷಣದ ಬಗ್ಗೆ ಹೇಳುವುದಾದರೆ, ಈ ದೇಶದಲ್ಲಿ ಇದ್ದಕ್ಕಿದ್ದ ಹಾಗೆ ದಿಢೀರಾಗಿ ಕೇಂದ್ರಸರ್ಕಾರದಿಂದ ಹಿಡಿದು ರಾಜ್ಯಸರ್ಕಾರದವರೆಗೂ ವಯಸ್ಕರ ಶಿಕ್ಷಣದ ಸಾಕ್ಷರತಾ ಪ್ರಚಾರ ಅತ್ಯಂತ ಭರದಿಂದ, ಭರಾಟೆಯಿಂದ ಪ್ರಾರಂಭವಾದಂಥ ಒಂದು ಸಂದರ್ಭದಲ್ಲಿ ನಾನು ಒಂದು ಸೂಚನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಸಾಕ್ಷರತಾ ಪ್ರಸಾರ ಜನತಾ ಒಂದು ಆಂದೋಲನವಾಗಬೇಕು. ಜನತಾ ಆಂದೋಲನ ಅಂದರೆ ಜನತಾಪಕ್ಷದ ಆಂದೋಲನ ಅಲ್ಲ. ಜನತಾ ಆಂದೋಲನವೆಂದರೆ ಸಾಮಾನ್ಯ ಶಿಕ್ಷಣದ ಪ್ರಚಾರದ ಒಂದು ಆಂದೋಲನವಾಗಬೇಕು. ನಮ್ಮ ದೃಷ್ಟಿಯಲ್ಲಿಟ್ಟುಕೊಳ್ಳಬೇಕಾದ ವಿಚಾರವೆಂದರೆ, ಕೇಂದ್ರಸರ್ಕಾರವಾಗಲೀ, ರಾಜ್ಯಸರ್ಕಾರವಾ ಗಲೀ ಎಷ್ಟು ಮೊತ್ತ ಈ ಶಿಕ್ಷಣ ಕ್ಷೇತ್ರಕ್ಕೆ ವೆಚ್ಚ ಮಾಡುತ್ತದೆ ಎನ್ನುವುದನ್ನು ಆಧಾರವಾಗಿಟ್ಟು ಕೊಳ್ಳ ಬೇಕು. ಬರೀ ಅಧಿಕಾರಿಗಳನ್ನೇ ದೂಷಿಸುವುದಿಲ್ಲ. ಅದರಲ್ಲಿ ನಮ್ಮ ಸಾಮಾಜಿಕ ಮುಖಂಡರೂ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ, ಇಸ್ರೇಲ್ ಒಂದು ಚಿಕ್ಕ ರಾಜ್ಯ. ಅದು ಬುದ್ಧಿವಂತ ರಾಷ್ಟ್ರವೂ ಹೌದು. ಹರಿದುಹಂಚಿಹೋಗಿದ್ದ ದೇಶಗಳು ಒಂದುಗೂಡಿ ಸೇರಿ ಇಬ್ರೂಗಳು ತಮ್ಮ ಭಾಷೆ ಯನ್ನು ಕಲಿಯಬೇಕು ಎಂದು ಬಹಳಷ್ಟು ತೀವ್ರಗತಿಯಿಂದ ಸಾಕ್ಷರತಾ ಪ್ರಚಾರ ಮಾಡಿದರು. ಹಲವಾರು ದೇಶಗಳಲ್ಲಿ ಇಬ್ರೂಗಳು ಹರಿದುಹಂಚಿಹೋಗಿದ್ದರು ನಮ್ಮ ಬೆಂಗಳೂರಿನಲ್ಲಿಯೂ ಇದ್ದರು. ಡೆಲ್ಲಿಯಲ್ಲಿ ಯೂ ಇದ್ದರು, ಪ್ರಪಂಚದ ಅನೇಕ ಕಡೆಗಳಲ್ಲಿದ್ದಂಥ ಇಬ್ರೂಗಳು ಒಂದು ಕಡೆ ಸೇರಿ ತಮ್ಮ ವಿಶ್ರಾಂತಿ ಕಾಲದಲ್ಲಿ ಮರದ ತೊಗಟೆ ಮೇಲೆ, ಸಿಕ್ಕಿಸಿಕ್ಕಿದ ಜಾಗಗಳಲ್ಲಿ ತಮ್ಮ ಭಾಷೆಯನ್ನು ಬರೆದು–ಈ ರೀತಿ ಶಿಕಣ ಪ್ರಚಾರಮಾಡಿದರಂತೆ. ಆದರೆ ನಮ್ಮ ದೇಶದಲ್ಲಿ ಹಣ ಎಷ್ಟರಮಟ್ಟಿಗೆ ಪೋಲುಮಾಡುವುದಕ್ಕೆ ಅವಕಾಶ ವಿದೆಯೆನ್ನುವುದನ್ನು ನೋಡುತ್ತಿದ್ದೇವೆಯೋ ಹೊರತು ಜನತಾ ಆಂದೋಲನ, ಸಾಕ್ಷರತಾ ಪ್ರಚಾರವಾಗಿಲ್ಲ ಆದ್ದರಿಂದ ನಮ್ಮ ರಾಜ್ಯದಲ್ಲಿ ಸಾಕ್ಷರತಾ ಪ್ರಚಾರಮಾಡುವುದಕ್ಕೆ ನಾವು ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ೬ ರಿಂದ ೧೧ ವರ್ಷದವರೆಗಿನ ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣ ಕೊಡಬೇಕು ಎಂದು ಸಂವಿಧಾನದಲ್ಲಿ ಹೇಳಿದ್ದರೂ ಕೂಡ, ಕೇಂದ್ರದ ಒಂದು ವರದಿಯಲ್ಲಿ ಸೇಕಡ ೬೦ ರಷ್ಟು ಮಕ್ಕಳು ಮಧ್ಯದಲ್ಲೇ ಶಾಲೆಗಳನ್ನು ಬಿಡುವುದರಿಂದ ಸಾಧಾರಣ ವಾಗಿ ಶಿಕ್ಷಣದ ಮೊತ್ತದ ೬೦ ರಷ್ಟು ಹಣ ನಮ್ಮ ದೇಶದಲ್ಲಿ ಅಪವ್ಯಯವಾಗುತ್ತಾ ಇದೆ ಎಂದು ಹೇಳಿ ದ್ದಾರೆ. ಅದು ನಮ್ಮ ರಾಜ್ಯಕ್ಕೂ ಹೊರತಾಗಿಲ್ಲ ಆ ದೃಷ್ಟಿಯಿಂದ ನಮ್ಮ ಸರ್ಕಾರ ಕ್ರಮ ತೆಗೆದು ಕೊಳ್ಳಬೇಕು. ಸೋರಿಹೋಗುವಂಥ ಹಣ, ಅಪವ್ಯಯವಾದಂಥ ಹಣವನ್ನು ಸದುಪಯೋಗಮಾಡುವುದ ರಿಂದಲೇ ಸಾಧಾರಣವಾಗಿ ಎರಡರಿಂದ ಮೂರು ಕೋಟಿ ರೂಪಾಯಿಗಳನ್ನು ಉಳಿಸುವುದಕ್ಕೆ ಸಾಧ್ಯ ಎಂದು ನನಗೆ ಕಂಡುಬರುತ್ತಾ ಇದೆ. ಇನ್ನೊಂದು ಸೂಚನೆ ಏನೆಂದರೆ, ಮಲೆನಾಡಿನ ಒಂದು ಪರಿಸ್ಥಿತಿಗೆ ಹೊಂದಿಕೊಂಡು ಅಲ್ಲಿಯ ಶಿಕ್ಷಣ ವ್ಯವಸ್ಥೆ ಉತ್ತರ ಕನ್ನಡ ಜಿಲ್ಲೆಯಲ್ಲಾಗಲಿ, ದಕ್ಷಿಣ ಕನ್ನಡ ಜಿಲ್ಲೆಯ ಲ್ಲಾಗಲೀ, ಶಿವಮೊಗ್ಗ ಜಿಲ್ಲೆಯಲ್ಲಾಗಲೀ... ......

ಶ್ರೀ ಮಳ್ಳೂರು ಆನಂದರಾವ್ — ತಾವು ನನ್ನ ಬಗ್ಗೆ ಮಾತನಾಡುತ್ತಾ ದ್ರೌಪದಿ ವಸ್ತ್ರಾಪಹರ ಣದಲ್ಲಿ ಕೀಚಕ ಎಂದರಂತೆ. ಅದನ್ನು ಈಗ ಮತ್ತೊಂದು ಸಾರಿ ಹೇಳಿ, ನಾನಾಗಲೇ ಇರಲಿಲ್ಲ. ಏಕೆಂದರೆ ದ್ರೌಪದಿ ವಸ್ತ್ರಾಪಹರಣದಲ್ಲಿ ಕೀಚಕ ಎಲ್ಲಿ ಬಂದ ಎಂದು ನನಗೆ ಆಶ್ಚರ್ಯವಾಯಿತು.

ಶ್ರೀ ಎಸ್. ವಿ. ನಾಯಕ್.—ತಮ್ಮ ಹಾವ ಭಾವ, ರೀತಿಯನ್ನು ನೋಡಿ ದ್ರೌಪದಿ ವಸ್ತ್ರಾಪಹರ ಣದ ಕೀಚಕನಂತೆ ಇತ್ತು ಎಂದು ಹೇಳಿದೆ.

ಶ್ರಿ ಮಳ್ಳೂರು ಆನಂದರಾವ್.—ದ್ರೌಪದಿ ವಸ್ತ್ರಾಪಹರಣದಲ್ಲಿ ಕೀಚಕ ಎಲ್ಲಿ ಬರುತ್ತಾನೆ, ಧುಶ್ಯಾಸನ ಎಂದು ಹೇಳಿ.

ಶ್ರೀ ಎಸ್. ವಿ. ನಾಯಕ್.—ಹೌದು, ಕೀಚಕ ಅಲ್ಲ, ದುಶ್ಯಾಸನ. ಮಲೆನಾಡಿನ ಜಿಲ್ಲೆಗಳಾದ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಶಿವಮೊಗ್ಗ ಜಿಲ್ಲೆಗಳಿಗೆ ವಿಶೇಷವಾಗಿ ಶಿಕ್ಷಣದ ಸವಲತ್ತುಗಳನ್ನು ಕೊಡಬೇಕಾದ್ದು ಬಹಳ ಮುಖ್ಯ ಎಂಬತಕ್ಕಂಥ ಅಂಶವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮಲೆನಾಡಿನ ಪರಿಸ್ಥಿತಿ ಹೇಗಿದೆ ಎನ್ನುವುದು ಮಾನ್ಯ ಶಿಕ್ಷಣ ಮಂತ್ರಿಗಳಿಗೆ ಗೊತ್ತಿದೆ. ಏಕೆಂದರೆ, ಅವರು ಮಲೆನಾಡಿನ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದಂಥವರು. ಕಾಡುಮೇಡುಗಳಲ್ಲಿ ಸಣ್ಣ ಸಣ್ಣ ಏಕ ಶಿಕ್ಷಣ ಶಾಲೆಗಳಿರುತ್ತವೆ. ಸಾಮಾನ್ಯವಾಗಿ ಅಂಥಾ ಕಡೆ ಅದರಲ್ಲೂ ಉತ್ತರ ಕನ್ನಡ ಜಿಲ್ಲೆ ಬಗ್ಗೆ ಹೇಳುವುದಾದರೆ, ರಾಜ್ಯದ ಬೇರೆ ಎಲ್ಲಾ ಜಿಲ್ಲೆಗಳಿಗಿಂತ ಅಲ್ಲಿಯ ಭೌಗೋಳಿಕ ಪರಿಸ್ಥಿತಿ ತೀರಾ ಭಿನ್ನವಾದುದು. ಅಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಒಂದು ಸಮಸ್ಯೆ ಇದೆ, ಬೇರೆ ಜಿಲ್ಲೆಗಳ ಹಾಗಲ್ಲ. ಉತ್ತರ ಕನ್ನಡ ಜಿಲ್ಲೆಯ ಕಾರವಾರದ ತಾಲ್ಲೂಕುಗಳಾದ ಭಟ್ಕಲ್, ಹೊನ್ನಾವರ, ಕುಮಟ, ಅಂಕೋಲ ಕಾರವಾರ ಇವುಗಳನ್ನು ಗಣನೆಗೆ ತೆಗೆದುಕೊಳ್ಳುವುದಾದರೆ ಎಷ್ಟೋ ಸಂದರ್ಭಗಳಲ್ಲಿ ಶಿಕ್ಷಕರನ್ನು ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ವರ್ಗಮಾಡಬೇಕಾದರೆ ನಾವು ವಿಚಾರ ಮಾಡಬೇಕಾಗುತ್ತದೆ. ಅಂಕೋಲ ತಾಲ್ಲೂಕಿನ ನೆರೆ ತಾಲ್ಲೂಕಾದ ಕಾರವಾರ ತಾಲ್ಲೂಕು ಅದಕ್ಕೆ ಹೊಂದಿಕೊಂಡಿದ್ದರೂ ಕೂಡ ಅಂಕೋಲ ತಾಲ್ಲೂಕಿನಿಂದ ಕಾರವಾರ ತಾಲ್ಲೂಕಿಗೆ ಶಿಕ್ಷಕರನ್ನು ವರ್ಗ ಮಾಡಬೇಕಾದರೆ ಅಲ್ಲಿಯ ಭಾಷೆ ನಮ್ಮ ಶ್ರೀಮಾನ್ ಘಾಡಿಯವರಿಗೆ ಗೊತ್ತು, ಕೊಂಕಣಿ ಮರಾಠಿ, ಅಲ್ಲಿ ಕನ್ನಡ ಬರುವುದಿಲ್ಲ. ಕಾರವಾರದಿಂದ ಅಂಕೋಲಕ್ಕೆ ಶಿಕ್ಷಕರನ್ನು ವರ್ಗ ಮಾಡಬೇಕಾದರೆ ಅಲ್ಲಿ ಅವರಿಗೆ ಕನ್ನಡ ಬರುವುದಿಲ್ಲ. ಇಂತಹ ಸಮಸ್ಯೆಗಳು ಇರುತ್ತವೆ. ಇನ್ನು ಪ್ರತಿಯೊಂದು ವರ್ಗದಲ್ಲೂ ಇರಬೇಕಾದಂಥ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿಗದಿಪಡಿಸಿದ ಸಂದರ್ಭದಲ್ಲೂ ಕೂಡ ನಾವು ಈ ಅಂಶವನ್ನು ಗಮನಿಸಬೇಕಾಗುತ್ತದೆ. ಅಲ್ಲಿ ಅವರಿಗೆ ಸವಲತ್ತನ್ನು ಕೊಡಬೇಕಾಗುತ್ತದೆ. ಶಾಲಾ ಕೋಣೆಗಳ ಬಗ್ಗೆ ತಾವು ವಿಶೇಷವಾದ ಗಮನವನ್ನು ಹರಿಸಬೇಕು. ಭಾರಿ ಮಳೆಯಾಗುವಂಥ ಮಲೆನಾಡಿನ ಪ್ರದೇಶದಲ್ಲಿ ಶಾಲಾ ಕೋಣೆಗಳನ್ನು ಕಟ್ಟಿಸಿಕೊಡುವುದನ್ನು ತಾವು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ನಮ್ಮಲ್ಲಿ ೩-೪ ಶಾಲೆಗಳನ್ನು ಬಿಟ್ಟರೆ ಉಳಿದ ಎಲ್ಲಾ ಸಹಾಯಧನ ಪಡೆಯುವಂಥ ಖಾಸಗಿ ಸಂಸ್ಥೆಗಳು. ಪ್ರಾಥಮಿಕ ಶಾಲೆಗಳ ಕಟ್ಟಡವನ್ನು ನಾವು ಅಲಕ್ಷಿಸುತ್ತಿದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ವರ್ಷದಲ್ಲಿ ೪ ರಿಂದ ೫ ತಿಂಗಳು ಮಳೆಯಾಗುವಂಥ ಈ ಜಿಲ್ಲೆಯಲ್ಲಿ ಶಾಲಾ ಕಟ್ಟಡಗಳ ಪರಿಸ್ಥಿತಿ ಎಷ್ಟರಮಟ್ಟಿಗೆ ಹದಗೆಟ್ಟಿದೆಯೆಂದರೆ, ಕೆಲವು ಹಳ್ಳಿಗಳಲ್ಲಿ ಕಟ್ಟಡಗಳೇ ಇಲ್ಲ, ಎಲ್ಲೋ ಬಾಡಿಗೆ ಮನೆಗಳನ್ನು ತೆಗೆದುಕೊಂಡು ನಡೆಸೋಣವೆಂದರೆ, ಬಾಡಿಗೆ ಮನೆಗಳೂ ಕೂಡ ಸರಿಯಾಗಿ ಸಿಕ್ಕುವುದಿಲ್ಲ, ಎಷ್ಟೋ ಸಾರೀ ಸಣ್ಣ ಸಣ್ಣ ಗುಡಿಸಲುಗಳಿಗೆ ಮಕ್ಕಳನ್ನು ಕಳಿಸಿ ವಿದ್ಯಾರ್ಜನೆ ಮಾಡಿಸುವಂಥ ಪ್ರಸಂಗವಿದೆ. ಆದುದರಿಂದ ಶಾಲಾ ಕಟ್ಟಡಗಳ ಬಗ್ಗೆ ಸರ್ಕಾರದವರು ತೀವ್ರವಾದ ಗಮನವನ್ನು ಕೊಡಬೇಕಾಗುತ್ತದೆ.

ಇನ್ನು ಅಧ್ಯಕ್ಷರೇ ನಾನು ಅಧಿಕಾರಿಗಳ ಬಗ್ಗೆ ನೇರವಾಗಿ ಆಪಾದನೆ ಹೊರಿಸದೇ ಇದ್ದರೂ ಕೂಡ, ಶಿಕ್ಷಣ ಇಲಾಖೆಯಲ್ಲಿರತಕ್ಕ ಎಲ್ಲಾ ಅಧಿಕಾರಿಗಳೂ ಕೂಡ ಸಂಭಾವಿತರು ಅಂತ ಹೇಳುವುದಿಲ್ಲ. ನನ್ನ ದೃಷ್ಟಿಕೋನಕ್ಕೆ ಬಂದಂಥ ಒಂದೆರಡು ಉದಾಹರಣೆಗಳನ್ನು ಹೇಳುತ್ತೇನೆ. ಕುಮಟಾದಲ್ಲಿ ಒಬ್ಬಳು ಎ.ಇ.ಓ ಆಫೀಸರ್ ಇದ್ದಳು, ಅವಳ ಹೆಸರು ಹೇಳುವುದಿಲ್ಲ. ಅದೂ ಪ್ರೊಬೇಷನರಿ ಆಗಿದ್ದಳು. ಪ್ರೊಬೇಷನರಿ ಆಗಿದ್ದರೂ ಕೂಡ ಅವಳು ಮಾಡುತ್ತಿದ್ದ ಕೆಲಸದ ಬಗ್ಗೆ ಇಲ್ಲಿ ನಾನು ನಿಸ್ಸಂಕೋಚವಾಗಿ, ನಿಸ್ಸಂದೇಹವಾಗಿ ಹೇಳಬೇಕಾಗಿದೆ. ಅವಳಿಗೆ ಎಲ್ಲಾ ತರಹದ ಚಟಗಳೂ ಇದ್ದವು ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ, ಇದರಿಂದ ಅಲ್ಲಿಯ ಪರಿಸ್ಥಿತಿ ಎಲ್ಲಿಯವರೆಗೆ ಬಂತು ಎಂದರೆ ಮಾನ್ಯ ಶ್ರೀ ಮಳ್ಳೂರು ಆನಂದರಾವ್ ರವರು ಹೇಳಿದ ವಿಷಯಕ್ಕೆ ನಾನು ಈಗ ಬೆಂಬಲಿಸುತ್ತಿದ್ದೇನೆ. ಅವರು ಹೇಳಿದ ಹಾಗೆ ರೆಕ್ರೂಟ್‌ಮೆಂಟ್ ವಿಚಾರದಲ್ಲಿ, ರೆಕ್ರೂಟ್‌ಮೆಂಟ್ ಮಾಡುವ ಸಮಯದಲ್ಲಿ ಅದು ಅವಳಿಗೆ ನೇರವಾಗಿ ಸಂಬಂಧಪಡುವುದಿಲ್ಲ ಆದರೂ ಡಿ.ಡಿ.ಪಿ.ಐ ಮೇಲೆ ತನ್ನ ಪ್ರಭಾವವನ್ನು ಬೀರಿ ಕೆಲಸವನ್ನು ಕೊಡಿಸಿಕೊಡುತ್ತೇನೆಂದು ಹೇಳಿ ಕಳೆದ ವರ್ಷ ಸುಮಾರು ಒಬ್ಬೊಬ್ಬರ ಹತ್ತಿರ ೩, ೪ ಸಾವಿರ ರೂಪಾಯಿಗಳವರಿಗೂ ತೆಗೆದುಕೊಂಡಿದ್ದಾಳೆ. ಅವಳ ಮೇಲೆ ಇಷ್ಟೊಂದು ಆಪಾದನೆಗಳು ಬಂದಾಗ ಅವಳನ್ನು ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿಸುವಂಥ ಪ್ರಸಂಗ ಬಂತು. ಆಗ ಕೊನೆಗೆ ಅವಳ ಪರಿಸ್ಥಿತಿ ಎಲ್ಲಿಗೆ ಬಂತು ಎಂದರೆ, ಅವಳು ಚಾರ್ಜ್ ಕೊಟ್ಟು ಹೋಗುವಾಗ, ಅವಳಿಗೆ ಯಾರು ದುಡ್ಡು ಕೊಟ್ಟಿದ್ದರೋ

ಅವರೆಲ್ಲಾ ಅವಳಿಂದ ಹಣ ವಸೂಲು ಮಾಡಲು ಮುತ್ತಿಗೆ ಹಾಕಿದರು. ಆಗ ಅವಳು ಕೂಡಲೇ ಮನೆಗೆ ಓಡಿ ಹೋಗಿ ರಾತ್ರಿಯೆಲ್ಲಾ ಮನೆಯೊಳಗೇ ಅವಿತಿದ್ದುಕೊಂಡು ಪುನಃ ಬೆಳಿಗ್ಗೆ ಪೋಲೀಸರ ರಕ್ಷಣೆಯಲ್ಲಿ ಆ ಊರಿನಿಂದ ಬೇರೆಯ ಊರಿಗೆ ಹೋಗಬೇಕಾದ ಪರಿಸ್ಥಿತಿ ಬಂತು. ಅವಳು ಏನಿಲ್ಲವೆಂದರೂ ಕೊನೆಯ ಪಕ್ಷ ೬೦ ಸಾವಿರ ರೂಪಾಯಿಗಳವರೆಗೆ ಹಣವನ್ನು ತೆಗೆದುಕೊಂಡಿರಬಹುದೆಂದು ಅಂದಾಜು ಇದೆ. ಅಂದರೆ ನಿಮ್ಮ ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿಗಳು ಯಾವರೀತಿಯಲ್ಲಿ ವರ್ತಿಸುತ್ತಿದ್ದಾರೆಂಬುದಕ್ಕೆ ಉದಾಹರಣೆ ಹೇಳಿದೆ. ಈ ರೀತಿ ಅವರು ಶಿಕ್ಷಣ ಕ್ಷೇತ್ರಕ್ಕೆ ಮಸಿ ಬಳಿಯುತ್ತಿದ್ದಾರೆ. ಇಂಥಾ ಹಲವಾರು ಉದಾಹರಣೆಗಳನ್ನು ಈಗಾಗಲೇ ಅನೇಕ ಸದಸ್ಯರುಗಳು ಹೇಳಿದ್ದಾರೆ. ಆದ್ದರಿಂದ ನಾನು ಇನ್ನು ಹೆಚ್ಚಿಗೆ ಹೇಳುವುದಕ್ಕೆ ವೇಳೆಯ ಅಭಾವವಿರುವುದರಿಂದ ಇಷ್ಟು ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ) —ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಳೂರು ಆನಂದರಾವ್ ರವರು ನಿನ್ನೆ ಖಾಸಗಿ ಶಾಲೆಗಳಲ್ಲಿ ಅವ್ಯವಹಾರ, ಲೂಟಿ, ಮುಂತಾದುವುಗಳು ನಡೆಯುತ್ತಿದೆ ಅದರ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ, ಆದರೆ ಅದರಲ್ಲಿ ಇನ್ನು ಕೆಲವು ಭಾಗವಿದೆ ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏತಕ್ಕೆಂದರೆ ಆ ಅವ್ಯವಹಾರಗಳಲ್ಲಿ ಕೇವಲ ನಮ್ಮ ಅಧಿಕಾರಿಗಳು ಮಾತ್ರ ಪಾತ್ರರಾಗಿಲ್ಲ ಅಂತ ನನಗನ್ನಿಸುತ್ತಿದೆ. ಆದರೆ ಒಂದು ಪಟ್ಟಿಯೇ ನನ್ನ ಹತ್ತಿರವಿದೆ ಅದನ್ನು ಮಾನ್ಯ ಶ್ರೀ ಸುಬ್ಬಯ್ಯಶೆಟ್ಟಿ ಯವರಿಗೆ ಕಳುಹಿಸಿಕೊಟ್ಟಿದ್ದೇನೆ. ಇನ್ನೊಮ್ಮೆ ಪುನ: ಅವರಿಗೆ ಈ ಪಟ್ಟಿಯನ್ನು ಕಳುಹಿಸಿಕೊಡುತ್ತೇನೆ. ಯಾವಯಾವ ಅಧಿಕಾರಿಗಳು ಕೋಟ್ಯಾಂತರ ರೂಪಾಯಿಗಳ ಲೂಟಿಯಲ್ಲಿ, ಖಾಸಗಿ ಶಾಲೆಗಳ ಲೂಟಿಯಲ್ಲಿ, ಅವ್ಯವಹಾರ ದಲ್ಲಿ ಪಾಲಾಗಿದ್ದಾರೆ ಅವರ ಪಟ್ಟಿಯೇ ಒಂದು ನನ್ನ ಹತ್ತಿರವಿದೆ. ಆ ಪಟ್ಟಿಯನ್ನು ನಿಮಗೆ ನಾನು ೨೮ನೇ ಮಾರ್ಚಿ ೧೯೬೭ರಲ್ಲಿಯೇ ಕಳುಹಿಸಿಕೊಟ್ಟಿದ್ದೇನೆ. ಆ ಪಟ್ಟಿಯಲ್ಲಿ ಸುಮಾರು ೩೫ ಜನ ಅಧಿಕಾರಿಗಳೂ ಇದ್ದಾರೆ, ಅವರ ಹೆಸರು ಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಮೇಲಿನಿಂದ ಕೆಳಗಿನ ವರೆಗೆ, ಸೆಕೆಂಡ್ ಡಿವಿಜನ್ ಕ್ಲರ್ಕ್‌ವರೆಗೆ ಇರತಕ್ಕವರ ಹೆಸರುಗಳು ಇವೆ ಆದುದರಿಂದ ಅದನ್ನು ಓದುವುದಕ್ಕೆ ಹೋಗುವುದಿಲ್ಲ ಅದನ್ನು ತಮಗೆ ಪಾಸ್ ಆನ್ ಮಾಡುತ್ತೇನೆ. ನಿಜವಾಗಿಯೂ ನಿಮಗೆ ಶಕ್ತಿ ಸಾಮರ್ಥ್ಯವಿದ್ದರೆ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ. ಬಹುಶಃ ನೀವು ಏನಾದರೂ ಕ್ರಮ ತೆಗೆದುಕೊಂಡಿದ್ದೇ ಆದರೆ ನಾವು ನಿಮಗೆ ಒಂದು ಉತ್ತಮವಾದ ಸರ್ಟಿಫಿಕೇಟನ್ನು ಕೊಡಬಹುದು. ಆದರೆ ನಿಮಗೆ ಇವರ ಮೇಲೆ ಕ್ರಮ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ, ನನಗೆ ಗೊತ್ತು ಅಲ್ಲಿ ಬಹಳ ಕಷ್ಟವಿದೆ. ನೀವು ಒಂದು ವೇಳೆ ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೇ ಆದರೆ ಅವರು ನಿಮ್ಮನ್ನು ನಿಮ್ಮ ಡಿಪಾರ್ಟ್‌ಮೆಂಟಿನಿಂದ ಅಂದರೆ ಬೇರೆ ಕಡೆಗೇ, ಬೇರೆ ಖಾತೆಯನ್ನು ವಹಿಸಿಕೊಡುವ ಮಟ್ಟಿಗೆ ಶಕ್ತಿ ಸಾಮರ್ಥ್ಯಶಾಲಿಗಳಾಗಿದ್ದಾರೆ. ಇದರಲ್ಲಿ ಬರೀ ಅಧಿಕಾರಿಗಳೊಬ್ಬರೇ ಅಲ್ಲ, ಅವರ ಹಿಂದೆ ಇರತಕ್ಕ ಖಾಸಗಿ ಶಾಲೆಗಳೇನಿವೆ ಅಲ್ಲಿ ರಾಜಕಾರಣಿಗಳಿದ್ದಾರೆ. ಅನೇಕ ಖಾಸಗೀ ಶಾಲೆಗಳಲ್ಲಿ ನಮ್ಮ ಈ ಮನೆಯ ಅನೇಕ ಮಾನ್ಯ ಸದಸ್ಯರುಗಳು ಅಲ್ಲಿ ಪ್ರೆಸಿಡೆಂಟೋ, ಇಲ್ಲ ವೈಸ್ ಪ್ರೆಸಿಡೆಂಟೋ, ಇಲ್ಲ ಸದಸ್ಯರೋ, ನಾನಾ ತರಹದಲ್ಲಿ ಭಾಗಿಗಳಾಗಿರುತ್ತಾರೆ. ಇದರಿಂದಾಗಿ ಅಲ್ಲಿ ನಡೆಯುತ್ತಿರುವ ವ್ಯವಹಾರದಲ್ಲಿ ಆ ರಾಜಕಾರಣಿಗಳೂ ಭಾಗಿಗಳಾಗಿದ್ದಾರೆ. ಇದರಿಂದಾಗಿ ನೀವು ಒಬ್ಬ ಅಧಿಕಾರಿಯ ಮೇಲೂ ಕ್ರಮ ತೆಗೆದುಕೊಳ್ಳುವುದಕ್ಕಾಗು ವುದಿಲ್ಲ. ತಾವು ಖಾಸಗಿ ಶಾಲೆ ಗಳಲ್ಲಿರತಕ್ಕ ಅಧಿಕಾರಿಗಳ ಲಿಸ್ಟ್ ತರಿಸಿಕೊಂಡು ನೋಡಿದರೆ ಎಷ್ಟರ ಮಟ್ಟಿಗೆ ನಮ್ಮ ರಾಜಕಾರಣಿಗಳು ಸೇರಿಕೊಂಡಿದ್ದಾರೆ, ಮತ್ತು ಕೆಲವರು ಯಾವ ರೀತಿಯಲ್ಲಿ ನಮ್ಮ ಸರ್ಕಾರದ ಹಣವನ್ನು ಲೂಟಿ ಮಾಡುತ್ತಿದ್ದಾರೆ ಎನ್ನತಕ್ಕದ್ದನ್ನು ನೋಡಬಹುದು, ಇದರಿಂದಾಗಿ ಇವತ್ತಿನ ದಿವಸ ನಿಮ್ಮ ಡಿಪಾರ್ಟ್‌ಮೆಂಟ್ ಕೆಟ್ಟು ಹೋದ ರೀತಿಯಲ್ಲಿ ಇನ್ನು ಯಾವ ಡಿಪಾರ್ಟ್‌ಮೆಂಟೂ ಕೆಟ್ಟು ಹೋಗಿಲ್ಲವೆಂದು ಹೇಳಬಯಸುತ್ತೇನೆ. ಕೆಲವು ಘಟನೆಗಳು ನನಗೆ ಗೊತ್ತಿದೆ ಆದರೆ ಅದನ್ನು ಈ ಸಭೆಯಲ್ಲಿ ಹೇಳುವುದಕ್ಕಾಗುವುದಿಲ್ಲ. ಸ್ಕೂಲ್‌ಗೆ ರೆಕಮೆಂಡೇಷನ್ ಕೊಡಬೇಕಾದರೆ, ಟೀಚರ್ಸ್‌ಗೆ ಅಪಾಯಿಂಟ್‌ಮೆಂಟ್ ಕೊಡಬೇಕಾದರೆ, ಅವರಿಗೆ ಪರ್ಮನೆಂಟ್ ಆರ್ಡರ್ ಕೊಡಬೇಕಾದರೆ ಹಣವನ್ನು ತೆಗೆದುಕೊಳ್ಳುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ಆದರೆ ಅದರ ಜೊತೆಯಲ್ಲಿ ಕಾಮಿನಿ ಕಾಂಚನ ಎರಡನ್ನೂ ತೆಗೆದುಕೊಂಡಿರತಕ್ಕದ್ದು ಇದೆ. ಒಬ್ಬ ಸಾಮಾನ್ಯ ಡ್ರಿಲ್ ಟೀಚರ್ ಇವತ್ತು ಸುಮಾರು ೯ ಶಾಲೆಗಳನ್ನು ನಡೆಸುತ್ತಿದ್ದಾನೆ. ಅವನು ಒಬ್ಬ ಮಹಿಳೆಯ ಕೊಲೆ ಕೂಡ ಮಾಡಿಸಿದ್ದಾನೆ. ಆಕೆ ಹೆಡ್ ಮಿಸ್ಟ್ರೆಸ್ ಆಗಬೇಕೆಂದು ಡಿಪಾರ್ಟ್‌ಮೆಂಟ್‌ನೊಡನೆ ಕರೆಸ್ಪಾಂಡೆನ್ಸ್ ನಡೆಸಿದಾಗ, ಆಕೆಯ ಕೊಲೆ

ಕೂಡ ಆಗಿ ಹೋಯಿತು. ಇದೆಲ್ಲಾ ಪತ್ರಿಕೆಗಳಲ್ಲೂ ಬಂದಿದೆ ತಾವು ನೋಡಿರಬಹುದು. ಇನ್ನೊಂದು ಸಂಸ್ಥೆಯ ಬಗ್ಗೆ ಹೇಳುತ್ತೇನೆ, ರೇಣುಕಾ ವಿದ್ಯಾಸಂಸ್ಥೆ ಅಂತ ಒಂದು ಪ್ರಕಾಶ್ ನಗರದಲ್ಲಿದೆ ಅದಕ್ಕೆ ಈ ಮಾನ್ಯ ಒಬ್ಬ ಸದಸ್ಯರಾಗಿರತಕ್ಕವರೇ ಅದಕ್ಕೇ ಪೋಷಕರು. ಅದಕ್ಕೆ ಒಬ್ಬ ಹೆಣ್ಣು ಮಗಳು ಶ್ರೀಮತಿ ಶಾಂತ ಲಕ್ಷ್ಮಿ ಎನ್ನುವವರು ಸೆಕ್ರೆಟರಿಯಾಗಿದ್ದಾಳೆ. ಈ ಸಂಸ್ಥೆಯ ಬಗ್ಗೆ ೧೮ನೇ ಮೇ ೧೯೭೮ ರಲ್ಲಿಯೇ ಬೇಕಾದಷ್ಟು ವಿಚಾರಗಳು ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ಡಿ. ಟಿ. ರಾಮು.—ಸನ್ಮಾನ್ಯ ಶ್ರೀ ಪಿ. ರಾಮದೇವ್ ರವರು ಮಾತನಾಡುತ್ತಾ ಒಂದು ಸಂಸ್ಥೆಯ ಹೆಸರು ಹೇಳಿ, ಒಬ್ಬ ಮಹಿಳೆಯ ಕೊಲೆ ಕೂಡ ಮಾಡಿದರು ಎನ್ನತಕ್ಕ ಒಂದು ದೊಡ್ಡ ಅಪಾದನೆಯನ್ನು ಮಾಡಿದ್ದಾರೆ, ಎರಡನೆಯದಾಗಿ ಇನ್ನೊಂದು ಸಲ ಇನ್ನೊಬ್ಬರ ಹೆಸರು ಹೇಳುತ್ತಿದ್ದಾರೆ ಆದಕಾರಣ ಅವರು ಈ ರೀತಿ ಮಾಡುತ್ತಿರುವ ಏನು ಆಪಾದನೆಗಳು ಇವೆ ಅವುಗಳನ್ನು ರುಜುವಾತು ಪಡಿಸುತ್ತಾರೆಯೇ ? ಅವರು ಆ ರೀತಿ ಇಲ್ಲಿ ಆಪಾದನೆ ಮಾಡುತ್ತಿರುವಾಗ ಆ ವ್ಯಕ್ತಿ ಇಲ್ಲಿ ಇಲ್ಲದೇ ಇರುವುದರಿಂದ ಹಾಗೂ ಅವನು ತನ್ನನ್ನು ತಾನು ಸಮರ್ಥನೆ ಮಾಡಿಕೊಳ್ಳಲು, ಇಲ್ಲವೇ ಹೇಳಿ ಕೊಡಲು ಇಲ್ಲಿ ಇಲ್ಲದೇ ಇರುವುದರಿಂದ, ಅವರ ಹೆಸರು ಹೇಳುವುದು ಅಸಹಜ ಮತ್ತು ಅಸಮರ್ಪಕ ವಲ್ಲವೇ ಎನ್ನತಕ್ಕದ್ದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ. ರಾಮದೇವ್.—ಮಾನ್ಯ ಶ್ರೀ ರಾಮುರವರಿಗೆ ಪತ್ರಿಕೆಗಳನ್ನು ಓದತಕ್ಕ ಹವ್ಯಾಸವಿದೆಯೆಂದು ತಿಳಿದುಕೊಂಡಿದ್ದೆ ಆದರೆ ಅವರು ಈರೀತಿ ಪ್ರಶ್ನೆ ಕೇಳುತ್ತಿರುವುದರಿಂದ ಅನುಮಾನ ಉಂಟಾಗುತ್ತಿದೆ. ಇದು ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಗಿದೆ ೧೯೭೮ ರಲ್ಲಿ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲೂ ಸೀರೀಸ್ ಆಫ್ ಆರ್ಟಿಕಲ್ಸ್ ಬಂತು, ಆದುದರಿಂದ ತಾವು ಬೇಕಾದರೆ ಅದನ್ನು ದಯವಿಟ್ಟು ಓದಿನೋಡಿ ಆಗ ನಿಮಗೆ ಬೇಕಾದಷ್ಟು ವಿಷಯಗಳು ಗೊತ್ತಾಗುತ್ತದೆ. Shanthalakshmamma Assistant Mistress, Government Model Primary School, Cottonpet; ಇವರು ೪ ಶಾಲೆಗಳನ್ನು ನಡೆಸುತ್ತಿದ್ದಾರೆ.

5-00 P.M.

MR. SPEAKER.—Hon. Member may please avoid personal references.

ಶ್ರೀ ಪಿ. ರಾಮದೇವ್.—ಇವರು ಏನು ಮಾಡಿದ್ದಾರೆಂದರೆ, ಸರ್ಕಾರಿ ಶಾಲೆಯಲ್ಲಿ ಹೆಡ್ ಮಿಸ್ಟ್ರೆಸ್ ಆದವರು ಖಾಸಗೀ ಶಾಲೆಗಳಲ್ಲಿ ಸೆಕ್ರೆಟರಿಯಾಗಿ ೪ ಶಾಲೆಗಳನ್ನು ನಡೆಸುತ್ತಿದ್ದಾರೆ. ಇವರ ಶಾಲೆಯ ಬಗ್ಗೆ ಆರ್ಟಿಕಲ್ ಬಂದಾಗ ಇನ್‌ಕ್ವೈರಿ ಆಯಿತು. ಆಗ ೩ ನ್ನು ಕ್ಲೋಸ್ ಮಾಡಿ ಒಂದನ್ನು ಮಾತ್ರ ನಡೆಸುತ್ತಿದ್ದರು. ಜಾಯಿಂಟ್ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಶ್ರೀ ಟಿ. ರಾಮಯ್ಯನವರು ಗ್ರಾಂಟನ್ನು ನಿಲ್ಲಿಸಬೇಕೆಂದು ಬರೆದರೂ, ಎ.ಇ.ಓ. ರಿಪೋರ್ಟ್ ವಿರುದ್ಧವಾಗಿದ್ದರೂ ಕೂಡ ಕಳೆದವರ್ಷ ೧೩½ ಸಾವಿರ ರೂಪಾಯಿ ಗ್ರಾಂಟನ್ನು ವಿದ್ಯಾ ಇಲಾಖೆಯವರು ಕೊಟ್ಟರು. ಏಕೆಂದರೆ ಬಹಳ ಪ್ರಾಮುಖ್ಯವಾದ ವ್ಯಕ್ತಿಗಳು ಯಾರಿದ್ದಾರೋ ಅವರಿಂದ ಟೆಲಿಫೋನ್ ಹೋಯಿತು, ಕೊಟ್ಟರು. ಈ ರೀತಿಯಾಗಿ ಇಲ್ಲಿ ವ್ಯವಹಾರ ನಡೆಯುತ್ತಿದ್ದರೆ, ಸೌತ್ ರೇಂಜ್‌ನಲ್ಲಿ they have paid allowances to Rajappa a Student of Anglo Urdu Higher Secondary School during 1973-74 The amount involved is Rs. 8,633. The Joint DPI had lodged a complaint to the Police Commissioner. What has happned to it? ಅವರು, ಒಬ್ಬ ಹುಬ್ಬಳ್ಳಿಯಲ್ಲಿ ಪಿ.ಯು.ಸಿ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯ ಹೆಸರಿನಲ್ಲಿ ಗ್ರಾಂಟ್ ತೆಗೆದುಕೊಂಡರು. Another complaint is against Smt. Shanthalakshamma who has been paid Rs. 8,932 during 1973-74 being the salary for the non-existing teachers. A complaint was lodged with the Police. ಹಿಂದಿನ ಜಾಯಿಂಟ್ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇಂಥ ನೂರಾರು ಕೇಸುಗಳನ್ನು ಕಂಡುಹಿಡಿದು ಲಕ್ಷಾಂತರ ರೂಪಾಯಿ ಲೂಟಿಯಾಗುವುದರ ಬಗ್ಗೆ ಕಂಪ್ಲೈಂಟ್ ಕೊಟ್ಟರೆ ಇದುವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅವರು ಕಂಪ್ಲೈಂಟ್ ಮಾಡಿ

ಒಂದೂವರೆವರ್ಷವಾಗಿರುವುದರಿಂದ ಈ ಇಲಾಖೆಯಲ್ಲಿ ಎಷ್ಟರ ಮಟ್ಟಿನ ಒಂದು ದಕ್ಷತೆ ಇದೆ ಎಂದು ಕೇಳುತ್ತೇನೆ. ಕೊನೆಗೆ ಇವರಿಗೆ ಏನು ಮಾಡಿದ್ದೀರಿ ಎಂದರೆ ಉತ್ತಮವಾದ ಶಾಲೆ ಎಂದು ಸರ್ಟಿಫಿಕೇಟ್ ಕೊಟ್ಟಿದ್ದೀರಿ. ಮಾನ್ಯ ಸುಬ್ಬಯ್ಯಶೆಟ್ಟರ ಹತ್ತಿರ ಈ ಎಲ್ಲ ಮಾಹಿತಿಗಳು ಇರಬಹುದೆಂದು ಕಾಣುತ್ತದೆ. ಇಲ್ಲದಿದ್ದರೆ, ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಸುಮಾರು ಒಂದು ತಿಂಗಳ ಕಾಲ ಆ ಬಗ್ಗೆ 'ಸ್ಪೆಶಲ್ ಸ್ಕೂಲ್ಸ್ ಎಕ್ಸರೇಸ್' ಎಂಬ ಶಿರೋನಾಮೆಯಲ್ಲಿ ಸ್ಪೆಶಲ್ ಆರ್ಟಿಕಲ್ಸ್ ಬಂದಿವೆ, ಅದನ್ನು ದಯವಿಟ್ಟು ತರಿಸಿನೋಡಿ. ಇನ್ನು ವೆಂಕಟೇಶ್ವರ ನರ್ಸರಿ ಅಂಡ್ ಪ್ರೈಮರಿ ಸ್ಕೂಲ್, ಮಾಗಡಿರೋಡ್, ಎಂದು. ಅಲ್ಲಿ ರಾಜಶೇಖರನ್ ಎಂಬ ಒಬ್ಬರು ಮುಖ್ಯೋಪಾಧ್ಯಾಯರು ಇದ್ದಾರೆ, ಅವರು ರೈಲ್ವೆ ಇಲಾಖೆಯಿಂದ ಸಸ್ಪೆಂಡ್ ಆಗಿ ಬಂದವರು. ಅವರಿಗೆ ಕ್ವಾಲಿಫಿಕೇಷನ್ ಇಲ್ಲ, ಅವರ ಹೆಂಡತಿ ಅಲ್ಲಿ ಸೆಕ್ರೆಟರಿ. ಯಾರೋ ಒಬ್ಬ ರಾಜಕಾರಣಿಯನ್ನು ಪ್ರೆಸಿಡೆಂಟ್ ಆಗಿ ಮಾಡಿದ್ದಾರೆ. ಅವರು ಷೆಡ್ಯೂಲ್ಡ್ ಕ್ಯಾಸ್ಟ್ ಸ್ಕಾಲರ್‌ಶಿಪ್ ಅನ್ನು ತಿಂದುಹಾಕಿದ್ದಾರೆ. ಅದರ ಜೊತೆಗೆ ಕೇರ್‌ಫಂಡ್‌ಗೆ ಕೊಟ್ಟಂತ ೨೫ ಸಾವಿರ ರೂಪಾಯಿಯನ್ನು ಲೂಟಿ ಮಾಡಿದ್ದಾರೆ. ಅಷ್ಟೇ ಅಲ್ಲದೆ ಈ ರಾಜ್ಯದಲ್ಲಿ ಬೋಗಸ್ ಟಿ.ಸಿ.ಗಳನ್ನು ಇಶ್ಯೂ ಮಾಡತಕ್ಕ ಒಂದು ಶಾಲೆ ಇದೆ. ಅದು ಇಲಾಖೆಗೆ ಗೊತ್ತಿದ್ದರೂ ಕೂಡ ಅದರಲ್ಲಿ ಇಲಾಖೆಯವರೇ ಶಾಮೀಲಾಗಿದ್ದಾರೆ ಪರ್ಮನೆಂಟ್ ರೆಕಗ್ನಿಷನ್ ಕೊಡಬೇಕಾದರೆ ನಿಮಗೆ ಕಂಡೀಷನ್ ಇಲ್ಲವೆ? ಆ ಪ್ರಕಾರವೇ ಕೊಡಬೇಕಲ್ಲವೆ? ಆದರೆ ಕಂಡೀಷನ್ಸ್ ಯಾವುದೂ ಫುಲ್‌ಫಿಲ್ ಮಾಡದೆ ಇರತಕ್ಕ ಹಲವಾರು ಶಾಲೆಗಳಿಗೆ ರೆಕಗ್ನಿಷನ್ ಕೊಟ್ಟಿದ್ದೀರಿ. ಉದಾಹರಣೆಗೆ ಡೆಕ್ಕನ್ ಇಂಗ್ಲಿಷ್ ಸ್ಕೂಲ್. ಅದು ರೆಂಟೆಡ್ ಬಿಲ್ಡಿಂಗ್ ನಲ್ಲಿ ನಡೆಯುತ್ತಿದೆ, ಕಂಡೀಷನ್ ಫುಲ್‌ಫಿಲ್ ಆಗಿಲ್ಲ. ಇದೇ ರೀತಿ ಮಂಜುನಾಥ ಪ್ರೈಮರಿ ಸ್ಕೂಲ್, ಉದಯ ಎಜುಕೇಷನ್ ಸೊಸೈಟಿ, ಪದ್ಮಾವತಿ ಎಜುಕೇಷನ್ ಸೊಸೈಟಿ ಇತ್ಯಾದಿ ಶಾಲೆಗಳಲ್ಲಿ ಕಂಡೀಷನ್ ಫುಲ್‌ಫಿಲ್ ಆಗಿಲ್ಲ. ಇಂಥ ಶಾಲೆಗಳಿಗೆ ಹೇಗೆ ರೆಕಗ್ನಿಷನ್ ಕೊಟ್ಟಿರಿ? ಯಾವ ಒಂದು ವಿಶೇಷ ಕ್ವಾಲಿಫಿಕೇಷನ್ ಮೇಲೆ ಕೊಟ್ಟಿರಿ? ಲಂಚವನ್ನು ತೆಗೆದುಕೊಂಡು ಕೊಟ್ಟಿರತಕ್ಕದೆಂದು ಕಾಣುತ್ತದೆ. ನಂತರ ಶಾಲೆಗಳನ್ನು ಡೀ ರೆಕಗ್‌ನಿಷನ್ ಮಾಡುತ್ತೀರಿ. ನಾನು ಬರೀ ಖಾಸಗೀ ಶಾಲೆಗಳ ಬಗ್ಗೆ ಹೇಳುತ್ತಿದ್ದೇನೆ. ೧೯೭೦ರಲ್ಲಿ ೨೨ ಶಾಲೆಗಳನ್ನೂ ೧೯೭೬ರಲ್ಲಿ ೨೪ ಶಾಲೆಗಳನ್ನು ಹಾಗೂ ೧೯೭೭ರಲ್ಲಿ ೩೪ ಶಾಲೆಗಳನ್ನು ಡೀ ರೆಕಗ್‌ನೈಸ್ ಮಾಡಿದಿರಿ. ಪತ್ರಿಕೆಗಳಲ್ಲಿ ಪ್ರಕಟಗೊಳಿಸಿದಿರಿ, ಆ ಡೀ ರೆಕಗ್‌ನೈಸ್ ಆದ ಶಾಲೆಗಳಿಗೆ ಹುಡುಗರನ್ನು ಕಳುಹಿಸಬೇಡಿ ಎಂದು. ಆದರೆ ಪುನಃ ಏನು ಮಾಡಿದಿರಿ ಎಂದರೆ ಪರ್ಮಿಷನ್ ಕೊಟ್ಟು ರೆಕಗ್‌ನಿಷನ್ ಕೊಟ್ಟಿದ್ದೀರಿ. ಡೀ ರೆಕಗ್ನಿಷನ್ ಮಾಡುವ ಕಾರಣಗಳಾದರೂ ಏನು? ನಂತರ ಒಂದೆರಡು ತಿಂಗಳಲ್ಲಿ ರೆಕಗ್‌ನಿಷನ್ ಮಾಡುವುದಕ್ಕೆ ಕಾರಣಗಳೇನು ಎಂದು ಕೇಳುತ್ತೇನೆ. ಏತಕ್ಕೆ ಈ ರೀತಿಯಾಗುತ್ತಿದೆ? ಡೀ ರೆಕಗ್‌ನಿಷನ್ ಮಾಡಿದ ತಕ್ಷಣ ರೆಕಗ್‌ನಿಷನ್ ಕೊಟ್ಟಿರತಕ್ಕ ಉದಾಹರಣೆಗಳು ಬೇಕಾದಷ್ಟಿವೆ. ಇನ್ನು ಜಯಲಕ್ಷ್ಮಿ ಶಾಲೆ, ಎಂಬ ಒಂದು ಶಾಲೆಯನ್ನು ಡೀ ರೆಕಗ್‌ನೈಸ್ ಮಾಡಿದ್ದಾರೆ. ಆ ಶಾಲೆಯಲ್ಲಿ ಹೆಲ್ಪರ್ ಚಿಕ್ಕಮ್ಮ ಎಂಬ ಹೆಸರಿನಲ್ಲಿ ತಿಂಗಳಿಗೆ ೨೦೦ ರೂಪಾಯಿಯಂತೆ ೧೬ ವರ್ಷಗಳ ಕಾಲ ತೆಗೆದುಕೊಂಡಿದ್ದಾರೆ ಮತ್ತು ರಾಜಮ್ಮನವರ ಸಿಗ್ನೇಚರ್ ಹಾಕಿಸಿ ೩೦ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಎಲ್ಲ ವಿವರಗಳನ್ನು ಈಗ ಕೊಡುವುದಕ್ಕೆ ಕಾಲಾವಕಾಶ ಇಲ್ಲದಿರುವುದರಿಂದ ಯಾವ ರೀತಿ ನಡೆಯುತ್ತಿದೆ, ಯಾವ ರೀತಿ ಹಣ ಲೂಟಿಯಾಗುತ್ತಿದೆ ಎಂಬ ಬಗ್ಗೆ ಸೂಕ್ಷ್ಮವಾಗಿ ಹೇಳಿದ್ದೇನೆ. ಇನ್ನು ಪಿ.ಯು.ಸಿ. ಬಗ್ಗೆ ಹೇಳುವುದಾದರೆ. ಪ್ರಥಮ ವರ್ಷದ ಪಿ.ಯು.ಸಿ. ಪರೀಕ್ಷೆಯನ್ನು ರದ್ದು ಮಾಡಲು ಉದ್ದೇಶಿಸಿದ್ದೇವೆಂದು ಹೇಳಿಕೆ ಕೊಟ್ಟಿರಿ. ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವವರು ಯಾರು? ಪಾಲಿಸಿ ಡಿಸಿಷನ್ ಸರ್ಕಾರದಿಂದ ಆಗಿದೆಯೆ? ಕೆಲವರು ಎರಡನೇ ವರ್ಷದ ಪಿ.ಯು.ಸಿ. ಯನ್ನು ರದ್ದು ಮಾಡಬೇಕೆಂದರು. ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳುತ್ತಿದ್ದರೆ, ಯಾವ ನೀತಿಯ ಮೇಲೆ ನಿರ್ಣಯ ತೆಗೆದುಕೊಳ್ಳುತ್ತೀರಿ? ಈ ಬಗ್ಗೆ ಸರ್ಕಾರದ ನೀತಿ ಏನು ಎಂದು ಹೇಳಬೇಕು. ಪರೀಕ್ಷಾ ಮಂಡಲಿಯ ವಿರುದ್ಧ ಉಪಾಧ್ಯಾಯರುಗಳು ಬಹಿಷ್ಕಾರ ಮಾಡಿದ್ದು ಗೊತ್ತಿದೆ, ಅದಕ್ಕೆ ಇವತ್ತು ಹಣ ಇಲ್ಲ ಎಂದು ಹೇಳುತ್ತೀರಿ. ನೂರಕ್ಕೆ ೮೫ರಷ್ಟು ಮಂದಿ ಹುಡುಗರು ಪರೀಕ್ಷೆ ಫೀಸ್ ಕೊಡುವುದಿಲ್ಲ. ಚೀಪ್ ಪಾಪ್ಯುಲಾರಿಟಿ ತೆಗೆದುಕೊಳ್ಳಬೇಕೆಂದು ಫೀ ರದ್ದು ಮಾಡಿದಿರಿ. ಇವತ್ತು ಹುಡುಗರು ಫೀಸ್ ಕೊಡುವುದಿಲ್ಲ. ಆದರೆ ಇದನ್ನು ರೀ ಇಂಬರ್ಸ್ ಮಾಡತಕ್ಕದ್ದು ನಿಮ್ಮ ಕರ್ತವ್ಯ ಅಲ್ಲವೆ? ಏಕೆ ಮಾಡುತ್ತಿಲ್ಲ? ಇದರಿಂದ ಎಷ್ಟು ತೊಂದರೆಯಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತಂದೆ. ಇನ್ನು ಮಾನ್ಯ ಸುಬ್ಬಯ್ಯಶೆಟ್ಟರಿಗೆ ಮೊದಲು ತಮ್ಮ ಸಹಾಯಕರನ್ನು ಸರಿಮಾಡಬೇಕೆಂದು ಹೇಳುತ್ತೇನೆ. ಕೆಲವು ಪಿ.ಎ.ಗಳು (ಅವರ ಹೆಸರು ಹೇಳುವುದಿಲ್ಲ) ಹೇಗೆ ಮಾಡುತ್ತಾ

ರೆಂದರೆ, ನಿಮಗಿಂತ ಜಾಸ್ತಿಯಾಗಿ ಕೆಲಸ ಮಾಡುತ್ತಾರೆ. ಮಿನಿಸ್ಟರ್ ಎಂಬತಕ್ಕ ರೀತಿಯಲ್ಲಿ ಅಧಿಕಾರಿಗಳನ್ನು ಹೆದರಿಸತಕ್ಕದ್ದು, ಟ್ರಾನ್ಸ್‌ಫರ್ ವಿಚಾರದಲ್ಲಿ ಕೈಹಾಕತಕ್ಕದ್ದು ಮಾಡುತ್ತಾರೆ. ಬೇಕಾದರೆ ಹೆಸರು ಹೇಳಿ ಎಂದರೆ ಪ್ರತ್ಯೇಕವಾಗಿ ಹೇಳುತ್ತೇನೆ. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮೊನ್ನೆ ಲೋಕಸಭೆಯಲ್ಲಿ ಇಂಟ್ರಡ್ಯೂಸ್ ಮಾಡಿದರು. ಅದರ ಬಗ್ಗೆ ತಮ್ಮ ನಿಲುವು ಏನು ಎಂದು ಗೊತ್ತಾಗಲಿಲ್ಲ ೮+೪+೨ ಮಾಡುತ್ತಿರೋ ಅಥವಾ ೮+೨ ಮಾಡುತ್ತೀರೊ? ಈ ಬಗ್ಗೆ ಕರ್ನಾಟಕದ ನೀತಿ ಏನು ಎಂಬುದನ್ನು ತಮ್ಮ ಉತ್ತರದಲ್ಲಿ ಹೇಳಬೇಕೆಂದು ಹೇಳುತ್ತಾ ದಲಿತ ಸಾಹಿತ್ಯದ ಬಗ್ಗೆ ಹೇಳಬಯಸುತ್ತೇನೆ. ಆ ಬಗ್ಗೆ ಭಾರೀ ಕೂಗು ಕೇಳಿಬರುತ್ತಿದೆ. ಪುಸ್ತಕಗಳನ್ನು ಕೊಂಡುಕೊಳ್ಳುವಾಗ ಅವರ ಕಡೆ ಗಮನ ಹೋಗುವುದಿಲ್ಲವೆಂದು ಕಾಣುತ್ತದೆ. ದಲಿತ ಸಾಹಿತಿಗಳು ಬೇಕಾದಷ್ಟು ಮಂದಿ ಇದ್ದಾರೆ, ದುರ್ಗದ ರಾಜೇಗೌಡರು ಇದ್ದಾರೆ. ೮೦ ಲಕ್ಷ ರೂಪಾಯಿಗಳನ್ನು ಪುಸ್ತಕಗಳನ್ನು ಕೊಳ್ಳುವುದಕ್ಕೆ ಖರ್ಚು ಮಾಡುವಾಗ ದಲಿತ ಸಾಹಿತ್ಯ ಯಾವುದೇ ಆಗಲಿ ಕೊನೆಪಕ್ಷ ೧೦೦೦ ಪುಸ್ತಕಗಳನ್ನಾದರೂ ಕೊಂಡು ಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ಮಂಡ್ಯದಲ್ಲಿರುವ ಸರ್ಕಾರಿ ಮಹಿಳಾ ಬಗ್ಗೆ ಕಾಲೇಜಿನ ಬಗ್ಗೆ ಮಾನ್ಯ ಚೌಡಯ್ಯನವರು ಏನು ರೆಫರ್ ಮಾಡಿದರು ಅದರ ರೆಕಗ್‌ನಿಷನ್ ಅನ್ನು ತೆಗೆದು ಹಾಕುವುದಕ್ಕೆ ಹೊರಟಿದ್ದಾರೆ. ಅದು ಆ ರೀತಿ ಆಗದಹಾಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ ರಾಮಯ್ಯ (ಶೃಂಗೇರಿ).—ಸ್ವಾಮಿ, ಮಾನ್ಯ ವಿದ್ಯಾಮಂತ್ರಿಯವರು ಈ ಸಭೆಯ ಮುಂದೆ ಮಂಡಿಸಿಗತಕ್ಕಂಥ ಈ ಒಂದು ಬೇಡಿಕೆಯನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ಆದರೆ ಇದು ಬಹಳ ಕಡಿಮೆ ಗಾತ್ರದ ಬೇಡಿಕೆಯಾಗಿದೆ, ಇದು ಇನ್ನೂ ದೊಡ್ಡ ಗಾತ್ರದ್ದು ಆಗಬೇಕಾಗಿತ್ತು ಎಂದು ನಾನು ಆಶಿಸುತ್ತೇನೆ. ಕಾರಣವಿಷ್ಟೆ ಇಡೀ ದೇಶದಲ್ಲಿ ಮೇಧಾವಿಗಳನ್ನು, ಬುದ್ಧಿವಂತರನ್ನು ತಯಾರು ಮಾಡತಕ್ಕಂಥ ಕೆಲಸ ತಮ್ಮ ಕೈಯಲ್ಲಿ ಇದೆ. ಬಹಳ ದಿವಸಗಳಿಂದಲೂ ಈ ಸಭೆಯಲ್ಲಿ ಎರಿಗೆ ಖಾತೆಯ ಬೇಡಿಕೆಗಳನ್ನು, ಹಾಗೂ ಇನ್ನಿತರ ಖಾತೆಗಳ ಬೇಡಿಕೆಗಳನ್ನು ಇಟ್ಟು ಅನುಮೋದನೆಯದ್ದು ಪಡೆದಿದ್ದಾರೆ. ಈ ದೃಷ್ಟಿಯಲ್ಲಿ ಹೇಳುವುದಾದರೆ ತಮ್ಮ ಇಲಾಖೆ ಬಹಳ ದೊಡ್ಡ ಇಲಾಖೆಯಾಗಿದೆ. ದೇಶಕ್ಕೆ ಬೇಕಾದ ಉನ್ನತ ವ್ಯಕ್ತಿಗಳನ್ನು ತಯಾರು ಮಾಡತಕ್ಕಂಥ ಖಾತೆಯಾಗಿದೆ. ಈ ಖಾತೆಯಲ್ಲಿ ಇರತಕ್ಕ ಲೋಪದೋಷಗಳ ಬಗ್ಗೆ ಹಾಗೂ ಅದಕ್ಕೆ ಕಾರಣರಾಗಿರತಕ್ಕಂಥ ವ್ಯಕ್ತಿಗಳನ್ನು ಕುರಿತು ಕೆಲವು ಮಾನ್ಯಸದಸ್ಯರುಗಳು ಮಾತನಾಡಿದ್ದಾರೆ. ನಾನಾದರೂ ಕೂಡ ಇದರಲ್ಲಿ ಅಂತಹ ವ್ಯಕ್ತಿಗಳನ್ನು ಗುರುತಿಸಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಈ ಸದನದಲ್ಲಿ ಯಾವುದೇ ವ್ಯಕ್ತಿಯನ್ನು ಮೂದಲಿಸಿ ಮಾತನಾಡತಕ್ಕಂಥಾದ್ದು ಸುಲಭಸಾಧ್ಯವಾದರೂ, ಅಂತಹ ವ್ಯಕ್ತಿಗಳನ್ನು ತಮ್ಮ ಗಮನಕ್ಕೆ ತಂದಾಗ, ತಾವು ಪೋಲೀಸ್ ಖಾತೆಯ ಗುಪ್ತ ವಲಯಗಳಲ್ಲಿ ಕೆಲಸಮಾಡಿ ಬಂದು, ಈಗ ವಿದ್ಯಾಖಾತೆಯನ್ನು ವಹಿಸಿಕೊಂಡಿರುವುದರಿಂದ, ಅಂತಹ ವ್ಯಕ್ತಿಗಳ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾನಾದರೂ ಭಾವಿಸುತ್ತೇನೆ. ತಾವು ಸಮರ್ಥರಾದ ಮಂತ್ರಿಗಳಾಗಿದ್ದೀರಿ. ವಿದ್ಯಾ ಇಲಾಖೆಯನ್ನು ಒಂದು ವರ್ಷದಿಂದ ದಕ್ಷತೆಯಿಂದ ನಡೆಸಿಕೊಂಡು ಬರುತ್ತಿದ್ದೀರಿ. ಮೊನ್ನೆ ದಿವಸ ಉಪಾಧ್ಯಾಯರು ಮೌಲ್ಯಮಾಪನ ಮಾಡುವ ಬಗ್ಗೆ ಸಕಾಲದಲ್ಲಿ ಇಲ್ಲಿ ದಿಟ್ಟವಾದ ನಿಲುವನ್ನು ತೆಗೆದುಕೊಂಡಿದ್ದೀರಿ. ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ತಮ್ಮ ಇಲಾಖೆಯಲ್ಲಿ ತಾವೂ ಇನ್ನೂ ಮಾಡಬೇಕಾದ ಕೆಲಸಗಳು ಬಹಳ ಇದೆಯೆಂದು ನಾನಾದರೂ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ವಿಶ್ವವಿದ್ಯಾನಿಲಯದ ಶಿಕ್ಷಣದ ಬಗ್ಗೆ ನಮ್ಮ ಅನೇಕ ಮಾನ್ಯ ಸ್ನೇಹಿತರು ಮಾತನಾಡಿದ್ದಾರೆ. ನಾನು ಹಳ್ಳಿಗಾಡಿನ ರೈತನ ಕುಟುಂಬದಿಂದ ಬಂದಿರತಕ್ಕವನಾದ್ದರಿಂದ ಹಳ್ಳಿಗಳಲ್ಲಿ ಮಕ್ಕಳ ವಿದ್ಯಾಭ್ಯಾಸ ಯಾವರೀತಿ ನಡೆಯುತ್ತಿದೆ ಎಂಬುದರ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಮಕ್ಕಳು ಬೆಂಗಳೂರಿನಲ್ಲಿರುವಂತೆ ಕಾನ್‌ವೆಂಟ್ ಸ್ಕೂಲ್‌ಗಳಲ್ಲಾಗಲೀ ಅಥವಾ ಮಾನ್ಯ ಅನಂದರಾಯರು ಹೇಳಿದಂಥ ಶಾಲೆಗಳಲ್ಲಾಗಲೀ ವಿದ್ಯಾಭ್ಯಾಸ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಇವತ್ತಿನದಿವಸ ಹಳ್ಳಿಗಳಲ್ಲಿ ರೈತರು ಬಹಳ ಕಷ್ಟ ಪರಿಸ್ಥಿತಿಯಲ್ಲಿರುವುದರಿಂದ ಅವರು ತಮ್ಮ ಮಕ್ಕಳನ್ನು ಇಂತಹ ಶಾಲೆಗಳಿಗೆ ಕಳಿಸಿ ವಿದ್ಯಾಭ್ಯಾಸ ಕೊಡಲು ಸಾಧ್ಯವಿಲ್ಲವಾಗಿದೆ. ಆದ್ದರಿಂದ ಹಳ್ಳಿಗಳಲ್ಲಿ ರೈತರ ಮಕ್ಕಳಿಗೆ ಇದ್ದುದರಲ್ಲಿ ಯಾವರೀತಿ ವಿದ್ಯಾಭ್ಯಾಸವನ್ನು ಕೊಡಬೇಕೆಂಬುದನ್ನು ನಾವು ಇವತ್ತಿನದಿವಸ ಯೋಚನೆ ಮಾಡಬೇಕಾಗಿದೆ. ನಮ್ಮ ಮಲೆನಾಡು ಭಾಗದಲ್ಲಿ ಈಗಾಗಲೇ ಮಳೆ ಪ್ರಾರಂಭವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ರೈತರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವುದಕ್ಕೆ ಯಾವ ಒಂದು ವ್ಯವಸ್ಥೆಯೂ ಅಲ್ಲಿ

ಇಲ್ಲ. ಈ ಸಂದರ್ಭದಲ್ಲಿ ಪಟ್ಟಣಗಳ ಹತ್ತಿರ ವಾಸಮಾಡತಕ್ಕಂಥ ಉಪಾಧ್ಯಾಯರುಗಳು ಹಳ್ಳಿಗೆ ಬಂದು ಪಾಠ ಹೇಳುವುದಿಲ್ಲ. ಇದರಿಂದ ಶಾಲೆಗಳೆಲ್ಲಾ ಬಂದಾಗುತ್ತಿವೆ. ಇನ್ನೊಂದು ವಿಚಾರವೇನೆಂದರೆ ಈಗಾಗಲೇ ತಾವು ಉಪಾಧ್ಯಾಯರಿಗೆ ಕೆಲವೊಂದು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೀರಿ. ಅವುಗಳೆಲ್ಲಾ ಹೆಚ್ಚಾಗಿ ರಸ್ತೆಗಳ ಪಕ್ಕದಲೇ ಇವೆ. ಮಲೆನಾಡಿನಲ್ಲಿ ಈಗ ಮಳೆ ವಿಪರೀತವಾಗಿ ಬೀಳುತ್ತಿರುವುದರಿಂದ ಅಲ್ಲಲ್ಲಿ ಹಳ್ಳಗಳಲ್ಲಿ ನೀರು ತುಂಬಿಕೊಂಡು ಅದನ್ನು ದಾಟಿಕೊಂಡು ಶಾಲೆಗೆ ಬರುವುದಕ್ಕೆ ಸಾಧ್ಯವಿಲ್ಲವಾಗಿದೆ. ಅಲ್ಲಲ್ಲಿ ಹಳ್ಳಗಳ ಸಂಪರ್ಕದಿಂದಾಗಿ ೩ ತಿಂಗಳ ಕಾಲ ಜನಜೀವನ ಸ್ಥಗಿತಗೊಳ್ಳುವ ಸನ್ನಿವೇಶ ಇದೆ. ಆದ್ದರಿಂದ ಶಾಲೆಗಳ ಸಮೀಪದಲ್ಲಿ ಉಪಾಧ್ಯಾಯರಿಗೆ ವಸತಿಗೃಹಗಳನ್ನು ಕಟ್ಟಿಸಿಕೊಡುವುದಕ್ಕೆ ತಾವು ಇನ್ನು ಮುಂದೆ ವ್ಯವಸ್ಥೆ ಮಾಡಬೇಕೆಂದು ನಾನು ತಮಗೆ ಸಲಹೆ ಕೊಡುತ್ತಿದ್ದೇನೆ. ಈ ಬಗ್ಗೆ ಮಾನ್ಯ ಚೌಡಯ್ಯ ನವರು ಬಹಳ ಕಳಕಳಿಯಿಂದ ಹೇಳಿದ್ದಾರೆ. ಅದನ್ನು ನಾವೆಲ್ಲರೂ ಗಮನಿಸಿದ್ದೇವೆ, ಆದ್ದರಿಂದ ತಾವು ಈಕಡೆಗೆ ಹೆಚ್ಚು ಗಮನ ಕೊಡಬೇಕು. ಸ್ವಾಮಿ, ಈ ಅಸೆಂಬ್ಲಿ ಅಧಿವೇಶನ ಮುಗಿದನಂತರ ನಾವು ನಮ್ಮ ಕ್ಷೇತ್ರಗಳಿಗೆ ಹೋಗಿ ಕೆಲಸಮಾಡುತ್ತೇವೆ. ಆಗ ಪ್ರತಿಯೊಬ್ಬ ರೈತರು ನಮ್ಮಲ್ಲಿಗೆ ಬಂದು ಹೇಳತಕ್ಕಂಥ ಮೊದಲನೇ ಮಾತು ಎಂದರೆ ನಮ್ಮಲ್ಲಿ ಶಾಲೆ ಇಲ್ಲ, ಒಂದೊಂದು ಶಾಲೆ ಇದ್ದರೂ ಅವರಲ್ಲಿ ಒಬ್ಬೊಬ್ಬರೇ ಉಪಾಧ್ಯಾಯರು ಇದ್ದಾರೆ ಎಂದು ಹೇಳುತ್ತಾರೆ. ಅವರಿಗೆ ತಮ್ಮ ಮಕ್ಕಳು ಓದಿ ವಿದ್ಯಾವಂತರಾಗಬೇಕೆಂಬ ಹಂಬಲ ಹೆಚ್ಚಿನ ರೀತಿಯಲ್ಲಿ ಇದೆ. ಇದಕ್ಕಾಗಿ ಅವರು ಹೊಟ್ಟೆಬಟ್ಟೆ ಕಟ್ಟಿ ತಮ್ಮ ಖರ್ಚುಗಳನ್ನು ಕಡಿಮೆ ಮಾಡಿಕೊಂಡು. ಮಕ್ಕಳನ್ನು ಓದಲಿಕ್ಕೆ ಶಾಲೆಗೆ ಕಳಿಸುತ್ತಿದ್ದಾರೆ. ಆ ಮಕ್ಕಳಿಗೆ ಶಾಲೆಗಳಲ್ಲಿ ಸರಿಯಾದ ವಿದ್ಯಾಭ್ಯಾಸ ದೊರೆಯುತ್ತಿಲ್ಲವಲ್ಲ ಎಂದು ಅವರು ಇವತ್ತಿನದಿವಸ ಕಣ್ಣೀರು ಇಡುತ್ತಿದ್ದಾರೆ. ಇವತ್ತಿನದಿವಸ ಅವರಿಗೆ ಆಸ್ತಿಪಾಸ್ತಿ ಸಂಪಾದನೆ ಮಾಡ ವುದಕ್ಕೆ ಆಸೆ ಇಲ್ಲ, ನಮ್ಮ ಮಕ್ಕಳೇ ನಮಗೆ ಆಸ್ತಿ, ಅವರು ಶಾಲೆಗಳಲ್ಲಿ ಚನ್ನಾಗಿ ಕಲಿತು ವಿದ್ಯಾವಂತರಾದರೆ ಸಾಕು ' ಎಂದು ಅವರು ಹೇಳುತ್ತಾರೆ. ಆದ್ದರಿಂದ ಈ ದಿಶೆಯಲ್ಲಿ ಸರ್ಕಾರದವರು ಹೆಚ್ಚು ಗಮನ ಹರಿಸಿ ಅಲ್ಲಿ ಶಾಲೆಗಳನ್ನು ಕಟ್ಟಿಸಿಕೊಟ್ಟು, ಹೆಚ್ಚು ಉಪಾಧ್ಯಾಯರುಗಳನ್ನು ನೇಮಿಸಿ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಒದಗಿಸಿಕೊಡಲು ವ್ಯವಸ್ಥೆ ಮಾಡಿದರೆ ಮಕ್ಕಳ ತಂದೆತಾಯಿಗಳು ನಿಜವಾಗಿಯೂ ಈ ವಿಚಾರದಲ್ಲಿ ಹೆಮ್ಮೆ ಪಟ್ಟುಕೊಳ್ಳುತ್ತಾರೆ. ಇವತ್ತು ಯಾವುದೇ ಹಳ್ಳಿಯಲ್ಲೂ ಸಹ ಉಪಾಧ್ಯಾಯರುಗಳು ಇಲ್ಲದೇ ಶಾಲೆಗಳು ಬಾಗಿಲು ಹಾಕಿವೆ. ಇವತ್ತಿನ ದಿವಸ ವಿದ್ಯಾವಂತ ನಿರುದ್ಯೋಗಿ ಪದವಿ ಧರರುಗಳು ಹಳ್ಳಿಗಳ ಪ್ರೈಮರಿ ಸ್ಕೂಲುಗಳಲ್ಲಿ ಕೆಲಸಮಾಡುವುದಕ್ಕೆ ಮುಂದೆ ಬರುತ್ತಿದ್ದರೂ ಕೂಡ ಸರ್ಕಾರದವರು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಹೋಗುತ್ತಾ ಇಲ್ಲ. ಡಿ.ಎಲ್ ಆರ್.ಸಿ. ಕಮಿಟಿಗಳ ರಚನೆಯಾಗಿಲ್ಲ ಎಂದು ಅವರು ಹೇಳುತ್ತಿದ್ದಾರೆ. ನನಗೆ ತಿಳಿದಮಟ್ಟಿಗೆ ಅವು ರಚನೆಯಾಗಿವೆ. ಅವರೂ ಈ ಉಪಾಧ್ಯಾಯರನ್ನು ನೇಮಿಸತಕ್ಕಂಥ ಕೆಲಸವನ್ನು ಮಾಡಲು ನಿಧಾನ ಮಾಡುತ್ತಿದ್ದಾರೆ. ಈಗ ೨೨ನೇ ತಾರೀಖಿನ ಹೊತ್ತಿಗೆ ಎಲ್ಲಾ ಕಡೆ ಶಾಲೆಗಳ ಬಾಗಿಲು ತೆರೆಯುತ್ತಿವೆ. ಈ ಸಂದರ್ಭದಲಿ ತಾವು ಹೆಚ್ಚು ಸಂಖ್ಯೆಯಲ್ಲಿ ಉಪಾಧ್ಯಾಯರನ್ನು ನೆ ಮಿಸಿ ಶಾಲೆಗಳಲ್ಲಿ ಮಕ್ಕಳಿಗೆ ಉನ್ನತರೀತಿಯಲ್ಲಿ ವಿದ್ಯಾಭ್ಯಾಸ ದೊರೆಯುವುದಕ್ಕೆ ಅವಕಾಶ ಮಾಡಿಕೊಡಬೆ ಕೆಂದು ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈ ಒಂದು ಸಮಸ್ಯೆಯನ್ನು ಎಷ್ಟು ಬೇಗ ಬಗೆಹರಿಸುತ್ತಿರೋ ಅಷ್ಟು ಒಳ್ಳೆಯದು. ನಮ್ಮ ರಾಜ್ಯನಲ್ಲಿ ದೀನದಲಿತರ ಮಕ್ಕಳು ಹಾಗೂ ಬಡವರ ಮಕ್ಕಳಿಗೆ ಉಚಿತ ಶಿಕ್ಷಣವನ್ನು ಕೊಡಲು ತಾವು ಏರ್ಪಾಡು ಮಾಡಿದ್ದೀರಿ ತಾವು ಈ ಬಗ್ಗೆ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಮಾನ್ಯ ರಾಮದೇವ್‌ರವರು ಮಾತನಾಡತಕ್ಕಂಥ ಕಾಲದಲ್ಲಿ ' ಇದೆಲ್ಲವನ್ನು ಪಾಪ್ಯುಲಾರಿಟಿ ದೃಷ್ಟಿಯಿಂದ ಮಾಡಿದ್ದಾರೆ' ಎಂದು ಹೇಳಿದರು. ನಾನಾದರೂಕೂಡ ಅವರು ಹಾಗೆ ಹೇಳಿರತಕ್ಕಂಥಾದ್ದು ಸರಿಯಲ್ಲ ಎಂದು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಅವರಿಗೆ ಉಚಿತ ಶಿಕ್ಷಣವನ್ನು ಕೊಡತಕ್ಕಂಥ ದಿಶೆಯಲ್ಲಿ ಏನು ಒಂದು ಸಣ್ಣ ಕೊರತೆ ಇದೆ ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಅಪೇಕ್ಷೆ ಪಡುತ್ತೇನೆ. ಅವರು ಈ ವಿಚಾರದಲ್ಲಿ ಇನ್‌ಕಂ ಸರ್ಟಿಫಿಕೇಟನ್ನು ಶಾಲೆಗೆ ಕೊಡಬೇಕೆಂದು ತಾವು ಹೇಳಿದ್ದೀರಿ. ಆ ಸರ್ಟಿಫಿಕೇಟ್‌ನ್ನು ತಹಶೀಲ್ದಾರ್‌ರವರು ಕೊಡುವುದಕ್ಕೆ ತಾವು ವ್ಯವಸ್ಥೆ ಮಾಡಿದ್ದೀರಿ. ಇದರಲ್ಲಿ ಆ ರೈತರು ವಿಲೇಜ್ ಅಕೌಂಟೆಂಟ್, ರೆವೆನ್ಯೂ ಇನ್ಸ್‌ಪೆಕ್ಟರ್ ಹತ್ತಿರ ಹೋಗಿ ಅವರಿಂದ ಬರೆಸಿಕೊಂಡು ಬಂದು ಆನಂತರ ತಹಶೀಲ್ದಾರರಿಂದ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾಗಿದೆ. ಈ ದಿಶೆಯಲ್ಲಿ ರೈತರುಗಳು ತಮ್ಮ ಕೆಲಸಕಾರ್ಯಗಳನ್ನೆಲ್ಲಾ ಬಿಟ್ಟು ಅವರ ಹತ್ತಿರ ಹೋಗಿ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾದರೆ ಕಷ್ಟವಾಗುತ್ತಾ ಇದೆ. ಇದನ್ನು ಆದಷ್ಟು ತಪ್ಪಿಸಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ನನ್ನ ಸಲಹೆ ಏನೆಂದರೆ ಆಯಾಯ ಕ್ಷೇತ್ರದಲ್ಲಿ ನಮ್ಮ ಶಾಸಕರಿಗೆ

ಯಾರ್ರ್ಯಾರ ಉತ್ಪತ್ತಿ ಎಷ್ಟಿದೆ, ಇನ್‌ಕಂ ಏನಿದೆ ಎಂಬ ವಿಷಯ ಗೊತ್ತಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಶಾಸಕರಿಂದ ಈ ಒಂದು ಸರ್ಟಿಫಿಕೇಟನ್ನು ತಂದು ಕೊಡಬೇಕು ಎನ್ನತಕ್ಕಂಥ ಒಂದು ನಿರ್ದೇಶನವನ್ನು ಕೊಟ್ಟರೆ ಅವರಿಗೆ ಅದರಿಂದ ಅನುಕೂಲವಾಗುತ್ತದೆ. ಸ್ವಾಮಿ. ಮತ್ತೊಂದು ವಿಚಾರವೇನೆಂದರೆ ನಮ್ಮ ಕ್ಷೇತ್ರದಲ್ಲಿ ಒಬ್ಬರು ಸ್ಕೂಲ್ ಇನ್ಸ್‌ಪೆಕ್ಟರ್ ಇದ್ದಾರೆ. ಅವರು ಎಲ್ಲಾ ಸ್ಕೂಲ್‌ಗಳಲ್ಲಿ ತಮ್ಮ ಪ್ರಭುತ್ವ ವನ್ನು ನಡೆಸುತ್ತಿದ್ದಾರೆ ೮ ವರ್ಷಗಳಿಂದ ಅವರು ಒಂದೇ ಊರಿನಲ್ಲಿ ಇದ್ದಾರೆ. ಈಗಾಗಲೇ ಅವರನ್ನು ಬದಲಾಯಿಸಬೇಕೆಂದು ನಾವು ಸರ್ಕಾರದವರಲ್ಲಿ ಕೇಳಿಕೊಂಡಿದ್ದೇವೆ. ಅವರು ಈಗ ವಿಧಾನಸೌಧದಲ್ಲಿ ಸುತ್ತಾಡುತ್ತಿದ್ದಾರೆ. ಇದನ್ನು ತಾವು ಗಮನಿಸಬೇಕು, ಅವರು ೮ ವರ್ಷಗಳಿಂದ ಒಂದೇ ಊರಿನಲ್ಲಿ ಇದ್ದುಕೊಂಡು ಬಡರೈತರಿಗೆ ಮತ್ತು ಇನ್ನಿತರ ಉಪಾಧ್ಯಾಯರುಗಳಿಗೆ ತೊಂದರೆಯನ್ನು ಕೊಡುತ್ತಿದ್ದಾರೆ ಅಲ್ಲಿ ಉಪಾಧ್ಯಾಯರುಗಳು ತುಂಬಾ ನೋವನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ತಾವು ಆದಷ್ಟು ಬೇಗ ಅವರನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡಿ, ಅವರ ನೋವನ್ನು ಬಗೆಹರಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆಮಾಡುತ್ತೇನೆ. ಸ್ವಾಮಿ, ತಮ್ಮ ವಿದ್ಯಾ ಇಲಾಖೆಯಲ್ಲಿ ಇರತಕ್ಕಂಥ ಇನ್ನೊಂದು ಧಾರುಣ ಪರಿಸ್ಥಿತಿ ಏನೆಂದರೆ ತಮ್ಮ ಇಲಾಖೆಯಲ್ಲಿ ಒಬ್ಬ ಒಂದು ಸಾರಿ ಉಪಾಧ್ಯಾಯನಾಗಿ ನೇಮಕಗೊಂಡರೆ ರಿಟೈರ್ಡ್ ಆಗುವವರೆಗೂ ಅದೇ ಪೋಸ್ಟ್‌ನಲ್ಲಿ ಇರಬೇಕಾಗಿದೆ. ಅವರಿಗೆ ಯಾವ ಪ್ರಮೋಷನ್ ಇರುವುದಿಲ್ಲ. ಬೇರೆ ಇಲಾಖೆಗಳಲ್ಲಿ ಕ್ಲರ್ಕ್ ಆಗಿ ಸೇರಿಕೊಂಡಂಥವರಿಗೆ ಪ್ರಮೋಷನ್ ಸಿಕ್ಕತಕ್ಕಂಥ ವ್ಯವಸ್ಥೆ ಇದೆ. ಅವರಿಗೆ ರೆವಿನ್ಯೂ ಇನ್ಸ್‌ಪೆಕ್ಟರ್, ಶಿರಸ್ತೇದಾರ್, ತಹಶೀಲ್ದಾರ್ ಆಗಿ ರಿಟೈರ್ಡ್ ಆಗತಕ್ಕಂಥ ಒಂದು ಅವಕಾಶ ಇದೆ. ಒಂದು ಪ್ರೈಮರಿ ಶಾಲೆಯಲ್ಲಿ ಒಬ್ಬ ೩೦ ವರ್ಷಗಳ ಕಾಲ ಉಪಾಧ್ಯಾಯನಾಗಿ ಕೆಲಸಮಾಡಿಕೊಂಡು ಬಂದು ಕೊನೆ ಗಳಿಗೆಯಲ್ಲಿ ಆದರೂ ಅವನಿಗೆ ಪ್ರಮೋಷನ್ ಇಲ್ಲ ಎಂದರೆ ಇದು ಎಂತಹ ಧಾರುಣವಾದ ಪರಿಸ್ಥಿತಿ ಎಂಬುದನ್ನು ತಾವು ಯೋಚನೆ ಮಾಡಬೇಕು. ಅವರು ಜೀವನದಲ್ಲಿ ಯಾವ ಒಂದು ಆಸ್ತಿಯನ್ನೂ ಮಾಡಿರುವುದಿಲ್ಲ. ಹೀಗಿರುವಾಗ ಕೊನೆಯಪಕ್ಷ ಹೆಡ್‌ಮಾಸ್ಟರ್ ಆಗಿ ಪ್ರಮೋಷನ್ ಸಿಕ್ಕತಕ್ಕಂಥ ವ್ಯವಸ್ಥೆಯಾದರೂ ಇರಬೇಕು. ಪ್ರೈಮರಿ ಶಾಲೆಗಳಲ್ಲಿ ಕಡೆಯವರೆಗೂ ಸಾಮಾನ್ಯ ಉಪಾಧ್ಯಾಯನಾಗಿಯೇ ರಿಟೈರ್ಡ್ ಆಗತಕ್ಕಂಥ ವ್ಯವಸ್ಥೆ ಆಗಬಾರದು. ಈ ಬಗ್ಗೆ ಮಾನ್ಯ ವಿದ್ಯಾಮಂತ್ರಿಯವರು ಆಸಕ್ತಿ ವಹಿಸಿ, ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಬಸವನಗುಡಿ).—ಸನ್ಮಾನ್ಯ ಅಧ್ಯಕ್ಷರೇ, ನನಗೆ ಸಮಯ ಅಭಾವ ವಿರುವುದರಿಂದ ಕೆಲವು ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ವಿಧ್ಯಾಭ್ಯಾಸಕ್ಕಾಗಿ ಬೇರೆ ಇಲಾಖೆಗಳ ಬೇಡಿಕೆಗಳಲ್ಲಿನ ಹಣವನ್ನು ಖೋತಾ ಮಾಡಿ ಸಾಕಾದಷ್ಟು ಹಣ ವನ್ನು ಈ ಇಲಾಖೆಗೆ ಕೊಡುತ್ತಿದ್ದೇವೆ. ಆದರೂ ಇದರ ಪರಿಣಾಮವಾಗಿ ಸಿಗಬೇಕಾದ ಪ್ರತಿಫಲ ಸಿಗದೇ ಇರುವುದಕ್ಕಾಗಿ ವ್ಯಥೆ ಪಡಬೇಕಾಗಿದೆ. ಮುಖ್ಯವಾಗಿ ಯಾವ ಖಾಸಗಿ ಶಾಲೆಯವರು ಹೆಚ್ಚಿನ ಮಟ್ಟದಲ್ಲಿ ಫೀಜು ಮತ್ತು ಡೊನೇಷನ್ ತೆಗೆದುಕೊಳ್ಳುತ್ತಿದ್ದಾರೆ; ಅವರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿಲ್ಲ. ಎರಡನೆಯದಾಗಿ ಹಣವೇನೋ ಹೆಚ್ಚಿಗೆ ಖರ್ಚಾಗುತ್ತಿದೆ; ಮಕ್ಕಳ ಸಂಖ್ಯೆಯೂ ಕೂಡ ಜಾಸ್ತಿಯಾಗುತ್ತದೆ; ಆದರೆ ಸರ್ಕಾರ ವಿದ್ಯಾಭ್ಯಾಸದ ಗುಣ ಮಟ್ಟದ ಕಡೆಗೆ ಗಮನಕೊಡದೇ ಇರ ತಕ್ಕದ್ದು ಬಹಳ ಶೋಚನೀಯವಾದ ವಿಚಾರ. ಅಲ್ಲದೆ, ಉದ್ಯೋಗವನ್ನು ಒದಗಿಸಿಕೊಡತಕ್ಕ ವಿದ್ಯಾ ಭ್ಯಾಸವನ್ನು ಇವತ್ತು ನಾವು ಕೊಡುತ್ತಿಲ್ಲ.

ನಮ್ಮ ವಿದ್ಯಾಭ್ಯಾಸ ಮಾಧ್ಯಮ ಕನ್ನಡ ಭಾಷೆ ಮೂಲಕ ಆಗಬೇಕು ಎನ್ನುವ ದಿಸೆಯಲ್ಲಿಯೂ ಕೂಡ ನಾವು ಸಾಕಷ್ಟು ಮುಂದೆ ಹೋಗಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ನಮಗೆ ಸ್ವಾತ್ರಂತ್ರ್ಯ ಬಂದು ಸುಮಾರು ೩೨ ವರ್ಷಗಳಾಗಿದೆ. ಇಲ್ಲಿಗೆ ಸುಮಾರು ೧೧ ಜನ ವಿದ್ಯಾಮಂತ್ರಿ ಗಳಾಗಿದ್ದಾರೆ. ಶ್ರೀಮಾನ್ ಎ.ಜಿ. ರಾಮಚಂದ್ರ ಅವರಿಂದ ಪ್ರಾರಂಭವಾಗಿ ಈ ಇಲಾಖೆ ಇವತ್ತು ಶ್ರೀಮಾನ್ ಸುಬ್ಬಯ್ಯಶೆಟ್ಟರ ಅಧೀನದಲ್ಲಿದೆ. ಮಾನ್ಯ ಸುಬ್ಬಯ್ಯ ಶೆಟ್ಟರು ಯಾವ ಮಂತ್ರಿಗಳಿಗೂ ಕಡಿಮೆ ಇಲ್ಲದಂತೆ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಆದರೂ ನಾನಾಕಾರಣಗಳಿಂದ ವಿದ್ಯಾಭ್ಯಾಸ ಇಲಾಖೆಯಲ್ಲಿ ಅದು ಸಫಲವಾಗದೆ ಇದೆ. ಅಂದಮಾತ್ರಕ್ಕೆ ಪ್ರಗತಿಯಾಗಿಲ್ಲವೆಂದು ಭಾವಿಸಬಾರದು. ಸಾಕಷ್ಟು ಪ್ರಗತಿ ಕೂಡ ಆಗಿದೆ.

ಮಾನ್ಯ ಆನಂದರಾಯರು ವಿದ್ಯಾಭ್ಯಾಸದ ವಿಚಾರದಲ್ಲಿ ಸಾಕಷ್ಟು ಪರಿಣತೆಯನ್ನು ಹೊಂದಿದವರು; ಅವರು ಸಾಕಷ್ಟು ಆರೋಪಗಳನ್ನು ಮಾಡಿದ್ದಾರೆ. ನಾನು ಕೂಡ ಸುಮಾರು ೪೨ ವರ್ಷಗಳ ಕಾಲ ಉಪಾಧ್ಯಾಯನಾಗಿ ಕೆಲಸ ಮಾಡಿದ್ದೇನೆ. ೧೦–೧೨ ವಿದ್ಯಾಸಂಸ್ಥೆಗಳಿಗೆ ಸೆಕ್ರಟರಿ ಅಥವಾ ಪ್ರೆಸಿಡೆಂಟ್ ಆಗಿದ್ದೇನೆ. ಮಾನ್ಯ ಆನಂದರಾಯರು ಮಾಡಿದಂಥ ಆರೋಪಗಳು ರಚನಾತ್ಮಕವಾಗಿದ್ದರೆ ಬಹಳ ಚನ್ನಾಗಿತ್ತೆಂದು ಕಾಣುತ್ತದೆ. ವಿದ್ಯಾಮಂತ್ರಿಗಳಿಗೆ ಅವರು ಮೊದಲು ತಿಳಿಸಿ; ಅವರು ಕ್ರಮ ತೆಗೆದುಕೊಳ್ಳದೇ ಇದ್ದಾಗ ಇಲ್ಲಿ ಆರೋಪ ಮಾಡಿದ್ದರೆ ಚನ್ನಾಗಿತ್ತು. ಅವರು ಮಾನ್ಯ ಮಲ್ಲಪ್ಪನವರ ವಿಚಾರ ಪ್ರಸ್ತಾಪ ಮಾಡಿದ್ದಾರೆ; ಅವರು ಕಾಮರ್ಸ್ ಎಜುಕೇಷನ್ ಕಾರ್ಯದರ್ಶಿಯಾಗಿದ್ದಾಗ ಗ್ರ್ಯಾಂಟ್ ವಿಚಾರದಲ್ಲಿ ನನಗೆ ಸಾಕಷ್ಟು ತೊಂದರೆ ಕೊಟ್ಟಿದ್ದಾರೆ. ಅವರು ಲಂಚರುಶುವತ್ತು ತೆಗೆದುಕೊಳ್ಳುತ್ತಾರೆಂದು ಹೇಳಿರತಕ್ಕದ್ದು ತಪ್ಪು ಎಂದು ಹೇಳುತ್ತೇನೆ. ೬ ಲಕ್ಷ ರೂಪಾಯಿಗಳನ್ನು ಅವರು ಗ್ರ್ಯಾಂಟ್ ರೂಪದಲ್ಲಿ ಕೊಡಬೇಕಾದರೆ, ಸಹಾಯಕ ವಿಧ್ಯಾಧಿಕಾರಿ, ವಿದ್ಯಾ ಇಲಾಖೆಯ ಉಪ ನಿರ್ದೇಶಕರವರಿಂದ ಶಿಫಾರಸ್ಸು ಬಂದಮೇಲೆ, ವಿದ್ಯಾ ಇಲಾಖೆಯ ಸಹಾಯಕ ನಿರ್ದೇಶಕರು ಒಪ್ಪಿಗೆಯನ್ನು ನೀಡಿ; ವಿದ್ಯಾಮಂತ್ರಿಗಳು ಮಂಜೂರು ಮಾಡುತ್ತಾರೆ. ಇಲ್ಲಿ ಮಲ್ಲಪ್ಪನವರು ಮಾಡುವುದಕ್ಕೆ ಬರುವುದಿಲ್ಲ. ಅವರೊಬ್ಬರ ಮೇಲೆ ಗೂಬೆ ಕೂರಿಸುವುದು ಸರಿಯಲ್ಲವೆಂದು ಹೇಳುತ್ತೇನೆ. ಈ ಮನೆಯಲ್ಲಿ ಆರೋಪಗಳನ್ನು ಯಾರ ಮೇಲೆ ಹೊರಿಸುತ್ತಾರೆ; ಅಂಥ ವ್ಯಕ್ತಿಗಳು ಇಲ್ಲಿರಬೇಕು; ಇಲ್ಲಿ ಇಲ್ಲದೇ ಇರತಕ್ಕ ವ್ಯಕ್ತಿಗಳ ಮೇಲೆ ಆರೋಪ ಮಾಡುವುದು ಸರಿಯಲ್ಲ. ತಮ್ಮ ಮೇಲೆ ಇರತಕ್ಕ ಆರೋಪಗಳು ಸರಿಯೋ ತಪ್ಪೋ ಎಂದು ಹೇಳುವುದಕ್ಕೆ ಅವಕಾಶ ಇರಬೇಕು. ಒಬ್ಬ ವ್ಯಕ್ತಿಯ ಮೇಲೆ ಸುಮ್ಮನೆ ಚಾಲೆಂಜ್ ಮಾಡತಕ್ಕದ್ದು ಸೂಕ್ತವಲ್ಲವೆಂದು ಹೇಳುತ್ತೇನೆ. ಎಲ್ಲ ಖಾಸಗೀ ಶಾಲೆಗಳು ಚನ್ನಾಗಿ ನಡೆಯುತ್ತವೆಂದು ಹೇಳುವುದಕ್ಕೆ ಹೋಗುವುದಿಲ್ಲ; ಖಾಸಗೀ ಶಾಲೆಗಳನ್ನು ನಡೆಸತಕ್ಕ ಎಲ್ಲರ ಮೇಲೆಯೂ ಆರೋಪ ಮಾಡುವುದು ಸರಿಯಲ್ಲ. ಕೆಲವು ಸಂಸ್ಥೆಗಳು ವ್ಯಾಪಾರಿ ಸಂಸ್ಥೆಗಳಾಗಿರತಕ್ಕಂಥ ನಿದರ್ಶನಗಳು ಇವೆ. ಇಲ್ಲ ಅಂಥ ನಾನು ಹೇಳುವುದಿಲ್ಲ. ಯಾರೋ ಮಾಡಿದ ತಪ್ಪಿಗೆ ಎಲ್ಲರನ್ನೂ ದೂಷಣೆ ಮಾಡುವುದು ಒಳ್ಳೆಯದಲ್ಲ. ತಪ್ಪು ಮಾಡಿದವರಿಗೆ ಸೂಕ್ತ ಶಿಕ್ಷೆ ಕೊಡಬೇಕೆನ್ನುವವರಲ್ಲಿ ನಾನೂ ಒಬ್ಬ.

ಸ್ವಾಮಿ, ೭ನೇ ತರಗತಿ ಹಾಗೂ ಪಿ.ಯು.ಸಿ. ತರಗತಿಗಳಿಗೆ ಇರತಕ್ಕ ಪಬ್ಲಿಕ್ ಪರೀಕ್ಷೆಗಳನ್ನು ರದ್ದು ಮಾಡುವ ವಿಚಾರ ತಿಳಿಯಿತು. ಪರೀಕ್ಷೆಗಳು ಇದ್ದರೆ; ಮಕ್ಕಳು ಓದಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದ್ದ ಪರೀಕ್ಷೆಗಳನ್ನು ತೆಗೆದರೆ; ಮಕ್ಕಳ ಭವಿಷ್ಯ ಹಾಳಾಗಿ ಹೋಗುತ್ತದೆ. ಸರ್ಕಾರ ತೀರ್ಮಾನ ತೆಗೆದುಕೊಳ್ಳುವ ಮುನ್ನ ಈ ವಿಚಾರದಲ್ಲಿ ಈ ಕ್ಷೇತ್ರದಲ್ಲಿ ಪರಿಣತೆಯನ್ನು ಹೊಂದಿರುವವರ ಜೊತೆ ವಿಚಾರ ವಿನಿಮಯ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮೊದಲಿಗೆ ಲೋಯರ್ ಸೆಕೆಂಡರಿ ಇತ್ತು; ಅದನ್ನು ತೆಗೆದು ೭ನೇ ತರಗತಿಗೆ ಪಬ್ಲಿಕ್ ಪರೀಕ್ಷೆ ತಂದರು; ಮೊದಲು ಇಂಟರ್‌ಮೀಡಿಯೇಟ್ ಎಂದು ಇದ್ದುದನ್ನು ತೆಗೆದು ಮತ್ತೆ ಪಿ.ಯು.ಸಿ. ತಂದರು ಈ ರೀತಿ ತೆಗೆಯೋದು; ಮತ್ತೆ ತರೋದು ನಡೆಯುತ್ತಿದೆಯೆ ಹೊರತು; ಸರಿಯಾದ ನಿಲುವು ಸರ್ಕಾರ ತೆಗೆದುಕೊಂಡಿಲ್ಲ. ರಾಷ್ಟ್ರ ಮಟ್ಟದಲ್ಲಿ ಸರಿಯಾದ ಒಂದು ನಿಲುವು ತೆಗೆದುಕೊಳ್ಳದೇ ಪರಿಣತರೂ ಕೂಡ ಬರೀ ಆಟವಾಡುತ್ತಿದ್ದಾರೆಯೇ ವಿನಹ ಪರಿಣಾಮ ಕಾರಿಯಾದ ಸೂಕ್ತವಾದ ವಿದ್ಯಾಭ್ಯಾಸವನ್ನು ಮಕ್ಕಳಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಿಲ್ಲವೆಂದು ಹೇಳಬೇಕಾಗಿದೆ. ಮಲ್ಟಿಪರ್‌ಪೋಸ್ ಎಜುಕೇಷನ್ ಸಿಸ್ಟಂ ಅಂತ ಜಾರಿಗೆ ತಂದರು; ಅದರಿಂದ ಉಪಾಧ್ಯಾಯರುಗಳಿಗೆ ಬರೀ ಸಂಬಳ ಕೊಡುತ್ತಿದ್ದಾರೆಯೇ ವಿನಹ ಬೇರೇನೂ ಇಲ್ಲ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವಿದ್ಯಾಭ್ಯಾಸದ ಬಗ್ಗೆ ಸರಿಯಾದ ನಿಲುವು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕಾಮರ್ಸ್ ಎಜುಕೇಷನ್ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಫೀಜು ಜಾಸ್ತಿ ಮಾಡಿಕೊಟ್ಟಿದ್ದಾರೆ; ಇದರಲ್ಲಿ ಏನು ತೊಂದರೆಯಿದೆ ಅಂದರೆ ಅನೇಕರಿಗೆ ಇದು ಭಾರವಾಗಬಹುದು. ಬೇರೆ ವಿದ್ಯಾಭ್ಯಾಸದಲ್ಲಿ ವೀಕರ್‌ಸೆಕ್ಷನ್‌ಗೆ ಕಾಂಪನ್‌ಸೇಕ್ಷನ್ ಕೊಡುತ್ತಿದ್ದಾರೆ; ಕಾಮರ್ಸ್ ಎಜುಕೇಷನ್‌ನಲ್ಲಿ ವ್ಯಾಸಂಗ ಮಾಡುವಂತ ಮಕ್ಕಳಿಗೆ ಅದರಲ್ಲಿಯೂ ವೀಕರ್‌ಸೆಕ್ಷನ್ನಿಗೆ ಬಡವರಿಗೆ ಸ್ಕಾಲರ್‌ಷಿಪ್ ಮುಂತಾದ ಅನುಕೂಲಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಶಾಲೆಗಳಿಗೆ ಗ್ರ್ಯಾಂಟ್ ಕೊಡದೇ ಇದ್ದರೂ ಈ ಒಂದು ಅನುಕೂಲವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಕಾಲೇಜು ಶಿಕ್ಷಕರಿಗೆ ಚೆಕ್ ಸಿಸ್ಟಂ ಮಾಡಿದ್ದು ಒಳ್ಳೆಯದು; ಇಲ್ಲಿ ತಂದೆತಾಯಿಗಳು; ವಿದ್ಯಾರ್ಥಿಗಳು; ಹಾಗೂ ಉಪಾಧ್ಯಾಯರುಗಳು ಒಬ್ಬರಿಗೊಬ್ಬರು ಸಹಕಾರ ಮನೋಭಾವನೆಯಿಂದ ನಡೆದುಕೊಂಡರೆ

ಉತ್ತಮ ಮಟ್ಟದಲ್ಲಿ ವಿದ್ಯಾಭ್ಯಾಸ ಕೊಡುವುದಕ್ಕೆ ಅನುಕೂಲವಾಗುತ್ತದೆ. ದೇವೇಗೌಡರ ನೇತೃತ್ವದಲ್ಲಿ ಸಮಿತಿ ನೇಮಕ ಮಾಡಿದಿರಿ; ಏತಕ್ಕೆ ಆ ಸಮಿತಿಯ ವರದಿ ತಡವಾಯಿತೆಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ. ಫೀಜಿನ ಹಾವಳಿ, ಡೊನೇಷನ್ ಹಾವಳಿ ಕಡಿಮೆ ಮಾಡುವುದಕ್ಕೆ ಕೂಡಲೇ ಕ್ರಮ ತೆಗೆದು ಕೊಳ್ಳಬೇಕೆಂದು ತಿಳಿಸುತ್ತೇನೆ. ಅನೇಕ ವಿಚಾರಗಳಲ್ಲಿ ನಿಮಗೆ ರಾಜ್ಯಾಂಗ ಅಡ್ಡಬರಬಹುದು; ಲಾ ಪರ್ಮಿಟ್ ಮಾಡುತ್ತದೆಯೋ ಎನ್ನುವ ವಿಚಾರ ಬೇಡ; ಒಳ್ಳೆಯ ಕೆಲಸವನ್ನು ಧೈರ್ಯವಾಗಿ ಮಾಡಿ; ತಪ್ಪಿತಸ್ಥ ಅಧಿಕಾರಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿ. ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೫-೩೦ ಪಿ.ಎಂ.

† ಶ್ರೀ ವಿ.ಎಂ. ಘಾಡಿ (ಹಳಿಯಾಳ).—ಸನ್ಮಾನ್ಯ ಅಧ್ಯಕ್ಷರೆ, ಇವೊತ್ತಿನ ದಿವಸ ಶಿಕ್ಷಣ ಮಂತ್ರಿಗಳು ಮಂಡಿಸಿದ ಬೇಡಿಕೆಗಳನ್ನು ಬೆಂಬಲಿಸಿ ನಾಲ್ಕು ಮಾತುಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಶಿಕ್ಷಣ ಎನ್ನುವುದು ಒಂದು ಪವಿತ್ರವಾದ ಕ್ಷೇತ್ರ. ಶಿಕ್ಷಕರು ಮಾಡುವಂತಹ ಕೆಲಸ ನೋಬಲ್ ಪ್ರೊಫೆಷನ್. ನೆನ್ನೆಯ ದಿವಸ ಮಿತ್ರರಾದಂತಹ ಮಳ್ಳೂರು ಆನಂದರಾವ್ ಅವರು ತಮ್ಮ ಬುಟ್ಟಿಯೊಳಗಿಂದ ಒಂದೊಂದೇ ಹಾವು ಬಿಡುತ್ತಾ ವಿದ್ಯಾ ಇಲಾಖೆಯಲ್ಲಿ ಏನೊಂದು ಅವ್ಯವಹಾರ ನಡೆಯುತ್ತಿದೆ ಎನ್ನುವುದನ್ನು ತೋರಿಸಿಕೊಟ್ಟರು. ಈ ದೃಷ್ಟಿಯಿಂದ ನೋಡಿದಾಗ ನಮ್ಮ ಕಡೆಯ ಆಟ ನೆನಪು ಬರುತ್ತದೆ. ಅದಕ್ಕೆ ದುರಗಿ ಮುರಗಿ ಆಟ ಎಂದು ಹೇಳುತ್ತಾರೆ. ಅದರಲ್ಲಿ ತಾನು ತಂದಾನೆ ಪದ ಹೇಳುತ್ತಾರೆ, ಇವರು ಹೇಳಿದ ವಿಚಾರ ನೋಡಿ ಆ ದೃಶ್ಯ ನೆನಪಿಗೆ ಬರುತ್ತದೆ. ಮಾನ್ಯ ಸದಸ್ಯರಾದ ಆನಂದರಾವ್ ಅವರು ಕೆಲವೊಂದು ಸತ್ಯಸಂಗತಿಗಳನ್ನು ತಿಳಿಸಿ, ಅವು ಸರಿಯಲ್ಲ ಅಂದರೆ ರಾಜೀನಾಮೆ ಕೊಡಲಿಕ್ಕೆ ಸಿದ್ಧನಿದ್ದೇನೆಂದು ಹೇಳಿದ್ದಾರೆ. ಮತ್ತೊಂದು ವಿಶಿಷ್ಟ ಏನು ಅಂದರೆ ಈ ಅವ್ಯವಹಾರಗಳೆಲ್ಲಾ ಬೆಂಗಳೂರು ರಾಜಧಾನಿಯಲ್ಲಿಯೇ ಕಂಡುಬರುತ್ತಿದೆ. ಈ ಅವ್ಯವಹಾರದ ದುರ್ಗಂಧ ಇಲ್ಲಿಯೇ ಹೆಚ್ಚು ಕಂಡುಬರುತ್ತಿದೆ. ನಾವು ಹೋದ ವರ್ಷ ೧೪೫ ಕೋಟಿ ರೂಪಾಯಿ ಖರ್ಚುಮಾಡಿದ್ದೇವೆ ಇದರಿಂದ ಏನು ಪ್ರಗತಿ ಸಾಧಿಸಿದ್ದೀರಾ ಎನ್ನುವುದನ್ನು ತೋರಿಸಿಕೊಡುತ್ತೀರಾ ಎಂದು ಕೇಳಿದ್ದಾರೆ. ಇವೊತ್ತು ಬೆಂಗಳೂರು ಒಂದನ್ನೇ ತೆಗೆದುಕೊಂಡು ಹೋಲ್ ಜನರಲೈಸ್ ಮಾಡಿದ್ದು ತಪ್ಪು. ಬೆಂಗಳೂರಿನಲ್ಲಿ ಏನು ದುರ್ಗಂಧವಾಗಿದೆ, ಏನು ಅವ್ಯವಹಾರವಾಗಿದೆ, ಅದನ್ನು ನೋಡಿಕೊಂಡು ಇಡೀ ರಾಜ್ಯದಲ್ಲಿ ಪ್ರಗತಿಯಾಗಿಲ್ಲ ಎಂದು ಹೇಳಿದ್ದಾರೆ. ಇವೊತ್ತು ಬಾಂಬೆ ಕರ್ನಾಟಕದಲ್ಲಿ ಕೆಲವು ಸಂಸ್ಥೆಗಳು ನಡೆಸತಕ್ಕದ್ದು ಶ್ಲಾಘನೀಯವಾದುದು. ಇವೊತ್ತು ಇವರು ಈ ಸೊಸೈಟಿಯವರು ನಡೆಸತಕ್ಕ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೇಳುತ್ತಿದ್ದಾರೆ. ಈ ಸೊಸೈಟಿಗಳಿಂದ ನಡೆಸತಕ್ಕ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಬಾರದು ಎಂದು ಹೇಳುತ್ತೇನೆ. ಏತಕ್ಕೆಂದರೆ ನಮ್ಮ ಬಾಂಬೆ ಕರ್ನಾಟಕದಲ್ಲಿ ಈ ಸೊಸೈಟಿಗಳಿಂದ ನಡೆಸತಕ್ಕಂತಹ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ ತಾವೇನಾದರೂ ರಾಷ್ಟ್ರೀಕರಣ ಮಾಡಿದರೆ ಬಹಳ ಅನಾಹುತವಾಗುತ್ತದೆಂದು ಹೇಳುತ್ತೇನೆ. ಈಗ ಇವರು ಬೆಂಗಳೂರು ಒಂದನ್ನೇ ತೆಗೆದುಕೊಂಡು ನರ್ಸರಿ ಸ್ಕೂಲು, ಪ್ರೈಮರಿ ಸ್ಕೂಲು, ಕೆಲವೊಂದು ಹೈಸ್ಕೂಲು ತೆಗೆದುಕೊಂಡು ಹೇಳಿರಬಹುದು. ನಾನು ಈ ಸಂದರ್ಭದಲ್ಲಿ ತಮಗೆ ಒಂದು ಉದಾಹರಣೆ ಹೇಳಬೇಕು ಅಂದರೆ ಚಾಮರಾಜಪೇಟೆಯಲ್ಲಿ ಶಾಂತಬಾಯಿ ಶಾಲೆಯಲ್ಲಿ ಒಬ್ಬ ಆಯಾ ಸತ್ತು ಹೋಗಿದ್ದರು ಅವರ ಹೆಸರಿನಲ್ಲಿ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಅದು ಒಬ್ಬ ಶಾಸಕರಿಗೆ ಸಂಬಂಧಪಟ್ಟ ಶಾಲೆ ಎಂದು ಕೇಳಿದ್ದೇನೆ. ಹಾಗೆ ಗವರ್ನ್‌ಮೆಂಟ್ ಕಾಲೇಜಿನ ಪ್ರಿನ್ಸಿಪಾಲ್ ಮತ್ತು ಲೈಬ್ರರಿಯನ್ ಬಗ್ಗೆ ವಿಚಾರಣೆ ಮಾಡುತ್ತಾ ಇಲ್ಲ ಎಂದು ಕೇಳಿದ್ದೇನೆ. ಇವೆಲ್ಲಾ ಬಂದದ್ದು ಬೆಂಗಳೂರಿನಲ್ಲಿಯೇ ಹೊರತು ಬಾಂಬೆ ಕರ್ನಾಟಕದಲ್ಲಿ ಬಂದಿಲ್ಲ. ಈ ದೃಷ್ಟಿಯಿಂದ ಇವೊತ್ತು ನೋಡಿದರೆ ವಿದ್ಯಾ ಸಚಿವರು ಇಲ್ಲಿಯವರೆಗೆ ಎಷ್ಟೋ ಪ್ರಗತಿಯನ್ನು ಸಾಧಿಸಿದ್ದಾರೆ. ಆದರೆ ಕೆಲವೊಂದು ಅಂಶಗಳನ್ನು ತೆಗೆದುಕೊಂಡರೆ ಮಿಡ್ ಡೇ ಮೀಲ್ಸ್‌ನಲ್ಲಿ ದುಡ್ಡು ಹೊಡೆಯುತ್ತಿದ್ದಾರೆ. ಕೆಲವರು ಹೆಂಡತಿಗೆ ಒಡವೆಗಳನ್ನು ಮಾಡಿಸಿದ್ದಾರೆ, ಆರ್.ಸಿ.ಸಿ. ಬಿಲ್ಡಿಂಗ್ ಕಟ್ಟಿದ್ದು ಕಂಡುಬರುತ್ತದೆ, ಸ್ವಂತ ಮನೆಗಳನ್ನು ಮಾಡಿಕೊಂಡಿದ್ದಾರೆ. ಇಂತಹ ದುರ್ವ್ಯವಹಾರ ನಡೆಯದೇ ಇರಬೇಕಾದರೆ ಮೇಲಿನ ಅಧಿಕಾರಿಗಳಲ್ಲಿ ಅಂದರೆ ಎ.ಇ.ಓ. ಮತ್ತು ಐ.ಓ.ಎಸ್. ಮುಂತಾದ ಅಧಿಕಾರಿಗಳಲ್ಲಿ ದಕ್ಷ ಆಡಳಿತ ಬೇಕಾಗುತ್ತದೆ. ಅದು ಇಲ್ಲದೇ ಹೋದರೆ ಅವ್ಯವಹಾರ ನಡೆಯುತ್ತದೆ. ಎ.ಇ.ಓ. ಇನ್‌ಸ್ಪೆಕ್ಷನ್‌ಗೆ

ಹೋದರೆ ಹಾಜರಿ ಪುಸ್ತಕದಲ್ಲಿ ಸೀನ್ ಎಂದು ಬರೆದು ಹೋಗುತ್ತಾನೆ. ಅದು ಸರಿಯಲ್ಲ, ಅವನು ಸರಿಯಾಗಿ ಪರೀಕ್ಷೆ ಮಾಡಿ ಹುಡುಗರು ಇದ್ದಾರೆಯೋ ಇಲ್ಲವೋ ನೋಡಿಕೊಂಡು ರಿಪೋರ್ಟ್ ಮಾಡಬೇಕು. ಇನ್‌ಸ್ಪೆಕ್ಷನ್‌ಗೆ ಹೋಗುವ ಅಧಿಕಾರಿಗಳಲ್ಲಿ ನ್ಯೂನತೆ ಕಂಡುಬರುತ್ತದೆ. ಅದನ್ನು ಸರಿಪಡಿಸಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ನಾನು ಹೆಡ್‌ಮಾಸ್ಟರ್ ಆಗಿದ್ದಾಗ ಕೆಲವೊಂದು ನ್ಯೂನತೆಗಳನ್ನು ಹೇಳಿಕೊಟ್ಟಿದ್ದೇನೆ. ಇವೊತ್ತು ಇಲಾಖಾ ಅಧಿಕಾರಿಗಳು ದಕ್ಷತೆಯಿಂದ ಇನ್‌ಸ್ಪೆಕ್ಷನ್ ಮಾಡಿದರೆ ಈ ಶಿಕ್ಷಣ ಪದ್ಧತಿಯಲ್ಲಿ ಸುಧಾರಿಸಲಿಕ್ಕೆ ಸಾಧ್ಯವಾಗುತ್ತದೆ. ಶಿಕ್ಷಣ ಒಂದು ಮಹಾ ಸಾಗರ, ಕೆಲವೊಂದು ಸಮುದ್ರ ತಳದಲ್ಲಿ ಕೆಲವೊಂದು ರತ್ನಗಳು ಇದೆ. ಇಲ್ಲ ಎಂದು ಹೇಳುವುದಿಲ್ಲ. ಇದಕ್ಕೆ ಬೇಕಾದ ಶೀಲ, ಚಾರಿತ್ರ್ಯದ ಎಂದು ಏನು ಹೇಳುತ್ತೇವೆ ಅದು ಅಭಾವ ಇದೆ. ಇವೊತ್ತು ಶೀಲ ಇಲ್ಲ, ಚಾರಿತ್ರ್ಯ ಇಲ್ಲ, ಶಿಸ್ತು ಇಲ್ಲ. ಬಾರ್‌ಗೆ ಹೋಗುವ ಫ್ಯಾಷನ್ ಆಗಿದೆ. ನಮ್ಮ ಮಿತ್ರರ ಜೊತೆ ಒಂದು ಹೋಟಲಿಗೆ ಹೋದಾಗ ಅಲ್ಲಿ ಐದಾರು ವರ್ಷದ ಮಗು ಬೀರು ಕುಡಿಯುತ್ತಿತ್ತು. ಆಗ ನಮ್ಮ ಸ್ನೇಹಿತರು ನನಗೆ ಹೇಳಿದರು ಐದಾರು ವರ್ಷದ ಮಗು ಬೀರು ಕುಡಿಯುತ್ತಾ ಇದೆ ನೋಡು ನೀನು ಕುಡಿ ಅಂದರೆ ಆಗುವುದಿಲ್ಲ ಎಂದು ಹೇಳುತ್ತೀಯಾ ಎಂದು ಹೇಳಿದ. ಇದಕ್ಕೆ ಕಾರಣರು ಯಾರು ಶಿಕ್ಷಣ ಇಲಾಖೆಯಿಂದ ಇದನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ. ಬಾಲಕರು ಎಷ್ಟರವರೆಗೆ ಶಾಲೆಗೆ ಹೋಗುತ್ತಾರೆ ಎನ್ನುವುದನ್ನು ಅವರ ತಂದೆತಾಯಿಗಳು ತಿಳಿದುಕೊಳ್ಳಬೇಕಾಗುತ್ತದೆ. ನಾನು ಹೆಡ್‌ಮಾಸ್ಟರ್ ಇದ್ದಾಗ ಒಂದು ಸಿಸ್ಟಂ ಮಾಡಿದ್ದೆ. ಆರು ತಿಂಗಳ ಪರೀಕ್ಷೆ ಆದನಂತರ ಎಲ್ಲಾ ಶಿಕ್ಷಕರನ್ನು ಕರೆದುಕೊಂಡು ಮನೆಗಳಿಗೆ ಹೋಗಿ ಹುಡುಗರ ಪರಫಾರ್ಮೆನ್ಸ್ ತಿಳಿಸುತ್ತಾ ಇದ್ದೆವು. ಇದು ಎಜುಕೇಷನ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳಿಂದ ಸುಧಾರಣೆಯಾಗಲಿಕ್ಕೆ ಸಾಧ್ಯವಿಲ್ಲ. ಬಾಲಕರ ನ್ಯೂನತೆ ಏನಿದೆ ಅದನ್ನು ತೋರಿಸಿಕೊಟ್ಟು, ಅವರಲ್ಲಿ ಸಹಕಾರ ಮಾಡಲಿಕ್ಕೆ ಪ್ರಯತ್ನ ಮಾಡಿದರೆ ಶಿಕ್ಷಣ ಸುಧಾರಣೆಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈಗ ನಮ್ಮಲ್ಲಿ ಯಲ್ಲಾಪುರದಲ್ಲಿ ಒಂದು ಹೈಸ್ಕೂಲು ಇದೆ. ಈಗ ಬೆಂಗಳೂರಿನಲ್ಲಿ ನಡೆದಂತಾದ್ದನ್ನು ಹೇಳಿದ ಪ್ರಕಾರವೇ ಅಲ್ಲಿ ಹೆಡ್‌ಮಾಸ್ಟರ್, ಮ್ಯಾನೇಜ್‌ಮೆಂಟಿನವರು ಸೇರಿಕೊಂಡು ನಡೆಸುತ್ತಿದ್ದಾರೆ. ಅಲ್ಲಿ ಒಬ್ಬ ವಿಧವೆ ೧೫ ವರ್ಷದಿಂದ ಕ್ರಾಫ್ಟ್ ಟೀಚರ್ ಕೆಲಸ ಮಾಡುತ್ತಿದ್ದಾಳೆ. ಆಕೆಗೆ ಪಾರ್ಟ್‌ಟೈಮ್‌ನಲ್ಲಿ ೫೦ ರೂಪಾಯಿ ಕೊಡುತ್ತಿದ್ದಾರೆ. ಆಕೆ ವಿಧವೆ ಇದ್ದಾಳೆ, ಆಕೆಗೆ ಯಾವ ತರಹ ಸಂಪತ್ತು ಇಲ್ಲ. ಆದ್ದರಿಂದ ಅವರು ದಯವಿಟ್ಟು ಏನಾದರೂ ಮಾಡಿ ಫುಲ್‌ಟೈಮ್ ಟೀಚರ್ ಮಾಡಿ ಎಂದು ಕಾಂಗ್ರೆಸ್ ಅಧ್ಯಕ್ಷರಿಗೂ, ನನಗೂ ಒಂದು ಅರ್ಜಿಯನ್ನು ಕೊಟ್ಟರು. ಅದನ್ನು ನಾನು ಡಿ.ಪಿ.ಐ. ಅಧಿಕಾರಿಗಳ ಹತ್ತಿರ ಮೂವ್ ಮಾಡಿದೆ. ಇವರ ಹತ್ತಿರ ಏತಕ್ಕೆ ಹೋದರು ಎಂದು ಆಕೆ ಸರ್ವಿಸ್ ಟರ್ಮಿನೇಟ್ ಮಾಡಿದರು. ಅನಂತರ ಡಿ.ಪಿ.ಐ. ಅವರನ್ನು, ಮೇಲ್ಪಟ್ಟದ ಅಧಿಕಾರಿಗಳನ್ನು ನೋಡಿದಮೇಲೆ, ಪುನಃ ಕೆಲಸದ ಮೇಲೆ ತೆಗೆದುಕೊಳ್ಳಬೇಕೆಂದು ಆದೇಶ ನೀಡಿದ್ದಾರೆ. ಅದೇ ತರಹ ಫುಲ್‌ಟೈಮ್ ಟೀಚರ್ ಮಾಡಬೇಕೆಂದು ಹೇಳುತ್ತೇನೆ. ಇನ್ನು ಪಠ್ಯ ಪುಸ್ತಕಗಳಲ್ಲಿ ಸಮಾಜವಾದ ತತ್ವಗಳನ್ನು ಅಳವಡಿಸುವ ನೀತಿಯನ್ನು ಪ್ರಾಥಮಿಕ ತರಗತಿಯಿಂದ ಕಾಲೇಜಿನವರೆಗೂ ಅನುಸರಿಸಿಕೊಂಡು ಬರುವುದು ಒಳ್ಳೆಯದೆಂದು ಆಗ್ರಹ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನು ರಿಕ್ರೂಟ್‌ಮೆಂಟ್ ಕಮಿಟಿಗಳ ಬಗ್ಗೆ ಒಂದು ಮಾತು ಹೇಳುವುದಾದರೆ, ದಯವಿಟ್ಟು ಯಾವುದೇ ಪಕ್ಷಪಾತವನ್ನೂ ಮಾಡದೆ ಒಳ್ಳೆಯ ಪರಿಣತರನ್ನೇ ಆಯ್ಕೆ ಮಾಡಿ ಹಾಕಿ. ಏಕೆಂದರೆ ಇವತ್ತು ಮಕ್ಕಳ ಭವಿಷ್ಯವನ್ನು ಉತ್ತಮರೀತಿಯಲ್ಲಿ ರೂಪಿಸುವ ಶಿಕ್ಷಕರನ್ನು ನಾವು ಆಯ್ಕೆ ಮಾಡದೇ ಹೋದರೆ ಮುಂದೆ ದೇಶಕ್ಕೆ ತೊಂದರೆಯಾಗುತ್ತದೆ. ನಾನು ತಮಗೆ ಏತಕ್ಕೆ ಹೇಳುತ್ತಿದ್ದೇನೆಂದರೆ, ಇತ್ತೀಚೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮೌಲ್ಯ ಮಾಪನ ಮಾಡುವುದಕ್ಕೆ ಬಂದಿದ್ದವರು ಒಂದು ಮೆರವಣಿಗೆಯನ್ನು ಮಾಡಿದ್ದನ್ನು ನೋಡಿದರೆ ಬಹಳ ವಿಷಾದವಾಗುತ್ತದೆ. ನನ್ನ ಬಳಿ ಒಬ್ಬ ಖಾದಿ ಜುಬ್ಬ, ಪಂಚೆ ಹಾಕಿಕೊಂಡು ಒಬ್ಬ ಕಾಂಗ್ರೆಸ್ ಪುಢಾರಿಯಂತೆ ಮಾತನಾಡುವುದಕ್ಕೆ ಬಂದಿದ್ದ. ಆಗ ನೀನು ಯಾರು ಎಂದು ನಾನು ಕೇಳಿದ್ದಕ್ಕೆ ಅವನು ಅಲ್ಲಿಂದ ಪಲಾಯನ ಮಾಡಿದ. ಈ ರೀತಿ ನಮ್ಮ ಪಕ್ಷದ ಹೆಸರನ್ನು ಕೆಡಿಸಲು ಕೆಲವರು ಪ್ರಯತ್ನಿಸುತ್ತಾರೆ. ಸ್ವಾಮಿ, ಇವತ್ತು ರಿಕ್ರೂಟ್‌ಮೆಂಟ್ ಕಮಿಟಿಗಳಲ್ಲಿ ಒಳ್ಳೆಯವರನ್ನು ಸದಸ್ಯರನ್ನಾಗಿ ನೇಮಿಸಿ. ಇಲ್ಲದೇ ಹೋದರೆ ಶಿಕ್ಷಣ ಕ್ಷೇತ್ರ ಅಧೋಗತಿಗೆ ಇಳಿಯುತ್ತದೆಂದು ಹೇಳಬಯಸುತ್ತೇನೆ. ಇವತ್ತು ಈ ಶಿಕ್ಷಣ ಇಲಾಖೆಯ ಬಗ್ಗೆ ಏನೇನು ಆಪಾದನೆಗಳು ಬಂದಿವೆ ಅವುಗಳನ್ನೆಲ್ಲಾ ಏಕಸದಸ್ಯ ಆಯೋಗಕ್ಕೆ ಅಥವಾ ಜಾಗೃತ ಆಯೋಗಕ್ಕೆ ಕಳುಹಿಸಿಕೊಟ್ಟು ತನಿಖೆ ಮಾಡಿಸಿದರೆ, ನಮ್ಮ ಪಕ್ಷದ ಮೇಲೆ ಬರಬಹುದಾದ ಆಪಾದನೆಗಳನ್ನು ತಪ್ಪಿಸಿಕೊಳ್ಳ

ಬಹುದು. ಆದ್ದರಿಂದ ಮಾನ್ಯ ಸದಸ್ಯರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ತಮಗೆ ಗೊತ್ತಿರುವಂಥ ಆಪಾದನೆಗಳು ಏನೇನು ಇವೆ ಅವುಗಳೆಲ್ಲವನ್ನೂ ಮಾನ್ಯ ಶಿಕ್ಷಣ ಸಚಿವರ ಕಡೆಗೆ ಕೊಟ್ಟರೆ ಅವರು ಅವುಗಳನ್ನು ಏಕಸದಸ್ಯ ಆಯೋಗಕ್ಕೆ ಅಥವಾ ಜಾಗೃತ ಆಯೋಗಕ್ಕೆ ಕಳುಹಿಸಿಕೊಟ್ಟು ನಮ್ಮ ಪಕ್ಷ ದೋಷ ಮುಕ್ತವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಚಾರಿತ್ರ್ಯ ಅಥವಾ ಶೀಲದ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಮಿಲಿಟರಿ ಶಿಕ್ಷಣವನ್ನು ಪಡೆದವರು ಒಳ್ಳೆಯ ಚಾರಿತ್ರ್ಯ ಹೊಂದಿರುತ್ತಾರೆಂದು ನನ್ನ ಭಾವನೆ. ಆದ್ದರಿಂದ ಮಿಲಿಟರಿ ಶಿಕ್ಷಣವನ್ನು ಕಡ್ಡಾಯವಾಗಿ ಪ್ರಾಥಮಿಕ ಶಾಲೆಯಿಂದಲೇ ನಮ್ಮ ಮಕ್ಕಳಿಗೆ ಕೊಡಬೇಕು. ಇವತ್ತು ನಾವು ನೋಡುತ್ತಿರುವಂತೆ ಮಿಲಿಟರಿ ಶಿಕ್ಷಣವನ್ನು ಪಡೆದಂಥ ವ್ಯಕ್ತಿ ಅಮೇರಿಕದ ಅಧ್ಯಕ್ಷರಾಗಿದ್ದಾರೆ. ಸ್ವಾಮಿ, ಈ ಸಂದರ್ಭದಲ್ಲಿ ಒಂದು ಶ್ಲೋಕ ನನ್ನ ಜ್ಞಾಪಕಕ್ಕೆ ಬರುತ್ತದೆ. ಅದು ಏನೆಂದರೆ, "ಏಕಸ್ ಚಂದ್ರ ಸ್ತಮೋಹಂತಿ, ನಚ ತಾರಾ ಗಣೋಪೀಚ" ಎಂದು ಅಂದರೆ ಆಕಾಶದಲ್ಲಿ ನಕ್ಷತ್ರಗಳ ಒಂದು ದೊಡ್ಡ ಸಮೂಹವೇ ಇದ್ದರೂ ಅದರಿಂದ ಕತ್ತಲೆ ದೂರವಾಗುವುದಿಲ್ಲ. ಆದರೆ ಅದೇ ಒಬ್ಬ ಚಂದ್ರ ಎಲ್ಲ ಕತ್ತಲೆಯನ್ನೂ ಓಡಿಸುತ್ತಾನೆ. ಅದರಂತೆ ಒಳ್ಳೆಯ ಶೀಲ, ಚಾರಿತ್ರ್ಯವುಳ್ಳವರು ಒಂದೊಂದು ಊರಿಗೆ ಒಬ್ಬೊಬ್ಬರು ಇದ್ದರೂ ಸಾಕು. ಆ ಊರಿಗೆ ಒಳ್ಳೆಯದಾಗುತ್ತದೆ ಎಂದು ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ (ವಿದ್ಯಾ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಮ್ಮ ವಿದ್ಯಾ ಇಲಾಖೆಯ ಬೇಡಿಕೆಗಳ ಬಗ್ಗೆ ಕೆಲವು ಮಾನ್ಯ ಸದಸ್ಯರು ಕೆಲವೊಂದು ಸೂಚನೆಗಳನ್ನು ಕೊಟ್ಟಿದ್ದಾರೆ, ಕೆಲವು ಮಾನ್ಯ ಸದಸ್ಯರು ಟೀಕೆಗಳನ್ನು ಮಾಡಿದ್ದಾರೆ. ಮಾನ್ಯ ಸದಸ್ಯರ ಟೀಕೆಗಳನ್ನು ನಾನಾದರೂ ಕೂಡ ಅವು ಒಳ್ಳೆಯ ಸೂಚನೆಗಳೆಂದೇ ತೆಗೆದುಕೊಂಡಿದ್ದೇನೆ. ಇಷ್ಟು ದೊಡ್ಡ ಇಲಾಖೆಯಲ್ಲಿ ಎಲ್ಲವೂ ಸರಿಯಾಗಿಯೇ ನಡೆಯುತ್ತಿದೆ ಎಂದು ಹೇಳಿದರೆ ಅದು ತಪ್ಪಾಗುತ್ತದೆ. ಇತರ ಇಲಾಖೆಗಳಲ್ಲಿರುವಂತೆಯೇ ನಮ್ಮ ಇಲಾಖೆಯಲ್ಲೂ ಕೂಡ ಆಡಳಿತ ಯಂತ್ರದ ದೋಷಗಳಿವೆ. ಅವುಗಳನ್ನು ಸರಿಪಡಿಸುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ಆಡಳಿತ ಯಂತ್ರದಲ್ಲಿರತಕ್ಕ ಅಧಿಕಾರಿಗಳ ಬಗ್ಗೆ, ಅವರ ಹೆಸರುಗಳನ್ನೂ ಹೇಳಿ ಅನೇಕ ಮಾನ್ಯ ಸದಸ್ಯರುಗಳು ಟೀಕೆಗಳನ್ನು ಮಾಡಿದ್ದಾರೆ. ಈ ಆಡಳಿತ ಯಂತ್ರ ಎಲ್ಲಿಯವರೆಗೆ ಸರಿಯಾಗುವುದಿಲ್ಲ ಅಲ್ಲಿಯವರೆಗೂ ನಾವು ಹಾಕಿಕೊಳ್ಳುವ ಯಾವುದೇ ಯೋಜನೆಗಳನ್ನೂ ಕಾರ್ಯಗತಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಮೊದಲನೆಯದಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಮಳೂರು ಆನಂದರಾವ್ ಅವರು ಮಾತನಾಡಿ ಕೆಲವು ಆಪಾದನೆಗಳನ್ನು ಮಾಡಿದ್ದಾರೆ. ಮಂತ್ರಿ ಭಾಷಣದ ಕೊನೆಯಲ್ಲಿ ಆರ್ಜೆನ್ಸಿಯನ್ನು ವ್ಯಕ್ತಪಡಿಸಿ ತಾವು ಮಾಡಿರಬಹುದಾದ ಎಲ್ಲ ಆಪಾದನೆಗಳಿಗೂ ಸಂಬಂಧಿಸಿದಂಥ ಪ್ರತಿಯೊಂದು ದಾಖಲೆಗಳನ್ನೂ ಕೂಡಲೇ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದೂ ಇಲ್ಲದಿದ್ದರೆ ಆ ದಾಖಲೆಗಳೆಲ್ಲಾ ಮಾಯವಾಗಬಹುದೆಂಬ ಶಂಕೆಯನ್ನೂ ವ್ಯಕ್ತಪಡಿಸಿದರು. ಈ ವಿಚಾರದಲ್ಲಿ ಅವರ ಕಳಕಳಿ ಏನಿದೆ ಅದನ್ನು ನಾನು ಬಹಳವಾಗಿ ಮೆಚ್ಚುತ್ತೇನೆ. ಆದರೆ ಮಾನ್ಯ ಸದಸ್ಯರು ಮೊದಲೇ ಈ ಕಳಕಳಿಯನ್ನು ನನಗೆ ತಿಳಿಸಿದ್ದರೆ ಕೂಡಲೇ ಮುನ್ನೆಚ್ಚರಿಕೆ ತೆಗೆದುಕೊಂಡು ಅಧಿಕೃತ ದಾಖಲೆಗಳನ್ನೆಲ್ಲಾ ಭದ್ರಪಡಿಸುವುದಕ್ಕೆ ಆದೇಶ ಕೊಡುತ್ತಿದ್ದೆ. ಆದರೆ ಈಗ ದಾಖಲೆಗಳೆಲ್ಲಾ ಕೈಬಿಟ್ಟು ಹೋಗಿದೆ ಎಂದು ಯಾರೂ ತಿಳಿದುಕೊಳ್ಳಬಾರದು. ಇನ್ನು ಮಾನ್ಯ ಸದಸ್ಯರು ಮಾತನಾಡುವಾಗ ಇನ್ನೂ ಒಂದು ಸವಾಲನ್ನು ಏನು ಹಾಕಿದ್ದಾರೆಂದರೆ, ನಾನು ಮಾಡಿರತಕ್ಕ ಆಪಾದನೆಗಳು ಏನಾದರೂ ಸಾಬೀತಾಗದೇ ಹೋದರೆ ಈ ಸದನಕ್ಕೆ ನನ್ನ ರಾಜೀನಾಮೆಯನ್ನು ಕೊಡುತ್ತೇನೆ ಎಂದು. ಇದಕ್ಕೆ ನಾನೇನಾದರೂ ಕೂಡ ಹೇಳುವುದಿಷ್ಟೇ. ಮಾನ್ಯ ಸದಸ್ಯರಾದ ಶ್ರೀ ಆನಂದರಾಯರು ಮಾಡಿರುವ ಭಾಷಣದಲ್ಲಿ ಏನೇನು ಆರೋಪಗಳನ್ನು ಮಾಡಿದ್ದಾರೆ ಅದೆಲ್ಲವನ್ನೂ ಒಂದು ಪಟ್ಟಿ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುವ ಸಲುವಾಗಿ ಜಾಗೃತ ಆಯೋಗಕ್ಕೆ ಕಳುಹಿಸಿಕೊಡುತ್ತೇನೆ ಎನ್ನುವ ಭರವಸೆಯನ್ನು ತಮ್ಮ ಮೂಲಕ ಈ ಸದನಕ್ಕೆ ಕೊಡಬಯಸುತ್ತೇನೆ. ಇದೇ ರೀತಿಯಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಟಿ. ರಾಮದೇವ್‌ರವರೂ ಕೂಡ ಕೆಲವು ಅಧಿಕಾರಿಗಳ ಬಗ್ಗೆ ಆರೋಪಣೆಯನ್ನು ಮಾಡಿದ್ದಾರೆ. ಈ ವಿಚಾರದಲ್ಲಿ ತಾವು ನನಗೆ ಒಂದು ಕಾಗದವನ್ನು ಕಳುಹಿಸಿರುವುದಾಗಿಯೂ ಹೇಳಿದ್ದಾರೆ. ಆದರೆ ಅದು ನನಗೆ ಸಿಕ್ಕಿಲ್ಲ. ಆದರೂ ಇನ್ನೊಂದು ಕಾಗದವನ್ನು ಮಾನ್ಯ ಟಿ. ರಾಮದೇವ್‌ರವರಿಂದಲೇ ನಾನೇ ತರಿಸಿಕೊಂಡಿದ್ದೇನೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಇದರ ಬಗ್ಗೆ ಕೂಡ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಇಷ್ಟೇ ಅಲ್ಲದೆ ಮಾನ್ಯ ಸದಸ್ಯರು ಇನ್ನೂ ಕೆಲವು ಸಂಸ್ಥೆಗಳ ಬಗ್ಗೆ ಆರೋಪ ಮಾಡಿ ಕೆಲವಕ್ಕೆ ರೆಕಗ್ನಿಷನ್ ಕೊಟ್ಟಿದ್ದದನ್ನು ರದ್ದು ಮಾಡಲಾಗಿತ್ತು, ಅಂಥ ಸಂಸ್ಥೆಗಳಿಗೆ ಪುನಃ ಪರ್ಮನೆಂಟ್ ರೆಕಗ್ನಿಷನ್‌ನ್ನು ಸರ್ಕಾರ ಕೊಟ್ಟಿದೆ ; ಇದಕ್ಕೆ ಸಂಬಂಧಪಟ್ಟಂತೆ ನನ್ನಲ್ಲಿ ಒಂದು ಪಟ್ಟಿಯೇ ಇದೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಆ ಪಟ್ಟಿಯನ್ನು ದಯವಿಟ್ಟು ನನಗೆ ಕಳುಹಿಸಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇವತ್ತು ನಮ್ಮ ಇಲಾಖೆಯ ಪ್ರತಿಯೊಂದು ಹಂತದಲ್ಲೂ ಕೂಡ ಅಧಿಕಾರಿಗಳಾಗಿರುವವರು ಉಪಾಧ್ಯಾಯ ವೃತ್ತಿಯಿಂದ ಬಂದಿರುವವರೇ ಆಗಿದ್ದಾರೆ. ಅವರು ಪರಿಣಿತರಾಗಿರುವರೆಂದು ತಿಳಿದು ಅವರನ್ನು ಡಿ.ಡಿ.ಪಿ.ಐ. ಹುದ್ದೆಗೂ ನೇಮಿಸಲಾಗಿದೆ.

ಇಷ್ಟೇ ಅಲ್ಲ ಇನ್ನೂ ಕೂಡ ನಮ್ಮ ಆಡಳಿತದಲ್ಲಿ ಒಂದು ಹೆಚ್ಚಿನ ಮಾಹಿತಿ ಬರುವ ಅಗತ್ಯತೆ ಇದೆ ಎನ್ನುವುದು ನನ್ನ ಮನಸ್ಸಿಗೆ ಕಂಡುಬಂದಿರುತ್ತದೆ. ಬಹುಶಃ ಸರಿಯಾದ ಮಾಹಿತಿ ಇಲ್ಲದೆ ಇರುವುದರಿಂದ ಕೆಲವು ಸನ್ನಿವೇಶಗಳಲ್ಲಿ ಯಾವುದೇ ಕೆಲಸವನ್ನು ಎಫಿಷಿಯನ್ಸಿಯಿಂದ ಮಾಡಬೇಕೆಂದರೆ ಅಷ್ಟೊಂದು ಎಫಿಶಿಯೆನ್ಸಿಯಿಂದ ಕೆಲಸ ಆಗುತ್ತಾ ಇಲ್ಲ. ಒಂದು ವರ್ಷದಲ್ಲಿ ಏನು ಮಾಡಿದ್ದೀರಿ ಎಂದು ಮಾನ್ಯ ಆನಂದರಾವ್‌ರವರು ಹೇಳಿದರು. ಅಂಥ ದೊಡ್ಡ ಸಂಖ್ಯೆಯಲ್ಲಿ ಮಾಡಿಲ್ಲ. ಒಂದು ವರ್ಷ ಬಹಳ ಕಡಿಮೆ ಇರುತ್ತದೆ. ಎನ್ನುವುದು ತಮಗೂ ತಿಳಿದಿರುತ್ತದೆ. ತಾವು ಅದನ್ನು ಒಪ್ಪಿಕೊಳ್ಳುತ್ತೀರೆಂದು ಭಾವಿಸುತ್ತೇನೆ. ಮತ್ತೆ ನಮ್ಮಲ್ಲಿ ಒಂದು ಸಣ್ಣ ಕಥೆಯನ್ನು ಹೇಳುತ್ತಾರೆ. 'ಒಂದು ಕೋಣ ಹಳ್ಳದಲ್ಲಿ ಮಲಗಿಕೊಂಡಿರುವಾಗ ಯಾರೋ ಬಂದು ನಾಲ್ಕು ಏಟು ಬಿಗಿದರಂತೆ ಹಾಗೆ ಬಿಗಿದಾಗ ಆ ಕೋಣಕ್ಕೆ ಗೊತ್ತೇ ಆಗಲಿಲ್ಲ. ಅದಕ್ಕೆ ಗೊತ್ತೇ ಆಗಲಿಲ್ಲವಲ್ಲ ಎಂದು ಇನ್ನೂ ಬಿಗಿದರಂತೆ, ಆದರೂ ಕೋಣನಿಗೆ ಎಲ್ಲೋ ಯಾರೋ ಯಾರಿಗೋ ಬಿಗಿಯುತ್ತಿದ್ದಾರೆಂದು ಅನ್ನಿಸಿತಂತೆ. ಪುನಃ ನಾಲ್ಕು ಬಿಗಿದಾಗ ಎಲ್ಲೋ ಹತ್ತಿರದಲ್ಲೆ ಯಾರಿಗೋ ಬಿಗಿಯುತ್ತಿದ್ದಾರೆಂದು ಅನಿಸಿತಂತೆ, ಇನ್ನೂ ನಾಲ್ಕು ಬಿಗಿದಾಗ ಬಹುಶಃ ನನಗೆ ಬಿಗಿಯುತ್ತಿರುವುದು ಎಂದು ತಿಳಿದುಕೊಂಡಿತಂತೆ ಹಾಗೆ ಹೀಗೆ ಬಹುಶಃ ಒಂದು ಸ್ಟೇಜಿಗೆ ನಮ್ಮ ಡಿಪಾರ್ಟ್‌ಮೆಂಟ್ ಬಂದಿರುತ್ತದೆಂದು ನನ್ನ ಮನಸ್ಸಿಗೆ ಅನಿಸುತ್ತದೆ.

ಶ್ರೀ ಮುಳ್ಳೂರು ಆನಂದರಾವ್ —ಅಂದರೆ ನೀವು ಇನ್ನೂ ಪ್ರಾರಂಭಾವಸ್ಥೆಯಲ್ಲಿಯೇ ಇದ್ದೀರಿ ; ಏನನ್ನು ನೀವು ಇನ್ನೂ ಹೊಡೆಯುವುದಕ್ಕೆ ಶುರು ಮಾಡಿಯೇ ಇಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಶುರು ಮಾಡಿರುವಂಥಾದ್ದು ನಿಮಗೂ ಹಾಗೆ ಗೊತ್ತಾಗಲಿಲ್ಲವೇ ಎಂದು ಹೇಳುತ್ತೇನೆ (ನಗು) ಶುರು ಆಗಿರುತ್ತದೆ. ಅಷ್ಟೇ ಅಲ್ಲ ಇಲಾಖೆಯು ಒಂದು ಸ್ಟೇಜಿಗೂ ಕೂಡ ಬಂದಿರುತ್ತದೆಂದು ನನ್ನ ಮನಸ್ಸಿಗೆ ಕಂಡುಬಂದಿರುತ್ತದೆ. ಇನ್ನೂ ಬಹಳಷ್ಟು ಆಗುವುದು ಇದೆ. ನಮ್ಮ ಆಫೀಸರ್ ಯಾರು ಇದ್ದಾರೆ ಅವರಿಗೆ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೆಚ್ಚಿನ ತರಬೇತಿಯನ್ನು ಕೊಡುವ ಅಗತ್ಯ ಇದೆ ಎನ್ನುವುದು ನನ್ನ ಮನಸ್ಸಿಗೆ ಕಂಡುಬಂದಿದೆ. ನಮ್ಮ ಬೇರೆ ಬೇರೆ ಸದಸ್ಯರು ಬೇರೆ ಬೇರೆ ಆಫೀಸರುಗಳ ಬಗ್ಗೆ ದೂರುಗಳನ್ನು ಹೇಳಿದ್ದಾರೆ. ದೂರುಗಳು ನಮಗೂ ಬಂದಿವೆ. ನಮ್ಮ ಮಾನ್ಯ ಸದಸ್ಯರಾದ ನಾಯಕ್‌ರವರು ಕುಮಟಾದ ಒಂದು ಇನ್‌ಸಿಡೆಂಟ್ ಬಗ್ಗೆ ಹೇಳಿದರು, ಅದರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಆದರಲ್ಲಿ ಒಂದು ಕಂಡುಬಂದಿದ್ದೇನೆಂದರೆ ಅಧ್ಯಾಪಕರಿಗೆ ಹೆಚ್ಚಿನ ಮರ್ಯಾದೆಯನ್ನು ಸಮಾಜ ಕೊಡಬೇಕೆಂದು ಇರುತ್ತದೆ. ಆದರೆ ಹೆಚ್ಚಾಗಿ ಏನು ಕಂಡುಬಂದಿದೆ ಎಂದರೆ ಅಧ್ಯಾಪಕರು ಅಧ್ಯಾಪಕ ವರ್ಗದವರಿಗೇನೇ ಮರ್ಯಾದೆಯನ್ನು ಕೊಡುತ್ತಿಲ್ಲ ಎನ್ನುವುದು ನನ್ನ ಮನಸ್ಸಿಗೆ ಬಂದಿರುತ್ತದೆ. ಯಾರು ಎ.ಇ.ಓ ಗಳಾಗಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಎ.ಇ.ಓ ನಿಂದ ಹೆಡ್‌ಮಾಸ್ಟರ್ ಪೋಸ್ಟ್ ಕೊಟ್ಟರೆ ಅವರಿಗೆ ಏನೋ ಒಂದು ಕೆಳಗೆ ಇಳಿದಂತೆ ಆಗುತ್ತದೆ. ಅದು ನನ್ನ ಮನಸ್ಸಿಗೆ ಕೆಲವು ಕಡೆಯಿಂದ ಕೇಳಿಬಂದಿರುತ್ತದೆ. ಹೆಡ್‌ಮಾಸ್ಟರ್ ಯಾರು ಕ್ಲಾಸ್ ಎರಡು ಇದ್ದಾರೆ ಅವರಿಗೂ ಕೂಡ ಆಡಳಿತದಲ್ಲಿ ಹೆಚ್ಚಿನ ಒಂದು ಮಾಹಿತಿ ಬರಲಿ ಎನ್ನುವ ದೃಷ್ಟಿಯಿಂದ ಯಾರು ನಾಲ್ಕು ವರ್ಷಗಳಿಗಿಂತ ಮೇಲ್ಪಟ್ಟು ಎ.ಇ.ಓ. ಆಗಿ ಕೆಲಸ ಮಾಡಿರುತ್ತಾರೆ ಅಂಥವರನ್ನು ಹೆಡ್‌ಮಾಸ್ಟರ್ ಆಗಿ ಪೋಸ್ಟ್ ಮಾಡಿ, ಯಾರು ಹೆಡ್‌ಮಾಸ್ಟರ್ ಆಗಿ ಕೆಲಸ ಮಾಡಿರುತ್ತಾರೆ ಅಂಥವರನ್ನು ಎ.ಇ.ಓ ಆಗಿ ಪೋಸ್ಟ್ ಮಾಡಬೇಕು ಎನ್ನುವ ಒಂದು ನಿರ್ಧಾರವನ್ನು ಮಾಡಿದ್ದೇವೆ. ಇದಕ್ಕೋಸ್ಕರ ಹೊಸ ಬಿಲ್ಡಿಂಗ್ ಬಂದಮೇಲೆ ಸ್ವಲ್ಪ ಎಕ್ಸ್‌ಪೀರಿಯನ್ಸ್ ಬರುತ್ತದೆ. ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಲೆವೆಲ್ ಸ್ವಲ್ಪ ಹೆಚ್ಚುತ್ತದೆ ಎನ್ನುವ ದೃಷ್ಟಿಯಿಂದ ಈ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ನಮ್ಮ ಇಲಾಖೆಯಲ್ಲಿ ಸರಿಯಾದ ಮಾಹಿತಿಗಳು, ಒಂದು ತಾಲ್ಲೂಕಿನಲ್ಲಿ ಎಷ್ಟು ಶಾಲೆಗಳು ಇವೆ ಶಾಲೆಗಳು ಯಾರು ಯಾರಿಗೆ ಸೇರಿದಂಥಾದ್ದು, ಸರ್ಕಾರಕ್ಕೆ ಸೇರಿದ್ದೇ ಪ್ರೈವೇಟ್ ಬಾಡಿಗೆ ಸೇರಿದುದೇ, ಅದು ಯಾವ ಸ್ಥಿತಿ

ಯಲ್ಲಿ ಇದೆ, ಏನು ರಿಪೇರಿಯಾಗಬೇಕು ಇವೆಲ್ಲ ಮಾಹಿತಿಗಳು ಪ್ರತಿಯೊಬ್ಬ ಬಿ.ಇ.ಓ ತಾಲ್ಲೋಕ್ ಮ್ಯಾಪನ್ನು ತಯಾರು ಮಾಡಬೇಕು. ಆ ಮ್ಯಾಪ್‌ನಲ್ಲಿ ಯಾವ ಯಾವ ಶಾಲೆಗಳು ಎಲ್ಲೆಲ್ಲಿ ಇವೇ ಎನ್ನುವುದನ್ನು ಮಾರ್ಕ್ ಮಾಡಬೇಕು. ಶಾಲೆಗಳ ಪರಿಸ್ಥಿತಿ ಹೇಗಿದೆ ಎನ್ನತಕ್ಕಂಥದ್ದನ್ನು ಯಾರು ಬಂದು ಕೇಳಿದರೂ ಹೇಳುವಂಥ ಸ್ಥಿತಿಯಲ್ಲಿ ಇರಬೇಕು ಎಂದು ಹೇಳಿ ಪ್ರತಿಯೊಂದು ಸಂಸ್ಥೆಯೂ ಕೂಡ ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಡಬೇಕೆಂದು ಒಂದು ಕಾರ್ಯವನ್ನು ಅಡ್ಮಿನಿಸ್ಟ್ರೇಷನ್ ಕೈಗೊಂಡಿದ್ದೇವೆ. ನಾನಾ ಶಾಲೆಗಳ ಪರಿಸ್ಥಿತಿಯ ಬಗ್ಗೆ ಬಹಳಷ್ಟು ಮಾನ್ಯ ಸದಸ್ಯರು ಹೇಳಿದ್ದಾರೆ. ಶಾಲೆಗಳು ಸರಿಯಾಗಿಲ್ಲ, ಈಗ ೪,೫೦೦ ರೂಪಾಯಿಗಳನ್ನು ಕೊಡುತ್ತಿರುವುದು ಸಾಲುವುದಿಲ್ಲ, ಬಿಲ್ಡಿಂಗ್‌ಗಳನ್ನು ನೀವೇ ಕಟ್ಟಿಕೊಳ್ಳಬೇಕೆಂದು ಹೇಳಬಾರದೆಂದು ಕೂಡ ಹೇಳಿದ್ದಾರೆ. ಇದು ಒಂದು ಸಮಸ್ಯೆಯಾಗಿರುತ್ತದೆ. ನಮ್ಮ ರಾಜ್ಯದಲ್ಲಿ ಶಾಲಾ ಕಟ್ಟಡಗಳ ಬಗ್ಗೆ ಹೇಳುವುದಾದರೆ ೩೩,೩೨೦ ಶಾಲಾ ಕಟ್ಟಡಗಳ ಅಗತ್ಯತೆ ಇರುತ್ತದೆ. ೨೦೪ ಸರ್ಕಾರಿ ಪ್ರೌಢಶಾಲೆಗಳಿಗೆ ಹೆಚ್ಚಿನ ಕೊಠಡಿಗಳು ಬೇಕಾಗಿರುತ್ತದೆ. ಇದನ್ನೆಲ್ಲ ಸರ್ಕಾರ ಏತಕ್ಕೆ ಕಟ್ಟಿಸಬಾರದು ಎನ್ನುವ ವಿಚಾರ ಇರುತ್ತದೆ. ಕಟ್ಟಿಸುವುದು ಉತ್ತಮ. ಸಮಾಜದಲ್ಲಿ ಬರುವ ಹಣವನ್ನು ಸಮಾಜಕ್ಕಾಗಿಯೇ ಸರ್ಕಾರದವರು ಖರ್ಚು ಮಾಡುತ್ತಿರುತ್ತಾರೆ. ಈಗಾಗಲೇ ೧೮೬ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದೆ. ಕಳೆದ ವರ್ಷ ಖರ್ಚು ಮಾಡಿದ್ದು ಒಟ್ಟು ೪೪೯ ಕೋಟಿ ರೂಪಾಯಿಗಳು. ಇನ್ನು ನಮ್ಮ ಖರ್ಚನ್ನು ನಮ್ಮ ಈಗಿನ ಆಯವ್ಯಯದಲ್ಲಿ ಆದಾಯವನ್ನು ನೋಡಿಕೊಂಡು ಎಷ್ಟು ಖರ್ಚು ಮಾಡಬಹುದು ಎನ್ನುವುದರ ಬಗ್ಗೆ ತೀವ್ರ ಆಲೋಚನೆ ಮಾಡತಕ್ಕಂಥ ಸ್ಥಿತಿಗೆ ಸರ್ಕಾರ ಬಂದಿದೆ ಎಂದು ಹೇಳಲು ನನ್ನ ಮನಸ್ಸಿಗೆ ಕಾಣುತ್ತದೆ.

ಈ ಬೃಹತ್ ಪ್ರಮಾಣದ ಕಟ್ಟಡ ಕಟ್ಟುವ ಕಾರ್ಯಕ್ರಮವೇನಿದೆ ಇದನ್ನು ನಾವು ಒಮ್ಮೆಲೇ ಮಾಡುವುದಕ್ಕೆ ಸಾಧ್ಯವಿಲ್ಲ. ಕಟ್ಟಡವನ್ನು ಹಂತಹಂತವಾಗಿ ಕಟ್ಟಬೇಕಾಗುತ್ತದೆ. ಮಾನ್ಯ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಶಾಲಾಕಟ್ಟಡಗಳು ಬೇಕು ಎಂಬ ಬೇಡಿಕೆಯನ್ನು ಇಟ್ಟಿದ್ದಾರೆ. ಆದರೆ ಎಲ್ಲ ಕಡೆಗಳಲ್ಲೂ ಒಂದೇ ಸಾರಿ ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ಸಾಧ್ಯವಿಲ್ಲವೆಂಬುದು ನನ್ನ ನಿವೇದನೆ.

೬-೦೦ ಪಿ.ಎಂ.

ಒಬ್ಬ ಸದಸ್ಯ.—ಹಂತಹಂತವಾಗಿ ಮಾಡಿ.

ಶ್ರೀ ಬಿ. ವಿ. ಕಕ್ಕಿಲಾಯ.—ಹೈಸ್ಕೂಲುಗಳನ್ನು ಪ್ರಾರಂಭ ಮಾಡಲು ಮಂಜೂರಾತಿ ನೀಡುವಾಗ ೫೦ ಸಾವಿರ ರೂಪಾಯಿಯನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆ. ಈ ಹಣವನ್ನಾದರೂ ಕೊಟ್ಟು ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬಹುದಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಆ ಬಗ್ಗೆ ಕೂಡ ನಾವು ಯೋಜನಾಬದ್ಧವಾಗಿ ಯೋಚನೆ ಮಾಡಿದ ಹಾಗೆ ಕಾಣಲಿಲ್ಲ. ಅದಕ್ಕೆ ಕೂಡ ಒಂದು ಸ್ಟ್ರೀಮ್‌ಲೈನ್ ಮಾಡಿ ಇದು ಯಾವ ರೀತಿ ಆಗಬೇಕು, ಇದಕ್ಕೆ ಎಷ್ಟು ಹಣ ಬೇಕು, ಎಷ್ಟು ಹಣವನ್ನು ಎಷ್ಟು ವರ್ಷದಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯ ಎಲ್ಲವನ್ನೂ ನೋಡಿ ಇದರ ಬಗ್ಗೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ಮಾಡುವ ಅಗತ್ಯ ಇದೆ. ಮಾನ್ಯ ಸದಸ್ಯರು ಉಪಾಧ್ಯಾಯರುಗಳ ಬಗ್ಗೆ ಕೆಲವು ಮಾತುಗಳನ್ನಾಡಿದ್ದಾರೆ. ಡಿ.ಎಲ್.ಆರ್.ಸಿ. ಕಮಿಟಿಗಳಾಗಿವೆ ; ಇನ್ನೂ ಕೂಡ ರೆಕ್ರೂಟ್‌ಮೆಂಟ್ ಆಗಿಲ್ಲ ಎಂಬ ವಿಚಾರವನ್ನೂ ಹೇಳಿದ್ದಾರೆ. ಡಿ.ಎಲ್.ಆರ್.ಸಿ. ಕಮಿಟಿಗಳನ್ನು ನಾವು ಮಾಡಿದ್ದೇವೆ. ಕೆಲವು ಜಿಲ್ಲೆಗಳಲ್ಲಿ ಮೊದಲೇ ರೆಕ್ರೂಟ್‌ಮೆಂಟ್ ಆಗಿತ್ತು. ೧೯೭೮ನೇ ಇಸವಿಯಲ್ಲಿ ಏನು ರೆಕ್ರೂಟ್‌ಮೆಂಟ್ ಆಗಿತ್ತೋ ಅದನ್ನೇ ನಾವು ಮಂಜೂರು ಮಾಡಿದ್ದೇವೆ. ಕೆಲವು ಜಿಲ್ಲೆಗಳಲ್ಲಿ ಇನ್ನೂ ರೆಕ್ರೂಟ್‌ಮೆಂಟ್ ಆಗಿರಲಿಲ್ಲ. ಕೆಲವು ಕಡೆಗಳಲ್ಲಿ ಅಪ್ಲಿಕೇಷನ್ಸ್ ಕರೆದು ಇಂಟರ್‌ವ್ಯೂ ಕೂಡ ನಡೆದಿದೆ. ಕೆಲವು ಕಡೆ ಇಂಟರ್‌ವ್ಯೂಗಳೇ ನಡೆದಿಲ್ಲ. ನಾವು ಈಗಾಗಲೇ ಆದೇಶ ನೀಡಿ ಯಾವಯಾವ ಅರ್ಜಿಗಳು ಹಿಂದೆ ಬಂದಿವೆ ಅದನ್ನೇ ಪರಿಶೀಲನೆ ಮಾಡಿ ಅವರನ್ನೇ ಕರೆದು ರೆಕ್ರೂಟ್‌ಮೆಂಟ್ ಮಾಡಬೇಕೆಂದು ತಿಳಿಸಿದ್ದೇವೆ. ಆದಷ್ಟು ತೀವ್ರವಾಗಿ ಕೆಲಸವನ್ನು ಮಾಡಬೇಕು ಎಂಬ ದೃಷ್ಟಿಯಿಂದ ಹೇಳಿದ್ದೇವೆ ಮತ್ತು ಇದರ ಜೊತೆಗೆ ಇನ್ನೂ ಅಡಿಷನಲ್ ಪೋಸ್ಟ್‌ಗಳನ್ನು ಎಲ್ಲಾ ಜಿಲ್ಲೆಗಳಿಗೂ ನಾವು ಕೊಟ್ಟಿದ್ದೇವೆ. ಎಲ್ಲ ಜಿಲ್ಲೆಗಳಲ್ಲಿ ಅಡಿಷನಲ್ ಪೋಸ್ಟ್‌ಗೆ ಪ್ರತ್ಯೇಕವಾಗಿ ಅರ್ಜಿಗಳನ್ನು ಕರೆದು ಅದಕ್ಕೆ ಯಾರು ಅರ್ಜಿ ಹಾಕಿಕೊಳ್ಳುತ್ತಾರೋ ಅವರಿಂದ ಇಂಟರ್‌ವ್ಯೂ ನಡೆಸಿ ಈ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂಬ ಆದೇಶವನ್ನೂ ಕೊಟ್ಟಿದ್ದೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸರ್ಕಾರಿ ಪ್ರಾಥಮಿಕ ಶಾಲೆಗಳು ತಮ್ಮ ಲೆಕ್ಕದ ಪ್ರಕಾರ ೩೨,೬೩೬. ಇದರಲ್ಲಿ ಅಧ್ಯಾಪಕರ ಸಂಖ್ಯೆ ೯೩,೦೦೦. ಅಂದರೆ ಒಂದೊಂದು ಶಾಲೆಗಳಿಗೆ ಸರಾಸರಿ ೩ ಅಧ್ಯಾಪಕರಾಗುತ್ತಾರೆ. ಆದರೆ ಖಾಸಗಿ ಪ್ರಾಥಮಿಕ ಶಾಲೆಗಳು ೧೯೦೦. ಅಲ್ಲಿರುವ ಅಧ್ಯಾಪಕರ ಸಂಖ್ಯೆ ೧೩, ೪೬೦ ; ಅಂದರೆ ಸರಾಸರಿ ಒಂದೊಂದು ಶಾಲೆಗೆ ೧೨ ಅಧ್ಯಾಪಕರಾಗುತ್ತಾರೆ. ಖಾಸಗಿ ಶಾಲೆಗಳಲ್ಲಿರುವ ಅಧ್ಯಾಪಕರಿಗೂ ಕೂಡ ನೀವೇ ಸಂಬಳಗಳನ್ನು ಕೊಡುತ್ತೀರಿ. ಸರ್ಕಾರೀ ಶಾಲೆಗಳಲ್ಲಿರುವ ಅಧ್ಯಾಪಕರಿಗೂ ಕೂಡ ನೀವೇ ಸಂಬಳಗಳನ್ನು ಕೊಡುತ್ತೀರಿ. ಆದರೆ ಖಾಸಗಿ ಶಾಲೆಗಳಿಗೆ ಎಷ್ಟು ಉಪಾಧ್ಯಾಯರನ್ನು ಕೊಟ್ಟಿದ್ದೀರೋ ಅದರ $\frac{1}{4}$ ಭಾಗವನ್ನೂ ಸರ್ಕಾರಿ ಶಾಲೆಗಳಿಗೆ ಕೊಟ್ಟಿಲ್ಲ. ಸರ್ಕಾರೀ ಶಾಲೆಗೂ, ಖಾಸಗಿ ಶಾಲೆಗೂ ಇಷ್ಟೊಂದು ಅಂತರ ಏಕೆ ಮಾಡಿದ್ದೀರಿ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಖಾಸಗಿ ಶಾಲೆಗಳಲ್ಲಿ ಏನು ರೆಕ್ರೂಟ್‌ಮೆಂಟ್ ಮಾಡಿಕೊಳ್ಳುತ್ತಾರೋ ಅದನ್ನು ನಾವು ಮಂಜೂರು ಮಾಡಿ ಕಳಿಸುತ್ತೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಖಾಸಗಿ ಶಾಲೆಗಳವರು ತಮಗೆ ಬೇಕಾದವರನ್ನೆಲ್ಲಾ ಸೇರಿಸಿಕೊಳ್ಳುತ್ತಾರೆ. ಆದರೆ ನೀವು ಅವರಿಗೆ ಸಂಬಳಗಳನ್ನು ಕೊಡುತ್ತೀರಿ,

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಬೇಕಾದವರನ್ನೆಲ್ಲಾ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆ ಒಂದು ಪ್ಯಾಟ್ರನ್ ಇದೆ. ಅದೇ ರೀತಿ ಸರ್ಕಾರೀ ಶಾಲೆಗಳಲ್ಲೂ ಆಗಬೇಕಾಗಿದೆ. ಆದರೆ ಇಲ್ಲಿ ಇದಾಗುವುದು ತಡವಾಗುತ್ತಿದೆ. ಅಷ್ಟೇ ವ್ಯತ್ಯಾಸ.

ಛೇರ್ಮನ್‌ರವರು.—ಮಾನ್ಯ ಸದಸ್ಯರುಗಳು ಸ್ಪಷ್ಟೀಕರಣಗಳನ್ನು ಕೇಳುವುದಿದ್ದರೆ ಒಂದು ಕಡೆ ಗುರುತು ಹಾಕಿಕೊಂಡಿದ್ದು ಮಾನ್ಯ ಮಂತ್ರಿಗಳ ಉತ್ತರ ಮುಗಿದ ಮೇಲೆ ಕೇಳಬಹುದು. ಮಧ್ಯೆ ಮಧ್ಯೆ ಎದ್ದು ಮಾತನಾಡುವುದು ಬೇಡ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಉಪಾಧ್ಯಾಯರುಗಳ ಎಫಿಷಿಯೆನ್ಸಿ ಹೆಚ್ಚಾಗಬೇಕು ಎಂಬ ದೃಷ್ಟಿಯಿಂದ ಟೀಚರ್ಸ್ ಟ್ರೈನಿಂಗ್ ಕಾಲೇಜಿಗೆ ಸೇರಬೇಕಾದರೆ...............

ಶ್ರೀ ಎಚ್. ಡಿ. ಚೌಡಯ್ಯ.—ಡಿ.ಎಲ್.ಆರ್.ಸಿ. ಬಗ್ಗೆ ಪೂರ್ತಿ ಹೇಳಲಿಲ್ಲ. ಏತಕ್ಕೋಸ್ಕರ ಕೆಲಸ ನಡೆಯುವುದು ನಿಧಾನವಾಯಿತು, ಮುಂದೆ ಎಷ್ಟು ದಿವಸದಲ್ಲಿ ಈ ಕೆಲಸವನ್ನು ಮುಗಿಸುತ್ತಾರೆ ಎಂಬ ಬಗ್ಗೆ ಸ್ಪಷ್ಟೀಕರಣ ಕೊಡಲಿ. ಆದೇಶ ಹೋಗಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ, ಆದರ ಮೊನ್ನೆವರೆಗೂ ನಮ್ಮ ಕಡೆಗಳಿಗೆ ಆದೇಶ ಹೋಗಿಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಆದೇಶ ಹೋಗಿದೆ. ಈ ಕೆಲಸ ಬೇಗ ಆಗಬೇಕು ಎಂಬ ದೃಷ್ಟಿಯಿಂದ ಕ್ರಮ ತೆಗೆದುಕೊಂಡಿದ್ದೇವೆ. ಉದಾಹರಣೆಗೆ ಮೈಸೂರಿನಲ್ಲಿ ಮೊದಲು ರೆಕ್ರೂಟ್‌ಮೆಂಟ್ ಆಗಲಿಲ್ಲ. ಆದ್ದರಿಂದ ಹಿಂದೆ ಯಾವ ಅರ್ಜಿಗಳನ್ನು ಕರೆದಿದ್ದರೋ ಅದೇ ಅರ್ಜಿಯನ್ನು ಈಗ ಕನ್‌ಸಿಡರ್ ಮಾಡಬೇಕು ಎಂದು ಹೇಳಿದ್ದೇವೆ. ಈ ಬಗ್ಗೆ ಆದೇಶವನ್ನು ನಾವು ಕಳಿಸಿದ್ದೇವೆ. ಈಗ ಎಲ್ಲಾ ಕಡೆಗೂ ಅದು ತಲುಪಿದೆ. ಈ ಕೆಲಸ ಆದಷ್ಟು ಬೇಗ ಆಗಬೇಕೆಂಬುದೇ ನಮ್ಮ ಉದ್ದೇಶ ಕೂಡ ಆಗಿದೆ. ಆ ದೃಷ್ಟಿಯಿಂದಲೇ ನಾವು ಈ ರೀತಿ ಆದೇಶಗಳನ್ನು ಕಳುಹಿಸಿ ಆದಷ್ಟು ಬೇಗ ಮಾಡಬೇಕೆಂದು ಎಲ್ಲರಿಗೂ ತಿಳಿಸಿದ್ದೇವೆ. You said that there is some doubt in the minds of the D.L.R C. as to how to proceed. You also mentioned regarding applications received earlier. For that I have given a reply that it will be done with the utmost urgency. That is all that I can assure the hon'ble member.

So far as admission to B. ED: and TTC course is concerned, the minimum marks required was 35%. For other courses the minimum marks required is more. For instance, Engineering the minimum required is 50%, for Medical 50%. I do not know for the teachers training schools it should be only 35% Why can't we get good graduates or good S.S.L.Cs for the teachers training ! So we have increased the minimum marks required for the teachers training schools. 50% of

the aggregate in the final year, that is, any graduate securing 50% of the aggregate and he should have passed in the first attempt and 50% marks in SSLC for TTC. However, for the reservation quota if we do not get students with this mark, then it will be suitably reduced.

One more thing which I ought to have told earlier is the talk about bogus teachers. Whatever instances that were brought to my notice have been referred to the Vigilance Commission. I would also mention that in 1976 combing operation was done in Bangalore in the matter of malpractices done in private aided institutions. It was taken up under the leadership of the Additional Director Sri Mallappa. I learn that nearly 800 impersonations were detected and cases were booked.

SMT. S. PRAMILA.—It must be more. We will say at the time of examination.

SRI B. SUBBIAH SHETTY. It is easy to say it is in more places. Please tell us where it is and in which place. I welcome it because you will be helping the Government and the society.

Another matter which was raised was regarding the pre-primary schools. The importance of pre-primary schools is not lost by the Government. We appreciate it and that is why in 1979 we have sanctioned 300 pre-primary schools.

One other matter which was raised was regarding the VII Standard examination and also the P.U.C. examination. Hon. mem ber Sri Ramdev pointed out that I had given a statement regarding abolition of the I-Year P.U.C. examination. I do not remember to have given any statement like that. What is happening is several times I see some statement in the Press purported to have been given by me. Some people come to me and put certain questions and they go outside and give the statement on my behalf stating that the Education Minister told them that he would abolish the P.U.C. examination. But if it is verified, it is not the statement of the Education Minister, but it is somebody else who give the statement. I do not know the norms of publication in the Press. Certain times it creates unnecessary confusi n. The Press should find out the authenticity of the statement before it is published. Recently it happened in Bangalore also about the Valuators. They gave a statement saying that the Education Minister assured them, and they also included the Chief Minister to boost up the statement. However, I would like to inform the House that the Government is considering the abolition of the VII Standard Examination and the I-Year P.U.C. examination. It has been recommended by the P.U.C. Board that the I-Year P.U.C. exam-

ination could be abolished. The Government is considering this aspect and a decision will be taken very soon regarding these examinations.

Certain things were said about certain schools and rightly too describing them as education shops. Lot of complaints are there about certain schools. The hon. members know that the Government is not armed to stop such mal-practices. During the last Budget discussion I had assured the House that a comprehensive Education Bill would be introduced, and a Committee was also appointed in the last Budget Session, the Committee have gone into this question, collected evidence and have submitted a draft Bill. The Government are studying this draft Bill, and I would also like to take the hon. members of this House and also the educationists into confidence before introducing that Bill in this August House. I hope that by the introduction and passing of this Bill such malpractices could be stopped because the Government would be armed by the Bill to stop such mal-practices.

Another point that was raised during the discussion, was regarding universalisation of education, college education, adult education and drop-outs. All these aspects were discussed and several suggestions have been given. What I see now-a-days is that schools are being considered either as Government schools or some body elses schools; schools are not considered as 'our schools' by the public at large. Unless we get the feeling that the schools are 'our schools', we may not make much headway in the field of education. A school is not like any Government building or office. A school is the second home for our children. The children spend most of their awakened hours in the school. That kind of a feeling should come in the minds of the public. I also feel that if primary education or education by and large has to succeed it must become a mass movement or a peoples' movement by itself. With this idea, the Government is not only thinking but has almost taken a decision and are issuing orders to form what are known as 'gramashikshana samithi' consisting of 11 members, and this samithi would be in charge of all the schools within the panchayat area and if it is in a Corporation or municipality or division area, it would consist of members who are interested in education. This is one of the basic idea of the membership of this samithi. Among the members who are interested in education members belonging to Scheduled Castes, minority communities, women and members belonging to backward classes will be given representation in these Samithies. Education is not the business of a certain class of people; education is the business of the entire community at large. These Gramashikshana Samithies will be the

